# ಯುಗರಶ್ಮಿ

★ ಇಸ್ಲಾಂ ಧರ್ಮದಲ್ಲಿ ವಿವಾಹ ವಿಚ್ಛೇದನ ನಿಯಮ

★ ದೇವನೂ ಸೃಷ್ಟಿಯೂ

★ ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ

★ ಉಪಗ್ರಹ ಮೂಲಕ ಐದು ಭೂಖಂಡಗಳಲ್ಲಿ ಖಲೀಫರ ಖುತ್ಬ ಪ್ರಸಾರ

★ ಉತ್ತರ ಭೂಶಿರದಲ್ಲಿ ಪ್ರಥಮ ಜುಮುಅ

★ ಇಮಾಂ ಮಹ್‌ದಿಯ ಕುರುಹುಗಳು

ಅಲ್ಲಾಹನು ಯಾವ ವ್ಯಕ್ತಿಯ ಮೇಲೂ ಅವನ ಶಕ್ತಿಗೆ ಮೀರಿದ ಹೊಣೆಗಾರಿಕೆಯನ್ನು ಹೊರಿಸುವುದಿಲ್ಲ. ಅವನು ಮಾಡಿದ ಸತ್ಕರ್ಮದ ಪ್ರತಿಫಲ ಅವನಿಗೆ ಲಭಿಸುವುದು. ಅವನು ಮಾಡಿದ ದುಷ್ಕರ್ಮಗಳ ಪ್ರತಿಫಲವನ್ನೂ ಅವನು ಅನುಭವಿಸಬೇಕಾಗುತ್ತದೆ.

—ಪವಿತ್ರ ಖುರ್‌ಆನ್ (2:287)

ತ್ರೈಮಾಸಿಕ

ಡಿಸೆಂಬರ್ 1993

ಬೆಲೆ: ರೂ. 3-00

# ಯುಗರಶ್ಮಿ ತ್ರೈಮಾಸಿಕ

**10-23-1008/1, ಅನ್ಸಾರಿ ರಸ್ತೆ, ಬಂದರ್, ಮಂಗಳೂರು-575 001.**

ಬಿಡಿಪ್ರತಿ : ರೂ. 3–00

ವಾರ್ಷಿಕ ಚಂದಾ : ರೂ. 12-00

ಅಂಚೆ ಮೂಲಕ : ರೂ. 14-00

**ವಿಷಯ ಸೂಚಿಕೆ :**

| | | ಪುಟ |
|---|---|---|
| * ಭೂಕಂಪಗಳೂ, ಜಲಪ್ರಳಯಗಳೂ | ... | 1 |
| * ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು | ... | 2 |
| * ಇಸ್ಲಾಂ ಧರ್ಮದಲ್ಲಿ ವಿವಾಹ ವಿಚ್ಛೇದನ ನಿಯಮ | ... | 3 |
| * ದೇವನೂ ಸೃಷ್ಟಿಯೂ | ... | 16 |
| * ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ | ... | 19 |
| * ಉಪಗ್ರಹ ಮೂಲಕ ಐದು ಭೂಖಂಡಗಳಲ್ಲಿ ಖಲೀಫರ ಖುತ್ಬ ಪ್ರಸಾರ | ... | 22 |
| * ಉತ್ತರ ಭೂಶಿರದಲ್ಲಿ ಪ್ರಥಮ ಜುಮುಅ | ... | 26 |
| * ಇಮಾಂ ಮಹ್‌ದಿಯ ಕುರುಹುಗಳು | ... | 29 |
| * ಅಹ್ಮದಿಯಾ ವಾರ್ತೆಗಳು | ... | 36 |
| * ಕವಿತೆ: ಸತ್ಯ ಸಂದೇಶ | ... | 41 |
| * ನಿಧನ ವಾರ್ತೆ | ... | 42 |

## Statement about ownership and other particulars about the Newspaper YUGARASHMI Quarterly

**Form IV [See Rule 8]**

| | | |
|---|---|---|
| 1 | Place of publication | Mangalore |
| 2 | Periodicity of its publication | Quarterly |
| 3 | Printer's name | U. Ramesh Anchan |
| | Whether citizen of India? | Yes |
| | Address | Karavali Printers, Azizuddin Road Bunder, Mangalore-575 001 |
| 4 | Publisher's name | Muhummed Yusuf |
| | Whether citizen of India? | Yes |
| | Address | 10-23-1008/1, Ist Floor, Ansari Road Bunder, Mangalore-575 001. |
| 5 | Editor's name | Muhammad Yusuf |
| | Whether citizen of India? | Yes |
| | Address | 10-23-1008/1, Ist Floor, Ansari Road Bunder, Mangalore-575 001. |
| 6 | Names and addresses of individuals who own the newspaper and partners or shareholders holding more than one percent of the capital | Jamath Ahmadiya, 10-23-1008/1, Ansari Road, Bunder, Mangalore-575 001. |

I, Muhammad Yusuf hereby declare that the particulars given above are true to the best of my knowledge and belief.

Dated, 1-12-1993

Sd/- **Muhammad Yusuf**

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ಸಂಪಾದಕ : ಮುಹಮ್ಮದ್ ಯೂಸುಫ್

| ಸಂಪುಟ: 18 | ಡಿಸೆಂಬರ್ 1993 | ಫತಹ್ 1372 | ಸಂಚಿಕೆ: 1, 2 |
|---|---|---|---|


# ಭೂಕಂಪಗಳೂ ಜಲಪ್ರಳಯಗಳೂ

"ನೆನಪಿಡಿರಿ, ಈ ಭೂಲೋಕದಲ್ಲಿ ಅನೇಕ ಭೂಕಂಪಗಳು ಘಟಿಸಲಿವೆಯೆಂಬ ಸೂಚನೆಯನ್ನು ದೇವನು ನನಗೆ ಅರುಹಿದ್ದಾನೆ. ನಾನು ಮುಂಚಿತವಾಗಿಯೇ ಹೇಳಿದ್ದಂತೆ, ಅಮೇರಿಕ ಮತ್ತು ಯುರೋಪು ಭೂಕಂಪಗಳಿಗೆ ಗುರಿಯಾಗಿವೆ. ಹಾಗೆಯೇ ಏಷ್ಯಾ ಸಹ ಈಡಾಗುವುದು ಖಂಡಿತ. ಅವುಗಳಲ್ಲಿ ಕೆಲವು ಪ್ರಳಯಕಾಲದ ಭಯಂಕರವಾದ ಸರ್ವನಾಶಕ್ಕೆ ಸಮಾನವಾಗಿರಬಹುದು. ಹಲವಾರು ಮಂದಿ ಮಡಿಯುವರು. ರಕ್ತದ ಹೊಳೆಗಳೇ ಹರಿಯುವುವು.

"ಮನುಷ್ಯನುಂಟಾದ ಕಾಲದಿಂದ ಇಷ್ಟರ ವರೆಗೆ ಸಂಭವಿಸದ ರೀತಿಯ ಅತ್ಯಂತ ಭಯಂಕರವಾದ ನಾಶವು ಉಂಟಾಗುವುದು. ಭೂಮಿಯ ನಾನಾ ಭಾಗಗಳು ಅಲ್ಲಿ ಎಂದೂ ಜನವಾಸವಿರಲಿಲ್ಲವೆಂದು ಭಾಸವಾಗುವಷ್ಟರ ಮಟ್ಟಿಗೆ ಅಡಿಮೇಲಾಗಿ ಸರ್ವನಾಶವಾಗುವುವು. ಅದರೊಂದಿಗೆ ಭೂಮಿಯಲ್ಲಿಯೂ ಆಕಾಶದಲ್ಲಿಯೂ ಭಯಾನಕವಾದ ನಾಶಗಳು ಘಟಿಸುವುವು. ವಿವೇಕಿಗಳಾದ ಜನರು ಇವುಗಳ ಅಸಾಮಾನ್ಯತೆಯನ್ನು ಗ್ರಹಿಸುವರು. ಅವುಗಳ ಕುರಿತು ವೈಜ್ಞಾನಿಕ ಹಾಗೂ ತತ್ವಶಾಸ್ತ್ರ ಗ್ರಂಥಮಾಲೆಗಳಿಂದ ಏನನ್ನೂ ಅರಿಯಲು ಸಾಧ್ಯವಾಗಲಿಕ್ಕಿಲ್ಲ, ಆಗ ಜನರು ಮುಂದೇನು ಸಂಭವಿಸಬಹುದೆಂದು ಕಳವಳಗೊಳ್ಳುವರು. ಅನೇಕರು ರಕ್ಷಿಸಲ್ಪಡುವರು; ಅನೇಕರು ನಾಶವಾಗುವರು. ಅಂತಹ ದಿನಗಳು ಅತಿ ಸಮೀಪವಾಗಿವೆ. ಅಷ್ಟೇಕೆ, ಬಾಗಿಲಲ್ಲೇ ಬಂದು ನಿಂತಿವೆ. ಒಂದು ಮಹಾನಾಶವನ್ನು ಈ ಲೋಕವು ಕಣ್ಣಾರೆ ಕಾಣಲಿದೆ. ಭೂಕಂಪಗಳು ಮಾತ್ರವಲ್ಲ, ಭೂಮಿಯಲ್ಲೂ ಆಕಾಶದಲ್ಲೂ ಇನ್ನೂ ಭಯಂಕರವಾದ ವಿಪತ್ತುಗಳು ಘಟಿಸುವುವು. ಮನುಷ್ಯರು ಪರಮಾತ್ಮನನ್ನು ಮರೆತು, ತಮ್ಮ ಪ್ರಯತ್ನ ಹಾಗೂ ಹೃದಯದ ಸಕಲ ಆಶಯಗಳನ್ನು ಕೇವಲ ಲೌಕಿಕ ಆಡಂಭರಗಳಿಗಾಗಿ ಮೀಸಲಾಗಿರಿಸಿದ ಕಾರಣದಿಂದಾಗಿ ಇವೆಲ್ಲ ಸಂಭವಿಸುವುವು.... 'ಓರ್ವ ಪ್ರವಾದಿಯನ್ನು ಕಳುಹಿಸದೆ ನಾವು ಜನರನ್ನು ಶಿಕ್ಷಿಸುವುದಿಲ್ಲ' ಎಂದು ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ (17:16) ಹೇಳಿರುವನು.

"ಪಶ್ಚಾತ್ತಾಪಪಡುವವರು ರಕ್ಷಣೆಯನ್ನು ಹೊಂದುವರು. ಆಪತ್ತುಗಳಿಗೆ ಭಯಪಡುವವರೊಡನೆ ಕರುಣೆ ತೋರಿಸಲ್ಪಡುವುದು. ಈ ಕಷ್ಟ ಪರಂಪರೆಗಳಿಗೆ ಗುರಿಯಾಗಲಾರೆವೆಂದು ನೀವು ಭಾವಿಸುವಿರಾ? ಅಥವಾ

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

● ಅತ್ಯಂತ ಸುಸ್ವಭಾವ ಹೊಂದಿದವನು ಅಂತಿಮ ವಿಚಾರಣೆಯ ದಿನ ನನಗೆ ಅತಿ ಸಮೀಪವಾಗಿರುವನು. ನಿಮ್ಮ ಪೈಕಿ ಡಂಬಕೊಚ್ಚುವ ಬಡಾಯಿಕೋರರು ಮತ್ತು ದುರಹಂಕಾರಿಗಳು ಅಂತಿಮ ವಿಚಾರಣೆಯ ದಿನ ಅತ್ಯಂತ ತಿರಸ್ಕಾರಕ್ಕೆ ಪಾತ್ರರೂ ನನ್ನಿಂದ ಅತ್ಯಂತ ದೂರಸರಿಸಲ್ಪಟ್ಟವರೂ ಆಗಿರುವರು.

● ನಾನು ಎಲ್ಲ ವಿಧದ ಉತ್ತಮ ಸ್ವಭಾವ ಗುಣಗಳನ್ನು ಪರಿಪೂರ್ಣಗೊಳಿಸಲು ಅಲ್ಲಾಹನಿಂದ ಕಳುಹಿಸಲ್ಪಟ್ಟಿರುವೆನು.

● ಒಬ್ಬ ಸತ್ಯವಿಶ್ವಾಸಿಯನ್ನು ಈ ಲೋಕದಲ್ಲಿ ಆತನ ಸಂಕಷ್ಟಗಳಿಂದ ಬಿಡುಗಡೆಗೊಳಿಸಿದರೆ ಅಂತಿಮ ವಿಚಾರಣೆಯ ದಿನ ಅಲ್ಲಾಹನು ಹಾಗೆ ಮಾಡುವವನ ಸಂಕಷ್ಟಗಳನ್ನು ನಿವಾರಿಸುವನು.

● ಜೀವಿತದಲ್ಲಿ ಕಷ್ಟಕ್ಕೊಳಗಾದವರಿಗೆ ಅವರ ಜೀವನ ಸುಲಭಗೊಳ್ಳುವಂತೆ ಯಾರಾದರೂ ಮಾಡಿದರೆ ಅವರಿಗೆ ಇಹಲೋಕದಲ್ಲೂ ಪರಲೋಕದಲ್ಲೂ ಅಲ್ಲಾಹನು ಸುಖ ನೀಡುವನು.

● ಒಬ್ಬ ಸತ್ಯವಿಶ್ವಾಸಿಯ ಬಲಹೀನತೆಯನ್ನು ಮರೆಮಾಡುವವನಿಗೆ ಅಲ್ಲಾಹನು ಈ ಲೋಕದಲ್ಲೂ ಪರಲೋಕದಲ್ಲೂ ಮರೆಯನ್ನು ದಯಪಾಲಿಸುವನು.

● ಯಾರು ತನ್ನ ಸಹೋದರನಿಗೆ ಸಹಾಯ ಮಾಡುತ್ತಾನೋ ಆತನ ಸಹಾಯಕ್ಕೆ ಅಲ್ಲಾಹನಿರುತ್ತಾನೆ.

---

ಉಪಾಯದಿಂದ ಸ್ವಯಂ ರಕ್ಷಣೆ ಪಡೆಯಲು ನಿಮಗೆ ಸಾಧ್ಯವಿದೆಯೇ? ಎಂದಿಗೂ ಸಾಧ್ಯವಿಲ್ಲ, ಅಂದು ಮನುಷ್ಯರ ಎಲ್ಲ ಯೋಜನೆಗಳು ಪರಾಜಯಗೊಳ್ಳುವುವು. ಅಮೇರಿಕದಲ್ಲಿ ಮತ್ತು ಇನ್ನಿತರ ಭೂಖಂಡಗಳಲ್ಲಿ ಭೂಕಂಪಗಳಾದರೂ ನಿಮ್ಮ ರಾಜ್ಯವು ಸುರಕ್ಷಿತವಾಗಿಯೇ ಇರುವುದೆಂದು ಭಾವಿಸಬೇಡಿ. ಅದಕ್ಕಿಂತಲೂ ಅತ್ಯಂತ ದಾರುಣವಾದ ಕಷ್ಟನಷ್ಟಗಳಿಗೆ ನೀವು ಗುರಿಯಾಗಬೇಕಾದೀತು.

"ಎಲೈ ಯುರೋಪಿನ ಜನಾಂಗಗಳೇ, ನೀವು ಸುರಕ್ಷಿತರಲ್ಲ. ಎಲೈ ಏಷ್ಯಾದ ಜನಾಂಗಗಳೇ, ನೀವು ಸಹ ಸುರಕ್ಷಿತರಲ್ಲ. ಎಲೈ ದ್ವೀಪನಿವಾಸಿಗಳೇ, ನಿಮ್ಮ ಸ್ವಯಂ ಕಲ್ಪಿತ ದೇವರುಗಳು ಆ ದಿನದಂದು ನಿಮ್ಮ ರಕ್ಷಣೆಗೆ ಬರಲಾರರು. ದೊಡ್ಡ ದೊಡ್ಡ ನಗರಗಳು ನಾಶವಾಗುವುದನ್ನು ಮತ್ತು ಜನಭರಿತ ಪ್ರದೇಶಗಳು ಜನಶೂನ್ಯವಾಗುವ ಭವಿಷ್ಯದ ಚಿತ್ರವನ್ನು ನಾನು ಈಗಲೇ ಕಾಣುತ್ತಿದ್ದೇನೆ. ಆ ಸರ್ವಾಧಿಪತಿಯಾದ ದೇವನು ಒಂದು ದೀರ್ಘಕಾಲದ ವರೆಗೆ ಮೌನಾವಲಂಬಿಯಾಗಿದ್ದನು. ಅವನ ಸಮ್ಮುಖದಲ್ಲೇ ಹೇಯವಾದ ಅನೇಕ ಅತಿ ದುಷ್ಕೃತ್ಯಗಳು ನಡೆಯುತ್ತಿದ್ದರೂ ಅವನು ಸುಮ್ಮಗಿದ್ದನು. ಆದರೆ ಈಗ ಅವನು ಭಯಂಕರ ಸ್ವರೂಪದಿಂದ ತನ್ನ ಮುಖವನ್ನು ತೋರಿಸುವನು. ಅಂತಹ ಕಾಲ ದೂರವಿಲ್ಲ! ಕಿವಿ ಇದ್ದವರು ಕೇಳಿಕೊಳ್ಳಲಿ! ನಾನು ಎಲ್ಲರನ್ನೂ ದೇವರ ರಕ್ಷಣೆಯಲ್ಲಿ ಒಂದುಗೂಡಿಸಲಿಕ್ಕೆ ಕೈಲಾದಷ್ಟು ಪ್ರಯತ್ನಿಸಿದೆ. ಆದರೆ ನಿಯತಿ ನಿಯಮ ಪೂರ್ಣಗೊಳ್ಳಬೇಕಲ್ಲವೇ? ನಾನು ಸತ್ಯವಾಗಿಯೂ ನಿಮ್ಮೊಡನೆ ಹೇಳುತ್ತೇನೆ: ಈ ರಾಜ್ಯದ ಸರದಿ ಸಹ ಸಮೀಪಿಸುತ್ತಿದೆ. ನೋಹಾ ಪ್ರವಾದಿಯ ಕಾಲ* ನಿಮ್ಮ ಕಣ್ಣಮುಂದೆ ಪ್ರತ್ಯಕ್ಷವಾಗುವುದು. ಪ್ರವಾದಿ ಲೂತ್‌ರವರ ರಾಜ್ಯದಲ್ಲಿ ಸಂಭವಿಸಿದ್ದನ್ನು** ನಿಮ್ಮ ಸ್ವಂತ ಕಣ್ಣುಗಳಿಂದ ಕಾಣುವಿರಿ. ಆದರೆ ಪರಮಾತ್ಮನು ತನ್ನ ಕೋಪವನ್ನು ನಿಧಾನವಾಗಿ ತೋರಿಸುವನು. ನಿಮ್ಮ ಮೇಲೆ ದಯಾದೃಷ್ಟಿಯನ್ನು ಬೀರುವಂತೆ ನೀವು ಅವನನ್ನು ಪಶ್ಚಾತ್ತಾಪದಿಂದ ಪ್ರಾರ್ಥಿಸಿರಿ. ದೇವರನ್ನು ಮರೆತವನು ಮನುಷ್ಯನಲ್ಲ; ಕ್ರಿಮಿಕೀಟಕ್ಕೆ ಸಮಾನನು ದೇವನಿಗೆ ಯಾರು ಹೆದರುವುದಿಲ್ಲವೋ ಅವನು ಸತ್ತಂತೆಯೇ ಸರಿ; ಜೀವವಿಲ್ಲದವನು." (ಹಖೀಖತುಲ್ ವಹ್ಯ್, 1907 ಪುಟ: 256–257)

—ಹಜ್ರತ್ ಮಿರ್ಜಾ ಗುಲಾಂ ಅಹ್ಮದ್
ಅಹ್ಮದಿಯಾ ಸಂಘಟನೆಯ ಸ್ಥಾಪಕರು

---

* ಭಯಂಕರ ಜಲಪ್ರಳಯ

** ಭೀಕರ ಭೂಕಂಪ

# ಇಸ್ಲಾಂ ಧರ್ಮದಲ್ಲಿ
# ವಿವಾಹ ವಿಚ್ಛೇದನ ನಿಯಮ

★ ಮೌಲಾನ ಬಿ. ಅಬ್ದುಲ್ಲಾಹ್ H. A.

ಇದು ಅಹ್ಮದಿಯಾ ಜಮಾಅತಿನ ಮಲೆಯಾಳಂ ಮುಖವಾಣಿ "ಸತ್ಯದೂತನ್" ಮಾಸ ಪತ್ರಿಕೆಯಲ್ಲಿ 1944 ನವೆಂಬರ್‌ನಿಂದ 1945 ಮಾರ್ಚ್ ವರೆಗೆ ಪ್ರಕಟವಾದ ಲೇಖನದ ಅನುವಾದ ವಾಗಿದೆ. ಇದು "ಯುಗರಶ್ಮಿ"ಯ 1985 ಜನವರಿ ಸಂಚಿಕೆಯಲ್ಲಿ ಮೊದಲೊಮ್ಮೆ ಪ್ರಕಟವಾಗಿತ್ತು. ಈಗ ಅದನ್ನು ಪುನರ್ಮುದ್ರಿಸುವುದು ಉಚಿತವೆಂದು ಭಾವಿಸುತ್ತೇವೆ.

—ಸಂಪಾದಕ

ಇಂದು ಮುಸ್ಲಿಮರು ಇಸ್ಲಾಮೀ ಉಪದೇಶ ಗಳೆಂದು ಅನುಸರಿಸುತ್ತಿರುವ ಸಂಪ್ರದಾಯಗಳೂ ಆಚಾರ ಗಳೂ ಯಥಾರ್ಥದಲ್ಲಿ ಇಸ್ಲಾಮಿಕವೆಂದಾಗಲಿ, ಸರಕಾರವು ಮುಸ್ಲಿಂ ನಿಯಮಗಳೆಂದು ಅಂಗೀಕರಿಸಿರುವುದೆಲ್ಲ ಇಸ್ಲಾ ಮಿನ ಅಧ್ಯಾಪನಗಳ ಸಾರವೆಂದಾಗಲಿ ಭಾವಿಸುವುದು ಸರಿಯಲ್ಲ. ವಿವಾಹ ವಿಚ್ಛೇದನ, ವಾರೀಸು ಹಕ್ಕು ಮುಂತಾದ ಹಲವು ವಿಚಾರಗಳಲ್ಲಿ ವಿಭಿನ್ನವಾದ ಹಲವು ಕಟ್ಟಳೆಗಳನ್ನು ವಿವಿಧ ಮುಸ್ಲಿಂ ಪಂಗಡಗಳು ಅಂಗೀಕರಿಸಿವೆ. ಆ ನಿಯಮಗಳೆಲ್ಲ ಇಸ್ಲಾಮಿಕವಾಗಲಾ ರವೆಂಬುದು ಸುಸ್ಪಷ್ಟ. ಈ ಬಗ್ಗೆ ವಿವರಿಸಿ ಲೇಖನ ವನ್ನು ದೀರ್ಘ ಮಾಡಲು ನಾನಿಲ್ಲಿ ಬಯಸುವುದಿಲ್ಲ.

ಪ್ರತಿಯೊಂದು ಧರ್ಮದ ಅನುಯಾಯಿಗಳು ಕಾಲಾಂ ತರದಲ್ಲಿ ವಿಭಿನ್ನ ಅಭಿಪ್ರಾಯ ಹೊಂದಿದ ಪಂಗಡಗಳಾಗಿ ಬೇರ್ಪಟ್ಟು ಧರ್ಮದ ನಿರ್ದೇಶಗಳಿಗೆ ಅವರು ಹಲವಿಧ ವ್ಯಾಖ್ಯಾನಗಳನ್ನು ನೀಡಿ, ಕೊನೆಗೆ ಅವರು ಅದರ ನಿಜ ವಾದ ಅಧ್ಯಾಪನಗಳಿಂದ ಅಗಲಿ ಹೋಗುವುದು ಸ್ವಾಭಾ ವಿಕವೂ ಧಾರ್ಮಿಕ ಚರಿತ್ರೆಯಿಂದ ಮನದಟ್ಟಾಗುವ ಸತ್ಯ ವಿಚಾರವೂ ಆಗಿದೆ. ಈ ಪರಿವರ್ತನ ಸ್ವಭಾವಕ್ಕೆ ಮುಸ್ಲಿಮರು ಸಹ ಹೊರತಲ್ಲ. ಆದ್ದರಿಂದ, ಅವರ ಇಂದಿನ ಆಚಾರಾನುಷ್ಠಾನಗಳೆಲ್ಲ ಇಸ್ಲಾಮಿಕವೆಂದು ತಿಳಿ ದುಕೊಳ್ಳುವುದು ಸರಿಯಾಗಲಾರದು. ಆದರೆ ಇಸ್ಲಾ ಮಿಕ ನಿಯಮದ ಮೂಲಾಧಾರವಾದ ಪವಿತ್ರ ಖುರ್ ಆನ್, ಒಂದೇ ಒಂದು ಕಾಗುಣಿತವಾಗಲಿ ವ್ಯತ್ಯಾಸವಾಗದ ರೀತಿಯಲ್ಲಿ ಸುರಕ್ಷಿತವಾಗಿರುವುದೆಂದೂ ಮುಹಮ್ಮದ್ ಪೈಗಂಬರರ(ಸ.) ಉಪದೇಶಗಳೂ ನಿರ್ದೇಶಗಳೂ ವಿಶ್ವಾಸ ಯೋಗ್ಯವೂ ಪ್ರಬಲವೂ ಆದ ರೀತಿಯಲ್ಲಿ ದಾಖಲಿಸಲ್ಪ ಟ್ಟಿವೆ ಎಂಬುದೂ ಇಸ್ಲಾಂ ಧರ್ಮದ ಒಂದು ವೈಶಿಷ್ಟ್ಯ ವಾಗಿದೆ. ಆದುದರಿಂದ, ನಿಜವಾದ ಇಸ್ಲಾಮೀ ನಿಯಮ ನಿರ್ದೇಶಗಳೇನೆಂದೂ ಮುಸ್ಲಿಮರು ಇಂದು ಆಚರಿಸಿ ಕೊಂಡು ಬರುತ್ತಿರುವ ಸಂಪ್ರದಾಯಗಳಲ್ಲೂ ಮುಸ್ಲಿಂ ನಿಯಮಗಳೆಂದು ಸರಕಾರ ಅಂಗೀಕರಿಸಿರುವ ನಿಯಮ ಗಳಲ್ಲೂ ಇಸ್ಲಾಮಿಕವಲ್ಲದ ಅಂಶಗಳು ಯಾವುವೆಂದೂ ಅನ್ವೇಷಣ ಬುದ್ಧಿಯುಳ್ಳವರಿಗೆ ಸುಲಭದಲ್ಲಿ ಮನ ಗಾಣಲು ಸಾಧ್ಯವಾಗಬಹುದು.

ಪ್ರಕೃತ, ನಾವು ಪ್ರಥಮವಾಗಿ ಚಿಂತಿಸಬೇಕಾದುದೇ ನೆಂದರೆ, ವಿವಾಹ ವಿಚ್ಛೇದನ ಯಾವ ರೀತಿಯಲ್ಲಾದರೂ ಸಮರ್ಥನೀಯವೇ ಎಂದು. ಈ ವಿಷಯದ ಬಗ್ಗೆ ವಿಸ್ತ ರಿಸಿ ಹೇಳುವ ಬದಲು ಬಹಳ ಚುಟುಕಾಗಿ ಹೇಳಬಹುದು.

ವಿವಾಹ ವಿಚ್ಛೇದನ ಯಾವ ವಿಧದಲ್ಲೂ ಸಮರ್ಥನೀಯ ವಲ್ಲವೆಂದು ಉಪದೇಶಿಸುವ ಧರ್ಮಗಳಲ್ಲಿ ಇಸ್ಲಾಂ ಸೇರುವುದಿಲ್ಲ. ಪತಿ-ಪತ್ನಿಯರು ಸಾಧ್ಯವಾದಷ್ಟು ದಾಂಪತ್ಯ ಸಂಬಂಧವನ್ನು ಮುಂದುವರಿಸಿಕೊಂಡು ಹೋಗಬೇಕೆಂದೂ ಆ ಸಂಬಂಧ ಮುರಿಯದಂತೆ ಇಬ್ಬರೂ ಜಾಗ್ರತೆ ವಹಿಸಬೇಕೆಂದೂ ಇಸ್ಲಾಂ ಬಲವಾಗಿ ಉಪದೇಶಿಸುವುದಾದರೂ, ಇಬ್ಬರಿಗೂ ತಮ್ಮ ದಾಂಪತ್ಯ ಜೀವನವನ್ನು ಸುಗಮವಾಗಿ ಮುಂದುವರಿಸಿಕೊಂಡು ಹೋಗಲು ಅಸಾಧ್ಯವೆಂದು ಕಾಣುವಾಗ ವಿವಾಹ ವಿಚ್ಛೇದ ಮಾಡಬಹುದೆಂದೂ ಅದು ಅನುಮತಿಯನ್ನೀಯುತ್ತದೆ, ಗಂಡ – ಹೆಂಡತಿ ಅನ್ಯೋನ್ಯ ಕಲಹವನ್ನುಂಟುಮಾಡಿ ದಾಂಪತ್ಯ ಸಂಬಂಧವನ್ನು ಶಿಥಿಲೀಕರಿಸಿ ಹೆಸರಿಗೆ ಮಾತ್ರ ದಂಪತಿಗಳಾಗಿ ಜೀವಿಸುವುದಕ್ಕಿಂತ ಗುಣಕರವೂ ಪ್ರಾಯೋಗಿಕವೂ ಯಾವುದೆಂದರೆ, ತಮ್ಮ ಜೀವಿತವನ್ನು ಮನುಷ್ಯ ಜೀವಿತವನ್ನಾಗಿ ಮಾಡಲು ಅವರು ಪರಸ್ಪರ ಬೇರ್ಪಡುವುದಾಗಿದೆಯೆಂಬುದು ಸುಗ್ರಾಹ್ಯ. ಕೆಲವೊಮ್ಮೆ ಪತಿಗಿರುವ ನಿವಾರಿಸಲಾಗದಂತಹ ಕೆಲವು ದೋಷಗಳ ಕಾರಣ ಪತ್ನಿಗೆ ಆತನೊಂದಿಗೆ ಜೀವನ ನಡೆಸುವುದು ದುಸ್ಸಾಧ್ಯ ಮತ್ತು ನರಕೀಯವಾಗಬಹುದು. ಇದೇ ಪ್ರಕಾರವೇ, ಪತ್ನಿಗಿರುವ ಹೋಗಲಾಡಿಸದಂತಹ ದೋಷಗಳ ಕಾರಣದಿಂದ ಪತಿಗೆ ಅವಳನ್ನು ತನ್ನ ಸಹಧರ್ಮಿಣಿಯಂತೆ ನಡೆಸಿಕೊಂಡು ಹೋಗುವುದು ದುಸ್ತರವೂ ದುಃಖದಾಯಕವೂ ಆಗಬಹುದು. ಹೀಗಿರುವ ಸಂದರ್ಭದಲ್ಲಿ ಸಹ ವಿವಾಹ ವಿಚ್ಛೇದ ಮಾಡದೆ ದಂಪತಿಗಳು ನರಕ ಜೀವನವನ್ನು ಮುಂದುವರಿಸಿಕೊಂಡು ಹೋಗಬೇಕೆಂದು ಇಸ್ಲಾಂ ವಿಧಿಸುವುದಿಲ್ಲ. ಇಂತಹ ಅನಿವಾರ್ಯ ಘಟ್ಟದಲ್ಲಿ ವಿವಾಹ ವಿಚ್ಛೇದನಕ್ಕೆ ಇಸ್ಲಾಂ ಅನುಮತಿ ನೀಡಿರುವುದು ಅತ್ಯಂತ ವಿವೇಕಪೂರ್ಣವೆಂದು ಚಿಂತಿಸುವವರಿಗೆ ಸುಲಭದಲ್ಲಿ ಮನಗಾಣಬಹುದು. ದಾಂಪತ್ಯ ಜೀವಿತದಲ್ಲಿ ಕೆಲವೊಮ್ಮೆ ಇಂತಹ ವೈಷಮ್ಯಗಳು ಎದುರಾಗುವುದರಿಂದಾಗಿ, ಅವುಗಳಿಗೆ ಪರಿಹಾರ ಮಾರ್ಗ ಇಲ್ಲದಿರುವ ಪಕ್ಷದಲ್ಲಿ ದಾಂಪತ್ಯ ಜೀವನ ಅತ್ಯಂತ ದುಃಖದಾಯಕ ಆದೀತೆಂದು ಇರುವುದರಿಂದಾಗಿಯೇ, ಅನಿವಾರ್ಯ ಘಟ್ಟದಲ್ಲಿ ವಿವಾಹ ವಿಚ್ಛೇದ ಸಮ್ಮತನೀಯವೆಂದು ಇಸ್ಲಾಂ ಬೋಧಿಸಿದೆ.

ಸಂಕ್ಷಿಪ್ತವಾಗಿ, ವೈವಾಹಿಕ ಸಂಬಂಧದ ಕುರಿತು ಇಸ್ಲಾಂ ಹೇಳುವುದೇನೆಂದರೆ, ಆ ಸಂಬಂಧವನ್ನು ಮುಂದುವರಿಸಿಕೊಂಡು ಹೋಗಲು ನಿರ್ವಾಹವಿಲ್ಲದಾಗುವಾಗ ಬೇರ್ಪಡಿಸಲು ಸಾಧ್ಯವಾಗುವ ಒಂದು ಕರಾರು (Contract) ಎಂದಾಗಿದೆ. ಈ ನಿರ್ದೇಶ ಅತ್ಯಂತ ಪ್ರಾಯೋಗಿಕವೂ ಅನುಷ್ಠಾನ ಯೋಗ್ಯವೂ ಆಗಿದೆಯೆಂಬುದಕ್ಕೆ ಲೋಕಾನುಭವ ಸಾಕ್ಷ್ಯ ವಹಿಸುತ್ತದೆ. ವಿವಾಹ ಸಂಬಂಧ ಒಂದು ಒಪ್ಪಂದ ಅಲ್ಲ, ಅವಿಚ್ಛಿನ್ನವಾದ ಒಂದು ಆತ್ಮಸಂಸ್ಕಾರ ಅಥವಾ 'ಸಾಕ್ರಮೆಂಟ್' (Sacrament) ಎಂದು ನಂಬುವ ಹಲವು ಮತಸ್ಥರು ಸಹ ವಿವಾಹ ವಿಚ್ಛೇದ ಆವಶ್ಯಕವೆಂದು ಒಪ್ಪಿಕೊಂಡು ನಿಯಮ ನಿರ್ಮಾಣ ಮೂಲಕ ಅದನ್ನು ರೂಢಿಗೊಳಿಸಲು ಶ್ರಮಿಸುತ್ತಾರೆ. ಕ್ರೈಸ್ತ ಧರ್ಮ ತತ್ವ ಪ್ರಕಾರ ವಿವಾಹವು ಅವಿಚ್ಛೇದ್ಯವಾದ ಒಂದು ಧರ್ಮ ಸಂಸ್ಕಾರವಾಗಿದೆ. ಆದರೆ ಇಂದು ಯುರೋಪು ಮತ್ತು ಅಮೇರಿಕ ಕಾನೂನು ಮೂಲಕ ವಿಹಾಹ ವಿಚ್ಛೇದವನ್ನು ನಿಯಮಬದ್ಧಗೊಳಿಸಿ ಜ್ಯಾರಿಗೆ ತಂದಿದೆ. ಹಿಂದೂಗಳಿಗೆ ಸಹ ಶಾಸ್ತ್ರೋಕ್ತವಾದ ವಿವಾಹ, ಪರಿಚ್ಛೇದನಗೊಳಿಸಲಾರದಂತಹ ಒಂದು ಸಂಬಂಧವಾಗಿದೆ. ಆದರೆ ಇಂದು ಅವರು ವಿವಾಹ ವಿಚ್ಛೇದವನ್ನು ನಿಯಮಬದ್ಧಗೊಳಿಸಲು ಕಾನೂನಿನ ಮೊರೆಹೊಗುತ್ತಾರೆ. ಸ್ವಾಮಿ ದಯಾನಂದ ಸರಸ್ವತಿ ವಿವಾಹ ವಿಚ್ಛೇದನ ವೇದ ಪ್ರಕಾರ ನಿಷಿದ್ಧವೆಂದು ಬೋಧಿಸಿದ್ದರೂ ಅವರ ಅನುಯಾಯಿಗಳಾದ ಆರ್ಯ ಸಮಾಜಿಗಳು ಕಾನೂನು ಮೂಲಕ ವಿವಾಹ ವಿಚ್ಛೇದನವನ್ನು ಪಡೆಯಲು ಪ್ರಯತ್ನಿಸುತ್ತಾರೆ. ಹೀಗಿರುವ ಪರಿಶ್ರಮಗಳಿಗೆಲ್ಲ ಕಾರಣ, ಕೆಲವು ಬಾರಿ ದಾಂಪತ್ಯ ಜೀವನವನ್ನು ಮುಂದುವರಿಸಿಕೊಂಡು ಹೋಗುವುದು ಅಸಾಧ್ಯವಾಗುವುದರಿಂದ, ಆ ಸಂಬಂಧದಿಂದ ದಂಪತಿಗಳು ವಿಮುಕ್ತರಾಗದ ಪಕ್ಷದಲ್ಲಿ ಅವರು ದುಃಖ–ದುರಂತಗಳಿಗೂ ಕಷ್ಟ–ನಷ್ಟಗಳಿಗೂ ಈಡಾಗುತ್ತಾರೆಂಬ ಅನುಭವವೇ ಆಗಿದೆ.

ಪತಿ–ಪತ್ನಿಗೆ ಸರಸ – ಸಾಮರಸ್ಯದ ದಾಂಪತ್ಯ ಜೀವನವನ್ನು ಮುಂದುವರಿಸಿಕೊಂಡು ಹೋಗಲು ದುಸ್ಸಹವಾದ ಘಟ್ಟದಲ್ಲಿ ವಿವಾಹ ವಿಚ್ಛೇದ ಮಾಡಿಕೊಳ್ಳಬಹುದೆಂದು ಒಂದು ಕಡೆಯಲ್ಲಿ ಇಸ್ಲಾಂ ಒಪ್ಪುವ

ದಾದರೆ, ಇನ್ನೊಂದು ಕಡೆಯಲ್ಲಿ, ದಂಪತಿಗಳು ಮರಣದ ವರೆಗೆ ಪರಸ್ಪರ ಪ್ರೀತಿಯಿಂದ ವರ್ತಿಸಿ ತಮ್ಮ ಸಂಬಂಧ ವನ್ನು ನಿರ್ಬಾಧೆಯಿಂದ ಮುಂದುವರಿಸಿಕೊಂಡು ಹೋಗಲು ಶ್ರಮಿಸಬೇಕೆಂದು ಬಹಳ ಬಲವಾಗಿ ಉಪ ದೇಶಿಸುತ್ತದೆ. ದಾಂಪತ್ಯ ಜೀವಿತವನ್ನು ಸರಸದಿಂದ ನಡೆಸಿಕೊಂಡು ಹೋಗಲು ಅಸಾಧ್ಯವಾಗಿ ಪರಿಣಮಿಸುವ ಸಂದರ್ಭದಲ್ಲಿ ಕೂಡ ವಿವಾಹ ವಿಚ್ಛೇದನ ಮಾಡಬಾರ ದೆಂದು ಇಸ್ಲಾಂ ವಿಧಿಸುವ ಪಕ್ಷದಲ್ಲಿ, ಅದು ಇಸ್ಲಾಂ ಧರ್ಮದ ಪರಿಪೂರ್ಣತಾವಾದಕ್ಕೂ, ಅದರ ಸಾರ್ವಲೌಕಿಕ ದೌತ್ಯಕ್ಕೂ ಕಳಂಕಕರವಾಗುವುದು. ಅದೇ ಪ್ರಕಾರವೇ, ಕ್ಷುಲ್ಲಕ ಕಾರಣಗಳಿಗೆ ಯಥೇಷ್ಟ ವಿವಾಹ ವಿಚ್ಛೇದ ಮಾಡಿ ಕೊಳ್ಳಲು ಇಸ್ಲಾಂ ಸಮ್ಮತಿ ನೀಡುವುದಾದರೆ ಅದು ಇಸ್ಲಾಮಿನ ಮಹನೀಯವೂ ಸುಗಮವೂ ಆದ ತತ್ವಗಳಿಗೆ ಹಾನಿಕರವಾಗುವುದು. ಕೆಲವು ಅನಿವಾರ್ಯ ಘಟ್ಟ ಗಳಲ್ಲಿ ವಿವಾಹ ವಿಚ್ಛೇದ ಮಾಡಬಹುದೆಂದು ಇಸ್ಲಾಂ ಒಪ್ಪುವುದಾದರೆ ಈ ಒಪ್ಪಿಗೆ ಪುರುಷರಿಗಿರುವಂತೆಯೇ ಸ್ತ್ರೀಯರಿಗೂ ಇದೆಯೆಂದು ಅದು ಬೋಧಿಸುತ್ತದೆ. ಈ ನಿಜಾಂಶವನ್ನು ಪವಿತ್ರ ಖುರ್‌ಆನಿನಿಂದಲೂ ಪ್ರವಾದಿ ವಚನಗಳಿಂದಲೂ ಮನಗಾಣಬಹುದು. ಆದರೆ ಗಂಡಂ ದಿರಿಗೆ ಹೆಚ್ಚಿನ ಅಧಿಕಾರವೂ ಸ್ವಾತಂತ್ರ್ಯವೂ ಇರುವುದ ರಿಂದ ಅವರೇ ಹೆಂಡಂದಿರಿಗಿಂತ ಹೆಚ್ಚಾಗಿ ವಿವಾಹ ಸಂಬಂ ಧವನ್ನು ಮುರಿಯಲು ಪ್ರೇರಿತರಾಗುತ್ತಾರೆ. ಆದ್ದರಿಂ ದಲೇ ಗಂಡಂದಿರಿಗೆ ದಾಂಪತ್ಯ ಸಂಬಂಧವನ್ನು ಸುಲಭ ದಲ್ಲಿ ವಿಚ್ಛೇದಿಸಲು ಸಾಧ್ಯವಾಗದಂತೆ ಹಲವು ಪ್ರತಿಬಂಧ ಕಗಳನ್ನು ಇಸ್ಲಾಂ ಧರ್ಮ ವಿಧಿಸಿದೆ.

**ಒಂದನೆಯದಾಗಿ,** ಪತ್ನಿಯೊಂದಿಗೆ ಸ್ನೇಹದಿಂ ದಲೂ ಉದಾರ ಭಾವದಿಂದಲೂ ವರ್ತಿಸಲಿಕ್ಕೆ ಇಸ್ಲಾಂ ಆಜ್ಞಾಪಿಸುತ್ತದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"ಹೆಂಡಂದಿರಿಗೆ ಗಂಡಂದಿರೊಡನೆ ಹೊಣೆಗಾರಿಕೆಗಳಿ ರುವಂತೆಯೇ ನ್ಯಾಯವಾದ ರೀತಿಯಲ್ಲಿ ಗಂಡಂದಿರಿಗೆ ಹೆಂಡಂದಿರೊಡನೆ ಸಹ ಹೊಣೆಗಾರಿಕೆಗಳಿವೆ." (2:229)

"ನೀವು ಮಡದಿಯರನ್ನು ಒಳ್ಳೆಯ ರೀತಿಯಲ್ಲಿ ಇರಿಸಿಕೊಳ್ಳಿರಿ; ಅಥವಾ ನ್ಯಾಯೋಚಿತವಾಗಿ ಬಿಡುಗಡೆ ಮಾಡಿರಿ; ನೀವು ಅಕ್ರಮಿಗಳಾಗುವ ತರದಲ್ಲಿ ಅವರನ್ನು ಪೀಡಿಸಲಿಕ್ಕಾಗಿ ತಡೆದಿರಿಸಬಾರದು; ಹಾಗೆ ಮಾಡುವವನು ತನಗೇ ಕೇಡನ್ನುಂಟುಮಾಡುತ್ತಾನೆ. ಅಲ್ಲಾಹನ ಆಜ್ಞೆ ಗಳನ್ನು ನೀವು ಪರಿಹಾಸ್ಯಕ್ಕೆ ಈಡು ಮಾಡಬೇಡಿರಿ." (2:232)

"ನೀವು ಪತ್ನಿಯರೊಡನೆ ಒಳ್ಳೆಯ ರೀತಿಯಲ್ಲೂ ಔದಾರ್ಯದಿಂದಲ್ಲೂ ವರ್ತಿಸಿರಿ; ನೀವು ಅವರೊಡನೆ ವಿರಕ್ತಿಭಾವ ಹೊಂದುವ ಪಕ್ಷದಲ್ಲಿ, ನೀವು ವಿರಕ್ತಿ ತೋರಿ ಸುವ ಅವರಲ್ಲಿ ಅಲ್ಲಾಹನು ಬಹಳ ಒಳಿತನ್ನು ಉಂಟು ಮಾಡಲೂಬಹುದು." (4:20)

ಈ ಮೇಲಿನ ಖುರ್‌ಆನ್ ವಾಕ್ಯಗಳಿಂದ ತಿಳಿದು ಬರುವುದೇನೆಂದರೆ, ಹೆಂಡಂದಿರೊಡನೆ ಗಂಡಂದಿರು ಔದಾ ರ್ಯದಿಂದ ವರ್ತಿಸಬೇಕೆಂದೂ ಅವರ ಹಕ್ಕುಗಳನ್ನು ಅವರಿಗೆ ನೀಡಬೇಕೆಂದೂ ಅವರನ್ನು ಪರಿತ್ಯಜಿಸುವುದಾ ದರೆ ನ್ಯಾಯವಾದ ರೀತಿಯಲ್ಲಿ ಹಾಗೆ ಮಾಡಬೇಕೆಂದೂ ಅವರನ್ನು ಪೀಡಿಸಲಿಕ್ಕೂ ಕಾಡಿಸಲಿಕ್ಕೂ ಬೇಕಾಗಿ ಮಾತ್ರ ಹೆಸರಿಗೆ ಹೆಂಡಂದಿರಾಗಿ ಇರಿಸಿಕೊಳ್ಳಬಾರದೆಂದೂ, ಯಾವ ಕಾರಣದಿಂದಾವರೂ ಅವರ ಮೇಲೆ ವಿರಕ್ತಿಭಾವ ಉಂಟಾದರೆ ಅವರನ್ನು ತಕ್ಷಣ ಬಿಟ್ಟುಬಿಡದೆ ಸಾಧ್ಯವಾ ದಷ್ಟು ಅವರೊಡನೆ ಸಹಕರಿಸಿ ವರ್ತಿಸಬೇಕೆಂದೂ, ಹೀಗೆ ಮಾಡುವುದು ದೇವಾನುಗ್ರಹಕ್ಕೆ ಹೇತುವಾಗುವುದೆಂದೂ ಆಗಿದೆ. ಪವಿತ್ರ ಖುರ್‌ಆನ್ ಹೀಗೆ ಹಲವೆಡೆಗಳಲ್ಲಿ ಉಪದೇಶಿಸಿದೆ; ಮಾತ್ರವಲ್ಲ ಪ್ರವಾದಿ ಮುಹಮ್ಮದ್ (ಸ.) ಸಹ ಈ ವಿಷಯದಲ್ಲಿ ಬಲವಾಗಿ ಉಪದೇಶಿಸಿ ದ್ದಾರೆ. ಮುಹಮ್ಮದ್ ಪೈಗಂಬರ್ ಹೀಗೆ ನುಡಿದಿದ್ದಾರೆ:

"ಸ್ತ್ರೀಯರೊಡನೆ ಒಳ್ಳೆಯ ರೀತಿಯಲ್ಲಿ ವರ್ತಿಸ ಬೇಕೆಂಬ ಉಪದೇಶವನ್ನು ನೀವು ಸ್ವೀಕರಿಸಿರಿ." (ಬುಖಾರಿ)

"ನಿಮ್ಮ ಪೈಕಿ ತನ್ನ ಪತ್ನಿಯೊಂದಿಗೆ ಒಳ್ಳೆಯ ರೀತಿ ಯಲ್ಲಿ ವರ್ತಿಸುವವನೇ ನಿಮ್ಮಲ್ಲಿ ಉತ್ತಮನು."

(ತಿರ್ಮದಿ)

ಮುಹಮ್ಮದ್ ಪೈಗಂಬರರು ಹೀಗೆ ಅನೇಕ ಸಂದರ್ಭ ಗಳಲ್ಲಿ ಉಪದೇಶಿಸಿದ್ದು ಮಾತ್ರವಲ್ಲ, ಮರಣಶಯ್ಯೆ ಯಲ್ಲಿರುವಾಗ ಸಹ "ಸ್ತ್ರೀಯರೊಡನೆ ನೀವು ಒಳ್ಳೆಯ ರೀತಿಯಲ್ಲಿ ವರ್ತಿಸಬೇಕೆಂದು ನಾನಿದೋ ನಿಮಗೆ ಉಪ ದೇಶಿಸುತ್ತೇನೆ" ಎಂದು ನುಡಿದರು. ಈ ಪ್ರಕಾರದ ವಚನಗಳಿಂದ ಪೈಗಂಬರರು ತನ್ನ ಅನುಯಾಯಿಗಳಿಗೆ,

ಪತ್ನಿಯರಿಗೆ ಹಾನಿ ಉಂಟುಮಾಡಬಾರದೆಂದೂ ಕ್ಷುಲ್ಲಕ ವಿಷಯಗಳಿಗಾಗಿ ಅವರನ್ನು ತ್ಯಜಿಸಬಾರದೆಂದೂ ಉಪದೇಶಿಸಿದ್ದಾರೆ. ಮಾತ್ರವಲ್ಲ, ಪತ್ನಿ ಪತಿಗೆ ಅವಿಧೇಯತೆ ತೋರಿಸಿದರೆ ಅಥವಾ ಇಬ್ಬರಿಗೂ ಪರಸ್ಪರ ಸರಸ ಸಹವಾಸ ಮಾಡಲು ಸಾಧ್ಯವಿಲ್ಲವೆಂದು ಕಂಡುಬರುವುದಾದರೆ ಸಹ ತಕ್ಷಣ ಪತಿಯು ಪತ್ನಿಯನ್ನು ಬಿಟ್ಟುಬಿಡಬಾರದೆಂದೂ ಅವರ ಮಧ್ಯೆ ಸರಸ ಮತ್ತು ಸಾಮರಸ್ಯ ಉಂಟುಮಾಡಲು ಎರಡು ಕಡೆಗಳಿಂದಲೂ ಮಧ್ಯಸ್ಥರನ್ನು ನೇಮಿಸಿ ಯುಕ್ತವಾಗಿ ವರ್ತಿಸಬೇಕೆಂದು ಸಹ ಪವಿತ್ರ ಖುರ್‌ಆನ್ ಬೋಧಿಸುತ್ತದೆ. (4:35, 36)

ಮುಹಮ್ಮದ್ ಪೈಗಂಬರರು ವಿವಾಹ ವಿಚ್ಛೇದದ ಕುರಿತು ಹೀಗೆ ಹೇಳಿದ್ದಾರೆ: "ವಿವಾಹ ವಿಚ್ಛೇದ ಮಾಡಬಹುದಾದರೂ ಅದು ಅಲ್ಲಾಹನಿಗೆ ಅತ್ಯಂತ ಅಪ್ರಿಯವಾದುದು" (ಅಬೂ ದಾವೂದ್)

ಹೀಗೆ ಗಂಡಂದಿರು ಹೆಂಡಂದಿರೊಡನೆ ಒಳ್ಳೆಯ ರೀತಿಯಲ್ಲಿ ವರ್ತಿಸಬೇಕೆಂದೂ ಸಾಧ್ಯವಾದಷ್ಟರ ಮಟ್ಟಿಗೆ ದಾಂಪತ್ಯ ಸಂಬಂಧವನ್ನು ಬೇರ್ಪಡಿಸದಿರಬೇಕೆಂದೂ ಇರುವ ಇಸ್ಲಾಮಿನ ಉಪದೇಶ ಯಥೇಷ್ಟ ವಿವಾಹ ವಿಚ್ಛೇದನ ಮಾಡದಿರಲಿಕ್ಕಾಗಿ ಪ್ರಧಾನವಾದ ತಡೆಯಾಗಿದೆ.

**ಎರಡನೆಯದಾಗಿ,** ದಾಂಪತ್ಯ ಸಂಬಂಧವನ್ನು ಸುಲಭದಲ್ಲಿ ಮುರಿಯದಿರಲು ಇಸ್ಲಾಂ ಏರ್ಪಡಿಸಿದ ಮತ್ತೊಂದು ತಡೆಯೇನೆಂದರೆ, ಪತಿಯು ಪತ್ನಿಗೆ 'ಮಹರ್' ಎಂಬ ಕನ್ಯಾ ಶುಲ್ಕ ನೀಡಬೇಕಾದುದು ಕಡ್ಡಾಯವೆಂದು ಮಾಡಿರುವ ನಿಯಮವಾಗಿದೆ. ಈ ಮೊತ್ತ ಇಷ್ಟೇ ಎಂದು ಇಸ್ಲಾಂ ನಿರ್ದಿಷ್ಟಪಡಿಸಲಿಲ್ಲವಾದರೂ ಪತಿ ತನ್ನ ಸ್ಥಾನಮಾನಕ್ಕನುಸಾರವಾಗಿ ತಕ್ಕುದಾದ ಒಂದು ಮೊತ್ತವನ್ನು ಪತ್ನಿಗೆ ನೀಡಬೇಕಾದುದು ಅವಶ್ಯವಾಗಿದೆ. ಈ ಮೊತ್ತವನ್ನು ಕೂಡಲೇ ಕೊಡಬೇಕೆಂಬ ನಿರ್ಬಂಧವಿಲ್ಲವಾದರೂ ಅದನ್ನು ಕೊಡದಿರಲಿಕ್ಕೆ ಪತಿಗೆ ನಿರ್ವಾಹವಿಲ್ಲ. ಪತ್ನಿಯಾದವರೋ ಇಂತಹ ಯಾವ ಹಣವನ್ನಾಗಲಿ ಪತಿಗೆ ಕೊಡಲಿಕ್ಕೆ ಬಾಧ್ಯಳಲ್ಲ. ಆದ್ದರಿಂದ ಗಂಡ ಹೆಂಡತಿಯನ್ನು ತ್ಯಜಿಸುವುದಾದರೆ, ಪ್ರಸ್ತುತ ಮೊತ್ತ ಆತನಿಗೆ ನಷ್ಟವಾಗುತ್ತದೆ. ಹೀಗೆ, ಪತಿಯು ಪತ್ನಿಗೆ ವಿವಾಹಶುಲ್ಕವಾಗಿ ಒಂದು ಮೊತ್ತವನ್ನು ಕೊಡಬೇಕೆಂದು ಇಸ್ಲಾಂ ವಿಧಿಸಿರುವುದರ ಒಂದು ಉದ್ದಿಶ್ಯವೇನೆಂದರೆ, ಪತಿ ಕ್ಷುಲ್ಲಕ ಸಂಗತಿಗೆ ಪತ್ನಿಯನ್ನು ತಲಾಖ್ ಹೇಳಿ ಬಿಟ್ಟುಬಿಡದಿರಲಿಕ್ಕೇ ಆಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

"ಮಡದಿಯರಿಗೆ ಪಾರಿತೋಷಕವಾಗಿ ಅವರ ವಧು ದಕ್ಷಿಣೆಯನ್ನು ನೀಡಿರಿ." (4:5)

"ನೀವು ಓರ್ವ ಪತ್ನಿಯ ಸ್ಥಾನದಲ್ಲಿ ಇನ್ನೋರ್ವ ಪತ್ನಿಯನ್ನು ವರಿಸಲು ಬಯಸುವುದಾದರೆ, ಅವರಲ್ಲೊಬ್ಬಳಿಗೆ ನೀವು ಬಹಳ ಹೆಚ್ಚು ಸಂಪತ್ತನ್ನು ಕೊಟ್ಟಿದ್ದರೂ ಅದರಿಂದ ಏನನ್ನೂ ನೀವು ವಾಪಾಸು ಪಡೆಯಬಾರದು." (4:21)

"ಅವರಿಗಾಗಿ ನಿಗದಿಪಡಿಸಲಾದ ಪ್ರತಿಫಲವನ್ನು ನೀವು ಅವರಿಗೆ ನೀಡಿರಿ." (4:25)

ಈ ವಾಕ್ಯಗಳಿಂದೆಲ್ಲ ಸ್ಪಷ್ಟವಾಗುವುದೇನೆಂದರೆ, ಗಂಡ ಹೆಂಡತಿಗೆ ತನ್ನ ಸ್ಥಾನಮಾನ ಮತ್ತು ಸಾಮರ್ಥ್ಯವನ್ನನುಸರಿಸಿ ವಿವಾಹ ಶುಲ್ಕವಾಗಿ ಒಂದು ಮೊತ್ತವನ್ನು ಕೊಡಬೇಕೆಂದೂ ಹೆಂಡತಿಯನ್ನು ತ್ಯಜಿಸಬೇಕಾದ ಘಟ್ಟದಲ್ಲಿ ಆ ಮೊತ್ತ ಎಷ್ಟು ಹೆಚ್ಚಾಗಿದ್ದರೂ ವಾಪಾಸು ತೆಗೆದುಕೊಳ್ಳಬಾರದೆಂದೂ ಆಗಿದೆ. ಮುಹಮ್ಮದ್ ಪೈಗಂಬರರು ಈ ಬಗ್ಗೆ ಹೀಗೆ ಹೇಳಿದ್ದರು: "ನೀವು ಸ್ತ್ರೀಯನ್ನು ಯಾವ ನಿಬಂಧನೆಯಂತೆ ಪತ್ನಿಯಾಗಿ ವರಿಸುತ್ತೀರೋ, ಅದುವೇ ನೀವು ನಿರ್ವಹಿಸಬೇಕಾದ ನಿಬಂಧನೆಗಳ ಪೈಕಿ ಅತಿ ಪ್ರಧಾನವಾದುದು." (ಬುಖಾರಿ)

ಗಂಡ ಹೆಂಡತಿಗೆ ವಧುದಕ್ಷಿಣೆಯಾಗಿ ತಕ್ಕುದಾದ ಒಂದು ಮೊತ್ತವನ್ನು ನೀಡಬೇಕೆಂಬ ಇಸ್ಲಾಮಿನ ಈ ಆಜ್ಞೆ ಅವನಿಗೆ ಇಚ್ಛಾನುಸಾರ ಪತ್ನಿಯನ್ನು ಬಿಟ್ಟುಬಿಡುವುದಕ್ಕೆ ಒಂದು ಪ್ರತಿಬಂಧಕವಾಗಿದೆ. ನಿಜವಾಗಿ, ವಿವಾಹ ಶುಲ್ಕವೆಂಬುದು ಗಂಡ ಹೆಂಡತಿಗೆ ಕಡ್ಡಾಯವಾಗಿ ಕೊಡಬೇಕಾದ ವಧುದಕ್ಷಿಣೆಯಾಗಿದೆ. ಆದರೆ ನಿರ್ಭಾಗ್ಯವಶಾತ್ ಇಂದು ಹಲವೆಡೆಗಳಲ್ಲಿ ಇಸ್ಲಾಮಿನ ಈ ನಿರ್ದೇಶನಕ್ಕೆ ತೀರಾ ವಿರುದ್ಧವಾಗಿ ಗಂಡ ಹೆಂಡತಿಯಿಂದ ವರದಕ್ಷಿಣೆ ಪಡೆಯುತ್ತಾನೆ. ಇಸ್ಲಾಮಿಕವಲ್ಲದ ಈ ಸಂಪ್ರದಾಯ ಅಭಿಮಾನಕ್ಕೂ ನೀತಿಗೂ ಅನುಯೋಜ್ಯವಲ್ಲದ್ದೂ ಸಮುದಾಯದಲ್ಲಿ ಸ್ತ್ರೀಗಿರುವ ಸ್ಥಾನವನ್ನು ಅಧಃಪತನಗೊಳಿಸುವಂಥದ್ದೂ ಅನೇಕ ಯುವತಿ

ಯರು ಗಂಡುಗಳು ಸಿಗದೆ ಕಷ್ಟಪಡುವುದಕ್ಕೆ ಕಾರಣ ಭೂತವೂ ಆಗಿದೆ. ಸ್ತ್ರೀಯಿಂದ ತುಂಬಾ ಧನವನ್ನು ಕಸಿದುಕೊಂಡು ಅವಳನ್ನು ಪತ್ನಿಯಾಗಿ ವರಿಸುವುದು ಖಂಡಿತವಾಗಿಯೂ ಪೌರುಷ್ಯಕ್ಕೂ ನೀತಿಗೂ ವಿರುದ್ಧ ವಾದುದು. ದುರದೃಷ್ಟವಶಾತ್ ಇಂದು ಮುಸ್ಲಿಮರು ಇಸ್ಲಾಮಿನ ವಿಧಿಯನುಸಾರ ಸ್ತ್ರೀಗೆ ಕೊಡಬೇಕಾದ ವಧು ದಕ್ಷಿಣೆಯನ್ನು ಕೇವಲ ಒಂದು ವಿನೋದವೆಂದು ಬಗೆದು ಸ್ತ್ರೀಯಿಂದ ದೊಡ್ಡದಾದೊಂದು ಮೊತ್ತವನ್ನು ಕಸಿದು ಕೊಂಡು ಅದನ್ನು ವರದಕ್ಷಿಣೆಯೆಂದು ಕರೆಯುತ್ತಾರೆ. ಇಂದು ಮುಸ್ಲಿಮರಲ್ಲಿ ಕಂಡುಬರುವ ಈ ಸಂಪ್ರದಾಯ ವನ್ನು ಇಸ್ಲಾಮಿಕವೆಂದು ಯಾರಾದರೂ ತಿಳಿಯುವ ರಾದರೆ ಅದು ತಪ್ಪೆಂದು ಹೇಳದೆ ಗತ್ಯಂತರವಿಲ್ಲ.

**ಮೂರನೆಯದಾಗಿ,** ಪತಿ-ಪತ್ನಿಯರು ವಿವಾಹ ಸಂಬಂಧದಿಂದ ಬೇರ್ಪಡದೆ ಸರಸದಲ್ಲಿ ಜೀವನ ನಡೆಸಲು ಸಾಧ್ಯವಾಗುವಂತೆ ಇಸ್ಲಾಂ ನಿರ್ದೇಶಿಸಿರುವ ಮತ್ತೊಂದು ಉಪಾಯ, ಗಂಡ ಹೆಂಡತಿಗೆ ತಲಾಖ್ ಹೇಳಿ ವಿವಾಹ ವಿಚ್ಛೇದ ಮಾಡುವುದು ಅವಳು ಮುಟ್ಟಿನ ಕಾಲಾವಧಿ ಕಳೆದು ಶುದ್ಧಿಯಾಗಿ, ಅನಂತರ ಅವಳೊಡನೆ ಸಂಭೋಗ ನಡೆಸದಿರುವ ಸಂದರ್ಭದಲ್ಲಿ ಮಾತ್ರವೇ ಸಾಧ್ಯ ಎಂಬು ದಾಗಿದೆ. ಈ ನಿಯಮವನ್ನನುಸರಿಸಿ ಒಬ್ಬ ಮುಸ್ಲಿಂ ತನ್ನ ಪತ್ನಿಯ ವಿವಾಹ ವಿಚ್ಛೇದ ಮಾಡುವುದಾದರೆ ಅದು ಅವಳು ಋತುಕಾಲ ಕಳೆದು ಶುದ್ಧಳಾಗಿ ಅವ ಳೊಡನೆ ರತಿ ಕ್ರೀಡೆ ಮಾಡದಿರುವ ಸ್ಥಿತಿಯಲ್ಲಿ ಆಗಬೇಕಾ ಗಿದೆ. ಪತ್ನಿ ರಜಸ್ವಲೆಯಾಗಿರುವ ಸಮಯದಲ್ಲಿ ಅಥವಾ ಮುಟ್ಟು ಕಳೆದು ಶುದ್ಧಳಾಗಿರುವ ಸಂದರ್ಭದಲ್ಲಿ ಅವ ಳೊಡನೆ ಸಂಸರ್ಗ ಮಾಡಿದ ಬಳಿಕ ಪತಿ ತಲಾಖ್ ಹೇಳು ವುದಾದರೆ ಅದು ಸಿಂಧುವಾಗದು. ಈ ಬಗ್ಗೆ ಖುರ್ ಆನ್ ಹೀಗೆ ಹೇಳುತ್ತದೆ: ''ನೀವು ಮಡದಿಯರನ್ನು ಪರಿ ತ್ಯಜಿಸುವುದಾದರೆ ಅದಕ್ಕೆ ನಿರ್ಣಯಿಸಲಾದ ಕಾಲದಲ್ಲಿ ಅವರನ್ನು ಬಿಟ್ಟು ಬಿಡಿರಿ. ಆ ನಿಗದಿತ ಕಾಲವನ್ನು ನೀವು ಲೆಕ್ಕ ಹಾಕಿರಿ. ನಿಮ್ಮ ರಕ್ಷಕನಾದ ಅಲ್ಲಾಹನ ಭಯ ನಿಮಗಿರಲಿ.'' (65:2)

ಈ ವಾಕ್ಯದಲ್ಲಿ ಹೇಳಲಾದ ನಿಗದಿತ ಕಾಲ ಯಾವು ದೆಂದು ಮುಹಮ್ಮದ್ ಪೈಗಂಬರರು ಸ್ಪಷ್ಟಪಡಿಸಿದ್ದಾರೆ. ಹಝ್ರತ್ ಉಮರ್(ರ) ಅವರ ಮಗ ಹಝ್ರತ್ ಅಬ್ದುಲ್ಲಾ(ರ) ತನ್ನ ಪತ್ನಿಯನ್ನು ಋತುಮತಿಯಾದ ಕಾಲದಲ್ಲಿ ತಲಾಖ್ ಹೇಳಿದುದಾಗಿ ಹಝ್ರತ್ ಉಮರ್ ಮೂಲಕ ತಿಳಿದಾಗ ಪೈಗಂಬರರು ಕೋಪಾವಿಷ್ಟರಾಗಿ ಹೀಗೆ ನುಡಿದರು: ''ಆತನು ಆಕೆಯನ್ನು ವಾಪಾಸು ಸ್ವೀಕರಿಸಿ ತನ್ನೊಂದಿಗೆ ಇರಿಸಿಕೊಳ್ಳಲಿ; ನಂತರ ಆಕೆ ಶುದ್ಧಳಾಗಿ, ಇನ್ನೊಮ್ಮೆ ಮುಟ್ಟಾಗಿ ಶುದ್ಧಳಾದ ಬಳಿಕ, ಆಕೆಯನ್ನು ತ್ಯಜಿಸಲು ಬಯಸುವುದಾದರೆ ಆಕೆಯೊಡನೆ ಸಂಭೋಗ ಮಾಡದ ಸ್ಥಿತಿಯಲ್ಲಿ ಆತನು ಆಕೆಗೆ ವಿಚ್ಛೇದನ ನೀಡಲಿ. ಅಲ್ಲಾಹನು ವಿಧಿಸಿದ ಪ್ರಕಾರ ತಲಾಖಿಗಿರುವ ನಿಶ್ಚಿತ ಕಾಲ ಇದಾಗಿದೆ.'' (ಬುಖಾರಿ)

ಅತ್ಯಂತ ವಿಶ್ವಾಸಯೋಗ್ಯವಾದ ಬುಖಾರಿ, ಮುಸ್ಲಿಂ ಎಂಬೀ ಹದೀಸು ಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟ ಪ್ರವಾದಿ ವಚನಗಳಿಂದ ಸ್ಪಷ್ಟವಾಗುವುದೇನೆಂದರೆ, ಒಬ್ಬ ಮುಸ್ಲಿಮನಿಗೆ ತನ್ನ ಪತ್ನಿಯನ್ನು ಅವಳು ಋತುಮತಿ ಯಾಗಿರುವ ಕಾಲದಲ್ಲಾಗಲಿ, ಮುಟ್ಟು ಕಳೆದು ಶುದ್ಧ ಕಾಲದಲ್ಲಿ ಅವಳೊಂದಿಗೆ ಸಂಭೋಗ ನಡೆಸಿದ ಸ್ಥಿತಿಯ ಲ್ಲಾಗಲಿ, ತಲಾಖ್ ಹೇಳಿ ವಿಚ್ಛೇದಗೊಳಿಸಬಾರದೆಂದಾ ಗಿದೆ. ಪವಿತ್ರ ಖುರ್‌ಆನ್ ಹೇಳುತ್ತದೆ: ''ತಲಾಖ್ ಪಡೆದ ಸ್ತ್ರೀಯರು ಮೂರು ಆರ್ತವಕಾಲ ಕಾಯಬೇಕಾ ಗಿದೆ'' (2:229). ಈ ಖುರ್‌ಆನ್ ವಾಕ್ಯದಿಂದಲೂ ಸ್ತ್ರೀಯು ಮುಟ್ಟು ಕಳೆದು ಶುದ್ಧಳಾಗಿರುವ ಕಾಲದಲ್ಲೇ ವಿವಾಹ ವಿಚ್ಛೇದ ಮಾಡಬಹುದೆಂದು ತಿಳಿದು ಬರು ತ್ತದೆ. ಹೀಗೆ ಸ್ತ್ರೀ ಮುಟ್ಟುಕಾಲ ಕಳೆದು ಶುಚಿಯಾದ ಕಾಲದಲ್ಲಿ ತಲಾಖ್ ಹೇಳಲಾಗುವುದಾದರೆ ಮಾತ್ರವೇ ಮೂರು ಋತುಕಾಲ ಕಳೆಯುವ ವರೆಗೆ ಅವಳು ಇನ್ನೊಬ್ಬ ಪತಿಯನ್ನು ವರಿಸಬಾರದೆಂಬ ಪ್ರಸ್ತುತ ಆಜ್ಞೆ ಅರ್ಥವತ್ತಾಗುತ್ತದೆ. ಒಟ್ಟಾರೆ, ಇಸ್ಲಾಮಿನ ನಿಯಮ ವನ್ನನುಸರಿಸಿ, ಮೇಲೆ ವಿವರಿಸಿದ ವಿಧದಲ್ಲಿ ಹೊರತು, ಗಂಡ ಬಯಸುವ ಯಾವ ಸಮಯದಲ್ಲೂ ಹೆಂಡತಿ ಯೊಡನೆ ''ನಾನು ನಿನ್ನನ್ನು ಪರಿತ್ಯಜಿಸುತ್ತೇನೆ'' ಎಂದು ಹೇಳುವುದರಿಂದ ಮಾತ್ರ ವಿವಾಹ ಸಂಬಂಧ ಬೇರ್ಪಡು ವುದಿಲ್ಲ; ಹಾಗೆ ಒಮ್ಮೆ ಹೇಳುವುದರಿಂದಾಗುವ ಅಗಲು ವಿಕೆ ಇಸ್ಲಾಂ ಧರ್ಮದಲ್ಲಿರುವ ವಿವಾಹ ವಿಚ್ಛೇದನ ನಿಯಮ ಪ್ರಕಾರ ಸಿಂಧುವೆನಿಸುವುದಿಲ್ಲ. ಇಸ್ಲಾಂ ಇಂತಹ ನಿಯಮ ಇರಿಸಿಕೊಂಡಿರುವುದು ದಾಂಪತ್ಯ

ಸಂಬಂಧವನ್ನು ಸುಲಭದಲ್ಲಿ ಮುರಿದುಬಿಡಲು ಅಸಾಧ್ಯವಾಗುವಂತೆ ಸುದೃಢಗೊಳಿಸಲಿಕ್ಕಾಗಿದೆ. ಮುಟ್ಟುಕಾಲದಲ್ಲಿ ಪತ್ನಿಯನ್ನು ಭೋಗಿಸಲು ಅನುಕೂಲ ಪರಿಸ್ಥಿತಿ ಇಲ್ಲವಾದುದರಿಂದ ಚಪಲ ಹೃದಯಿಯಾದ ಗಂಡ ಕ್ಷುಲ್ಲಕ ಕಾರಣಕ್ಕಾಗಿ ಆವಳಿಗೆ ತಲಾಖ್ ಕೊಡಲು ಪ್ರೇರಿತನಾಗಬಹುದು. ಆದರೆ ಅವಳು ಮುಟ್ಟು ಕಳೆದು ಶುದ್ಧಳಾಗಿರುವ ಸಂದರ್ಭದಲ್ಲಿ ಅವಳೊಡನೆ ರತಿಕ್ರೀಡೆ ನಡೆಸಲು ಅವನು ಪ್ರೇರಿತನಾಗುವುದರಿಂದ ಆ ಘಟ್ಟದಲ್ಲಿ ಅವನ ಕ್ರೋಧ ಸ್ವಾಭಾವಿಕವಾಗಿಯೇ ಶಾಂತಗೊಂಡು ಅವನು ಅವಳನ್ನು ಪ್ರೀತಿಸಲಿಕ್ಕೆ ತೊಡಗುವುದು ಸಂಭವನೀಯ. ಹಾಗೆ ಅವರು ಪರಸ್ಪರ ಸರಸದಿಂದ ರತಿಕೇಳಿ ನಡೆಸಿದ ನಂತರ ಮತ್ತೂ ಯಾವುದೇ ಕಾರಣವಶಾತ್ ಪರಸ್ಪರ ಅಗಲುವರಾದರೆ, ಸಂಭೋಗ ಉಂಟಾದುದರಿಂದ ವಿವಾಹ ಸಂಬಂಧವನ್ನು ಕಡಿಯುವುದು ನಿಯಮಬದ್ಧವಾಗುವುದಿಲ್ಲ. ಅದಕ್ಕೆ ಅವರು ಮುಂದಿನ ಋತುಕಾಲ ಕಳೆಯುವವರೆಗೆ, ಅಥವಾ ಸ್ತ್ರೀ ಗರ್ಭ ಧರಿಸಿದ್ದಾಳೆಯೇ ಎಂದು ತಿಳಿಯುವ ವರೆಗೆ ಕಾದಿರಬೇಕಾಗಿದೆ. ಇಷ್ಟು ಕಾಲದ ನಿರೀಕ್ಷೆಯೊಳಗೆ ಅವನ ಕೋಪ ಸಾಕಷ್ಟು ಶಾಂತಗೊಳ್ಳಲಿಕ್ಕೂ ಅವಳನ್ನು ತೊರೆಯಬೇಕೆಂಬ ಭಾವನೆಯಿಂದ ಅವನು ಹಿಮ್ಮೆಟ್ಟಲಿಕ್ಕೂ, ಹಾಗೆ ಅವರೊಳಗೆ ಅನ್ಯೋನ್ಯ ಇನ್ನೊಮ್ಮೆ ಸರಸವುಂಟಾಗಲಿಕ್ಕೂ ಹೇತುವಾಗಬಹುದು. ಆದ್ದರಿಂದಲೇ, ಸ್ತ್ರೀ ರಜಸ್ವಲೆಯಾಗಿರುವ ಕಾಲದಲ್ಲಾಗಲಿ, ಶುದ್ಧಿಕಾಲದಲ್ಲಿ ಸಂಭೋಗ ನಡೆದ ಸ್ಥಿತಿಯಲ್ಲಾಗಲಿ ಅವಳಿಗೆ ತಲಾಖ್ ಕೊಡಬಾರದೆಂದು ಇಸ್ಲಾಂ ಆದೇಶಿಸುತ್ತದೆ. ಇದು ವಿವಾಹ ವಿಚ್ಛೇದವನ್ನು ಸಾಕಷ್ಟು ತಡೆಯುವ ಒಂದು ಉಪಾಯವೇ ಆಗಿದೆ.

**ನಾಲ್ಕನೆಯದಾಗಿ,** ವಿವಾಹ ಸಂಬಂಧವನ್ನು ಯಥೇಷ್ಟ ಮುರಿಯದಿರಲಿಕ್ಕೆ ಇಸ್ಲಾಂ ನಿರ್ದೇಶಿಸಿರುವ ನಿಯಮವೇನೆಂದರೆ, ತಲಾಖ್ ಪಡೆದ ಸ್ತ್ರೀ ಮೂರು ತಿಂಗಳ ತನಕ ಇನ್ನೊಬ್ಬ ಗಂಡನನ್ನು ವರಿಸಬಾರದೆಂದಾಗಿದೆ. (ಪವಿತ್ರ ಖುರ್‌ಆನ್–2:229). ಒಬ್ಬನು ಯಾವುದಾದರೂ ಕಾರಣದಿಂದ ತನ್ನ ಹೆಂಡತಿಗೆ ತಲಾಖ್ ಹೇಳುವುದಾದರೆ ಸಹ 'ಇದ್ದಃ' ಎಂದು ಕರೆಯಲಾಗುವ ಆ ನಿಗದಿತ ಕಾಲ –ಮೂರು ಮಾಸ– ಕಳೆಯುವುದಕ್ಕಿಂತ ಮೊದಲು ಬೇಕಾದರೆ ಆತನು ಆಕೆಯನ್ನು ಪುನಃ ಸ್ವೀಕರಿಸಬಹುದು. ಆತನು ತಾತ್ಕಾಲಿಕವಾದ ಕೋಪಾವೇಶದಿಂದಾಗಲಿ ಯಾವುದಾದರೂ ಕ್ಷುಲ್ಲಕ ಕಾರಣವನ್ನು ಆಸ್ಪದ ಮಾಡಿಯಾಗಲಿ ಹೆಂಡತಿಗೆ ತಲಾಖ್ ಹೇಳುವುದಾದರೆ, ಆ ಮೂರು ಮುಟ್ಟು ಕಾಲ ಕಳೆಯುವುದರೊಳಗೆ ಆತನು ಶಾಂತಚಿತ್ತನಾಗಲಿಕ್ಕೂ ಮರುಚಿಂತನೆಯ ಫಲವಾಗಿ ಆತನ ಕೋಪ ಉಪಶಮನಗೊಳ್ಳಲಿಕ್ಕೂ, ಹಾಗೆ ಆತನು ಪತ್ನಿಯನ್ನು ವಾಪಾಸು ಸ್ವೀಕರಿಸಲಿಕ್ಕೆ ಪ್ರೇರಿತನಾಗಲಿಕ್ಕೂ ಅವಕಾಶವಿದೆಯಷ್ಟೇ. ಮೂರು ಋತುಘಟ್ಟ ಕಳೆದ ನಂತರ ಅವಳನ್ನು ಸ್ವೀಕರಿಸಲು ಆತನು ಇಚ್ಛಿಸುವನಾದರೆ, ಪುನರ್ವಿವಾಹ ಮೂಲಕ ಹಾಗೆ ಮಾಡಬಹುದಾಗಿದೆ. ಹೀಗೆ ಎರಡು ಸಲ ತಲಾಖ್ ಹೇಳಿದರೂ ಕಾಲಾವಧಿಯೊಳಗಾದರೆ ಹೊಸ ವಿವಾಹ ಕರ್ಮವಿಲ್ಲದೆಯೂ, ಕಾಲಾವಧಿಯ ಬಳಿಕವಾದರೆ ಹೊಸ ವಿವಾಹ ಕರ್ಮದ ಮೂಲಕವೂ ಆಕೆಯನ್ನೇ ಪುನಃ ಪತ್ನಿಯಾಗಿ ವರಿಸಬಹುದು. ''ತಲಾಖ್ ಎರಡು ಸಲವಾಗಿದೆ; ನಂತರ ಒಂದೋ ನ್ಯಾಯೋಚಿತವಾಗಿ ಅವಳನ್ನು ಇರಿಸಿಕೊಳ್ಳಬೇಕು ಅಥವಾ ಒಳ್ಳೆಯ ರೀತಿಯಲ್ಲಿ ಬಿಡುಗಡೆ ಮಾಡಬೇಕು.'' (2:230) ಎಂಬ ಖುರ್‌ಆನ್ ವಾಕ್ಯದಿಂದ ಈ ವಿಚಾರ ಸ್ಪಷ್ಟವಾಗುತ್ತದೆ. ''ನೀವು ಸ್ತ್ರೀಯರನ್ನು ತಲಾಖ್ ಹೇಳಿ ಪರಿತ್ಯಜಿಸಿ ಅವರ ಕಾಲಾವಧಿ ಕಳೆದರೆ, ನ್ಯಾಯೋಚಿತವಾಗಿ ಅನ್ಯೋನ್ಯ ಇಷ್ಟಪಡುವ ಪಕ್ಷದಲ್ಲಿ ಅವರು ಅವರ ಗಂಡಂದಿರನ್ನೇ ಮದುವೆಯಾಗುವುದರಿಂದ (ಎಲೈ ಸ್ತ್ರೀಯರ ಬಂಧುಗಳೇ) ನೀವು ಅವರನ್ನು ತಡೆಯಬಾರದು'' (2:233) ಎಂಬ ಖುರ್‌ಆನ್ ವಾಕ್ಯದಲ್ಲಿ ತಲಾಖ್ ಪಡೆದ ಸ್ತ್ರೀಯರು ಅವರ ಕಾಲಾವಧಿ ಕಳೆದರೆ ತಮ್ಮನ್ನು ತಲಾಖ್ ಹೇಳಿ ಅಗಲಿದ ಗಂಡಂದಿರನ್ನೇ ಮದುವೆ ಮಾಡಿಕೊಳ್ಳಬಹುದೆಂದು ಪ್ರಸ್ತಾವಿಸಲಾದುದು, ಒಂದು ಸಲವಾಗಲಿ ಎರಡು ಸಲವಾಗಲಿ ತಲಾಖ್ ಕೊಟ್ಟು ಕಾಲಾವಧಿ ಪಡೆದ ಸ್ತ್ರೀಯರನ್ನು ಪುನಃ ವಿವಾಹ ಕರ್ಮ ಮೂಲಕ ಸ್ವೀಕರಿಸುವುದರ ಕುರಿತಾಗಿದೆ. ಪ್ರಸ್ತುತ ಖುರ್‌ಆನ್ ವಚನಕ್ಕೆ ಹಝ್ರತ್ ಇಬ್ನು ಅಬ್ಬಾಸ್(ರ) ಹೇಳಿರುವ ವ್ಯಾಖ್ಯಾನ ಈ ರೀತಿಯಾಗಿದೆ: ''ಮೂರನೆಯ ಬಾರಿ ಒಬ್ಬನು ತನ್ನ ಪತ್ನಿಗೆ ತಲಾಖ್ ಹೇಳಿದರೆ, ನಂತರ ಅವನಿಗೆ ಅವಳನ್ನು ಪುನಃ ಹೆಂಡತಿಯಾಗಿ ಸ್ವೀಕರಿಸಲಾಗದು. ಆದರೆ ಇನ್ನೊಬ್ಬನು ಅವಳನ್ನು ಮದುವೆ

ಯಾಗಿ ಪತ್ನಿಯಾಗಿ ಸ್ವೀಕರಿಸಿದ ಬಳಿಕ ಅವನು ಇಸ್ಲಾಮಿ ನಿಯಮಾನುಸಾರ ಸ್ವಇಚ್ಛೆಯಿಂದ ಅವಳಿಗೆ ತಲಾಖ್ ಹೇಳಿ ಬೇರ್ಪಟ್ಟು ಅವಳ 'ಇದ್ದಃ' ಎಂಬ ಕಾಲಾವಧಿ ಕಳೆದರೆ ಮಾತ್ರ ಮೊದಲಿನ ಗಂಡನಿಗೆ ಬೇಕೆಂದಾದರೆ ಅವಳನ್ನು ವಿವಾಹ ಮಾಡಿಕೊಳ್ಳಬಹುದು." ಆದ್ದರಿಂದಲೇ, ಎರಡು ಸಲ ತಲಾಖ್ ಹೇಳಿದ ಬಳಿಕ ಗಂಡ ಅವಳನ್ನು ನ್ಯಾಯೋಚಿತವಾಗಿ ಪತ್ನಿಯಾಗಿ ಇರಿಸಿಕೊಳ್ಳಬೇಕು ಅಥವಾ ಒಳ್ಳೆಯ ರೀತಿಯಲ್ಲಿ ಅವಳನ್ನು ಬಿಡುಗಡೆ ಮಾಡಬೇಕೆಂದು ಹೇಳಿದುದನ್ನು ಮುಂದುವರಿಸಿ ಪವಿತ್ರ ಖುರ್‌ಆನ್ ಈ ರೀತಿ ಹೇಳಿರುತ್ತದೆ: "ನಂತರ (ಮೂರನೆಯ ಸಲ) ಅವನು ಅವಳ ತಲಾಖ್ ಹೇಳುವುದಾದರೆ, ಆ ನಂತರ ಅವಳು ಅವನಿಗೆ ಹೆಂಡತಿಯಾಗಲಾರಳು, ಅವಳು ಇನ್ನೊಬ್ಬ ಗಂಡನನ್ನು ವರಿಸಿದ ಬಳಿಕ ಹೊರತು" (2:231). ಹೀಗೆ ಒಮ್ಮೆ ತಲಾಖ್ ಹೇಳಿದ ನಂತರ ನಿರ್ದಿಷ್ಟ ಕಾಲಾವಧಿಯೊಳಗಾದರೆ ಪುನರ್ವಿವಾಹದ ವಿನಾ ಮತ್ತು ಕಾಲಾವಧಿ ಕಳೆದರೆ ಪುನರ್ವಿವಾಹ ಮೂಲಕ, ಅದೇ ಪ್ರಕಾರವೇ ಎರಡನೇ ಸಲ ತಲಾಖ್ ಹೇಳಿದರೂ ಕಾಲಾವಧಿಯೊಳಗೆ ವಿವಾಹ ಇಲ್ಲದೆಯೂ ಕಾಲಾವಧಿ ಕಳೆದರೆ ವಿವಾಹ ಮೂಲಕವೂ ಅವಳನ್ನು ಮತ್ತೊಮ್ಮೆ ಪತ್ನಿಯಾಗಿ ಸ್ವೀಕರಿಸಬಹುದೆಂದು ಇಸ್ಲಾಂ ನಿರ್ದೇಶಿಸಿರುವುದು ಪತಿ-ಪತ್ನಿಯರು ಸಾಧ್ಯವಿದ್ದಷ್ಟರ ಮಟ್ಟಿಗೆ ದಾಂಪತ್ಯಸಂಬಂಧವನ್ನು ಪಾಲಿಸಿಕೊಂಡು ಹೋಗಲಿಕ್ಕೇ ಆಗಿದೆ. ಒಟ್ಟಾರೆ, ಇಸ್ಲಾಮಿನ ಈ ನಿಯಮ ವಿವಾಹಸಂಬಂಧವನ್ನು ಕೊನೆಗೊಳಿಸದಿರಕ್ಕಾಗಿ ಅದು ನಿರ್ದೇಶಿಸುವ ಒಂದು ಉಪಾಯವೆಂದೇ ಹೇಳಬಹುದು. ಗಂಡ-ಹೆಂಡಿರು ತಮ್ಮ ಈ ಸಂಬಂಧವನ್ನು ಬೇರ್ಪಡಿಸಿ ಇನ್ನೊಮ್ಮೆ ಅವರು ತಮ್ಮೊಳಗೆ ಒಂದುಗೂಡಲಿಕ್ಕೆ ಒಂದು ಸೀಮೆಯನ್ನು ನಿಶ್ಚಯಿಸದಿದ್ದ ಪಕ್ಷದಲ್ಲಿ ವಿವಾಹ ಸಂಬಂಧವು ಅರ್ಥ ರಹಿತವೂ ವಿವಾಹ ವಿಚ್ಛೇದನ ವಿನೋದವೂ ಆಗಿ ಮಾರ್ಪಡುವುವು. ಆದುದರಿಂದ, ಎರಡು ಸಲ ತಲಾಖ್ ಹೇಳಿ ಬಿಟ್ಟ ಹೆಂಡತಿಯನ್ನು ತಿರುಗಿ ಸ್ವೀಕರಿಸಬಹುದಾದರೂ, ಮೂರನೆಯ ಬಾರಿ ತಲಾಖ್ ಹೇಳಿದರೆ ನಂತರ ಅವಳನ್ನು ಆ ರೀತಿಯಲ್ಲಿ ತಿರುಗಿ ಪಡೆಯುವ ಹಕ್ಕು ಇಲ್ಲದಾಗುತ್ತದೆಂದು ಇಸ್ಲಾಂ ವಿಧಿಸಿರುತ್ತದೆ. ಆದ್ದರಿಂದಲೇ. ಮೂರನೆಯ ಬಾರಿ ತಲಾಖ್ ಪಡೆದ ಸ್ತ್ರೀಯನ್ನು ಪುನಃ ವರಿಸುವುದರ ಕುರಿತು ಪ್ರಸ್ತುತ ಖುರ್‌ಆನ್ ವಚನದಲ್ಲಿ ಪ್ರಸ್ತಾಪಿಸಲ್ಪಟ್ಟಿದೆಯೆಂದು ಹೇಳಲಾಗುತ್ತದೆ.

**ಐದನೆಯದಾಗಿ,** ವಿವಾಹಸಂಬಂಧವನ್ನು ಕೊನೆಗೊಳಿಸದಿರಲಿಕ್ಕೆ ಇಸ್ಲಾಂ ನಿರ್ದೇಶಿಸಿರುವ ನಿಯಮವೇನೆಂದರೆ, ಒಬ್ಬನು ತನ್ನ ಪತ್ನಿಯನ್ನು ಒಂದೇ ಸಂದರ್ಭದಲ್ಲಿ ಮೂರು ಬಾರಿ ತಲಾಖ್ ಹೇಳಬಾರದೆಂದಾಗಿದೆ. ಗಂಡನು ಎಷ್ಟು ಅವಿವೇಕಿಯೂ ಕೋಪಿಷ್ಠನೂ ಆಗಿದ್ದರೂ ಅವನಿಗೆ ತನ್ನ ಹೆಂಡತಿಯನ್ನು ಕ್ಷುಲ್ಲಕ ಕಾರಣಕ್ಕಾಗಿ ಬೇರ್ಪಡಿಸಲು ಸಾಧ್ಯವಾಗದಿರಲಿಕ್ಕಾಗಿಯೇ ಒಮ್ಮೆಲೇ ಮೂರು ತಲಾಖ್ ಸಹ ಹೇಳಬಾರದೆಂದು ಇಸ್ಲಾಂ ವಿಧಿಸುತ್ತದೆ. ತಾತ್ಕಾಲಿಕವಾದ ಉದ್ವೇಗದಿಂದ ಒಬ್ಬನು ಪತ್ನಿಗೆ ತಲಾಖ್ ಹೇಳುವುದಾದರೆ ಕೂಡ ಅವನಿಗೆ ಒಂದು ಸಂದರ್ಭದಲ್ಲಿ ಒಮ್ಮೆ ಮಾತ್ರ ತಲಾಖ್ ಹೇಳಲು ಸಾಧ್ಯ. ಹಾಗೆ ಒಮ್ಮೆ ತಲಾಖ್ ಹೇಳಿದರೆ, ಅವನಿಗೆ ಕಾಲಾವಧಿಯೊಳಗೆ ಬೇರೆ ವಿವಾಹ ಕರ್ಮವಿಲ್ಲದೆಯೂ ಕಾಲಾವಧಿ ಕಳೆದರೆ ಹೊಸ ವಿವಾಹ ಕರ್ಮದ ಮೂಲಕವೂ ಅವಳನ್ನು ಪುನಃ ಪತ್ನಿಯಾಗಿ ಸ್ವೀಕರಿಸಬಹುದು. ಹೀಗೆ ಎರಡು ಸಲ ಆಗಬಹುದೆಂದು ಇಸ್ಲಾಂ ಒಪ್ಪುತ್ತದೆ. ಇಷ್ಟು ಅನುಕೂಲತೆ ಲಭಿಸಿಯೂ ಅವನು ಮೂರನೆಯ ಸಲ ಸಹ ಹೆಂಡತಿಗೆ ತಲಾಖ್ ಹೇಳಿ ಅಗಲುವುದಾದರೆ ಮಾತ್ರ ನಂತರ ಅವನಿಗೆ ಅವಳನ್ನು ಸ್ವೀಕರಿಸಲಿಕ್ಕೆ ಸಾಧ್ಯವಿಲ್ಲ. ಒಂದೇ ಸಂದರ್ಭದಲ್ಲಿ ಮೂರು ಸಲ ತಲಾಖ್ ಹೇಳುವುದು ಇಸ್ಲಾಮಿಕ ಅಧ್ಯಾಪನಗಳಿಗೆ ವಿರುದ್ಧ. ಈ ಸತ್ಯಾಂಶ, "ತಲಾಖ್ ಎರಡು ಸಲವಾಗಿದೆ. ನಂತರ ಒಂದೋ ಅವಳನ್ನು ನ್ಯಾಯೋಚಿತವಾಗಿ ಇರಿಸಿಕೊಳ್ಳಬೇಕು ಅಥವಾ ಔದಾರ್ಯಪೂರ್ವಕ ಬಿಟ್ಟುಬಿಡಬೇಕು" (2:230) ಎಂಬ ಖುರ್‌ಆನ್ ವಾಕ್ಯದಿಂದ ಸ್ಪಷ್ಟವಾಗಿಯೂ, ತಲಾಖ್ ಹೇಳಿದ ಬಳಿಕ ಕಾಲಾವಧಿ ಪಡೆದ ಸ್ತ್ರೀಯನ್ನು ಪುನಃ ವಿವಾಹವಾಗಬಹುದು (2;233) ಹಾಗೂ ಮೂರನೆಯ ತಲಾಖ್ ಹೇಳಿದ ಬಳಿಕ ಅವಳನ್ನು ವಿವಾಹವಾಗಬಾರದು (2:231) ಎಂಬ ಖುರ್‌ಆನ್ ವಚನಗಳಿಂದ ಸೂಚ್ಯವಾಗಿಯೂ ಗ್ರಾಹ್ಯವಾಗುತ್ತದೆ. ಒಂದೇ ಸಂದರ್ಭದಲ್ಲಿ ಮೂರು ತಲಾಖ್ ಹೇಳಬಾರದೆಂದು ಪ್ರವಾದಿ ಮುಹಮ್ಮದ್ (ಸ) ಸಹ ಹೇಳಿದ್ದಾರೆ. ಒಂದು ಹದೀಸ್ ಈ ರೀತಿ ಇದೆ: "ಒಬ್ಬನು ತನ್ನ ಪತ್ನಿಗೆ

ಒಂದೇ ಸಂದರ್ಭದಲ್ಲಿ ಮೂರು ಸಲ ತಲಾಖ್ ಹೇಳಿದುದಾಗಿ ಮುಹಮ್ಮದ್ ಪೈಗಂಬರರು ಅರಿತಾಗ ಅವರು ಕೋಪದಿಂದ ಎದ್ದು ನಿಂತುಕೊಂಡು, 'ನಾನು ನಿಮ್ಮ ಮಧ್ಯೆ ಇರುವಾಗಲೇ ಮಹಾಮಹಿಮನಾದ ಅಲ್ಲಾಹನ ಗ್ರಂಥದೊಂದಿಗೆ ಆತನು ವಿನೋದವಾಡುವುದೇ?' ಎಂದು ನುಡಿದರು.'' (ನಸಾಈ). ಇದರಿಂದ ಒಮ್ಮೆಲೇ ಮೂರು ತಲಾಖ್ ಹೇಳುವುದನ್ನು ಮುಹಮ್ಮದ್ ಪೈಗಂಬರರು ವಿರೋಧಿಸಿರುವರು ಎಂದು ಮಾತ್ರವಲ್ಲ, ಅದು ಅಲ್ಲಾಹನ ಗ್ರಂಥವಾದ ಪವಿತ್ರ ಖುರ್ಆನಿನ ಉಪದೇಶವನ್ನು ನಿರ್ಲಕ್ಷ್ಯ ಮಾಡಿ ಅದನ್ನು ಆಟಿಕೆಯನ್ನಾಗಿ ಮಾಡುವ ಒಂದು ಪ್ರವೃತ್ತಿ ಕೂಡ ಆಗಿದೆಯೆಂದು ಮನದಟ್ಟಾಗುತ್ತದೆ.

ಒಂದೇ ಸಂದರ್ಭದಲ್ಲಿ ಮೂರು ತಲಾಖ್ ಸಹ ಹೇಳಬಾರದೆಂದೂ, ಹೇಳಿದರೆ ಸಹ ಅದನ್ನು ಒಂದು ತಲಾಖ್ ಮಾತ್ರವೆಂದು ಗಣಿಸಲಾಗುವುದೆಂದೂ ಇಸ್ಲಾಂ ಕಲಿಸುತ್ತದೆ.

ಹದೀಸಿನ ಪಂಡಿತರಾದ ಕೆಲವರೂ ಇಮಾಮಿಯ್ಯ ಪಂಥದವರೂ ಅಹ್ಲ್‌ಬೈತಿಗೆ ಸೇರಿದ ಕೆಲವರೂ ಇಮಾಂ ಇಬ್ನು ಹಸ್ಮ್ ಮೊದಲಾದವರೂ, ಒಂದೇ ಕಾಲದಲ್ಲಿ ಒಮ್ಮೆಲೇ ಹೇಳಲ್ಪಡುವ ಮೂರು ತಲಾಖ್ ನಿಯಮ ವಿರುದ್ಧವಾದುದರಿಂದ ಒಂದು ತಲಾಖ್ ಸಹ ಆಗಲಾರದೆಂದು ಹೇಳಿದ್ದಾರೆ. ಹದೀಸಿನ ಪಂಡಿತರಲ್ಲಿ ಅಧಿಕಾಂಶರೂ ಹಝ್ರತ್ ಮುಹಮ್ಮದಿಬ್ನು ಇಸ್‌ಹಾಕ್, ಅತ್ತಾ, ಇಕ್ರಿಮ ಮುಂತಾದ ತಾಬಿಯೀಗಳೂ, ಇಬ್ನು ತೀಮಿಯ್ಯ, ಇಬ್ನು ಖಯ್ಯಿಂ, ಮುಹಮ್ಮದಿಬ್ನು ಇಬ್ರಾಹೀಂ, ಶೌಕಾನಿ ಮೊದಲಾದ ಪಂಡಿತರೂ, ಒಂದೇ ಸಂದರ್ಭದಲ್ಲಿ ಹೇಳುವ ಮೂರು ತಲಾಖ್ ಒಂದು ತಲಾಖ್ ಎಂದೇ ಪರಿಗಣಿಸಲಾಗುವುದೆಂದು ಹೇಳಿದ್ದಾರೆ. ಹಝ್ರತ್ ಇಬ್ನು ಅಬ್ಬಾಸ್‌ರವರ ಅಭಿಪ್ರಾಯ ಸಹ ಇದೇ ಪ್ರಕಾರವಾಗಿತ್ತೆಂದು ಒಂದು ಹೇಳಿಕೆಯಿಂದ ಮನವರಿಕೆಯಾಗುತ್ತದೆ. ಮಾತ್ರವಲ್ಲ, ಅವರು ನಿವೇದಿಸಿದ ಒಂದು ಹದೀಸಿನಲ್ಲಿ, ಒಂದೇ ಸಮಯದಲ್ಲಿ ಹೇಳುವ ಮೂರು ತಲಾಖ್ ಒಂದೆಂದು ಮಾತ್ರ ಎಣಿಸಲಾಗುವುದೆಂದು ಮುಹಮ್ಮದ್ ಪೈಗಂಬರರು ನುಡಿದಿದ್ದಾರೆಂದು ಪ್ರಸ್ತಾಪಿಸಲಾಗಿದೆ.

**ಆರನೆಯದಾಗಿ,** ಇಚ್ಛಾನುಸಾರ ವಿವಾಹ ವಿಚ್ಛೇದಗೊಳಿಸದಿರಲಿಕ್ಕೆ ಇಸ್ಲಾಂ ನಿರ್ದೇಶಿಸಿರುವ ಉಪಾಯ, ಮೂರು ಸಲ ತಲಾಖ್ ಹೇಳಿ ಪರಿತ್ಯಜಿಸಿದ ಪತ್ನಿಯನ್ನು ಪುನಃ ಮೊದಲ ಪತಿ ಸ್ವೀಕರಿಸಬಾರದೆಂಬ ನಿಯಮವಾಗಿದೆ. ಮತ್ತೆ ಅವಳು ಸ್ವೀಕರಿಸಲರ್ಹಳಾಗಬೇಕಾದರೆ, ಬೇರೊಬ್ಬನು ಅವಳನ್ನು ಮದುವೆಯಾಗಿ ಅವನು ಅವಳನ್ನು ಸ್ವಂತ ಇಚ್ಛೆಯಿಂದ ತಲಾಖ್ ಹೇಳಿ ಬಿಡುಗಡೆ ಮಾಡಬೇಕಾಗಿದೆ. ಅಂದರೆ, ಮೊದಲ ಗಂಡ ಅವಳನ್ನು ತನ್ನ ಸಹಧರ್ಮಿಣಿಯನ್ನಾಗಿ ಮಾಡಲು ಸ್ವಇಚ್ಛೆಯಿಂದ ಮದುವೆಯಾಗಿರುವ ಪ್ರಕಾರವೇ, ಅವರು ತಮ್ಮ ದಾಂಪತ್ಯಸಂಬಂಧ ಮುರಿದ ಬಳಿಕ, ಇನ್ನೊಬ್ಬನು ಅವಳನ್ನು ಎಂದೆಂದಿಗೂ ತನ್ನ ಸಹಧರ್ಮಿಣಿ ಮಾಡುವ ಉದ್ದೇಶದಿಂದ ಮದುವೆ ಮಾಡಿಕೊಂಡು, ಅನಂತರ ಇವರಿಗೆ ವಿವಾಹಸಂಬಂಧವನ್ನು ನಿರಾತಂಕವಾಗಿ ಮುಂದುವರಿಸಿಕೊಂಡು ಹೋಗಲು ನಿರ್ವಾಹವಿಲ್ಲದಾಗುವಾಗ ಈ ಎರಡನೆಯ ಗಂಡ ಸ್ವಇಚ್ಛೆಯಿಂದ ಅವಳನ್ನು ಪರಿತ್ಯಜಿಸಿದರೆ ಮಾತ್ರ ಮೊದಲ ಪತಿಗೆ ಬೇಕಾದರೆ ಅವಳನ್ನು ಮದುವೆಯಾಗಿ ತನ್ನ ಹೆಂಡತಿಯನ್ನಾಗಿ ಸ್ವೀಕರಿಸಬಹುದು. ಹೀಗೆ ಇಸ್ಲಾಂ ಒಂದು ನಿಯಮವನ್ನು ನಿರ್ದೇಶಿಸಿರುವುದು, ಗಂಡ ಹೆಂಡತಿಯನ್ನು ಸಾಧ್ಯವಾದಷ್ಟರ ಮಟ್ಟಿಗೆ ವಿವಾಹ ವಿಚ್ಛೇದನ ಮಾಡದಿರಲಿಕ್ಕೇ ಆಗಿದೆ. ಏಕೆಂದರೆ, ಎರಡನೆ ಪತಿ ಅವಳನ್ನು ಪರಿತ್ಯಜಿಸಿದ ನಂತರ ಮೊದಲ ಪತಿಗೆ ಪುನಃ ಅವಳನ್ನು ವಿವಾಹ ಮಾಡಿಕೊಳ್ಳಲು ಸಾಧ್ಯವಾಗುವ ಸಂದರ್ಭ ಬಹಳ ಅಪೂರ್ವವಾಗಿ ಮಾತ್ರ ಲಭಿಸಬಹುದು. ಆದ್ದರಿಂದ, ಮೂರು ತಲಾಖ್ ಸಹ ಹೇಳಿಬಿಟ್ಟರೆ, ನಂತರ ಪತ್ನಿಯನ್ನು ಪುನಃ ಸ್ವೀಕರಿಸಲಿಕ್ಕೆ ತನಗೆ ಅಸಾಧ್ಯವಾಗಬಹುದೆಂದು ಹೆದರಿ ಪತಿ ಅವಳಿಗೆ ಮೂರು ತಲಾಖ್ ಕೂಡ ಹೇಳಿ ಅಗಲುವುದರ ಬಗ್ಗೆ ಜಾಗ್ರತೆ ವಹಿಸುತ್ತಾನೆ.

ಒಟ್ಟಿನಲ್ಲಿ, ಪತಿ ಇಷ್ಟ ಬಂದಾಗ ತನ್ನ ಪತ್ನಿಯ ತಲಾಖ್ ಹೇಳುವುದರಿಂದ ಅವರ ವಿವಾಹಸಂಬಂಧ ಬೇರ್ಪಡುವುದೆಂದೂ ಒಂದೇ ಸಂದರ್ಭದಲ್ಲಿ ಹೇಳುವ ಮೂರು ತಲಾಖ್ ಮೂರಾಗಿಯೇ ಗಣಿಸಲಾಗುವುದೆಂದೂ ಮುಸ್ಲಿಮರು ಸರ್ವಸಾಮಾನ್ಯವಾಗಿ ಅಂಗೀಕರಿಸಿರುವರಾದರೂ ಅದು ಇಸ್ಲಾಮಿನ ಅಧ್ಯಾಪನಕ್ಕೆ ವಿರುದ್ಧವಾದುದರಿಂದ ಇಸ್ಲಾಮಿಕ ನಿಯಮವಾಗುವುದೇ ಇಲ್ಲ.

ಇಸ್ಲಾಮಿನ ಅಧ್ಯಾಪನ ಪ್ರಕಾರ ಯಾರಿಗೂ ತನ್ನ ಪತ್ನಿಯನ್ನು ಯಥೇಷ್ಟ ತಲಾಖ್ ಹೇಳಿ ಬಿಟ್ಟುಬಿಡಲಿಕ್ಕೆ ಆಗದೆಂದೂ ಯೋಗ್ಯ ಕಾರಣದಿಂದ, ಅದು ಸಹ ಕೆಲವು ಪ್ರತ್ಯೇಕ ನಿಬಂಧನೆಗಳಿಗೆ ಒಳಗಾದ ತರದಲ್ಲಿ ಮಾತ್ರವೇ ಹಾಗೆ ಮಾಡಬಹುದೆಂದೂ ಮೇಲಿನ ವಿವರಣೆಯಿಂದ ಸ್ಪಷ್ಟವಾಗುತ್ತದೆ. ಮಾತ್ರವಲ್ಲ, ಯಾರೂ ತಲಾಖ್ ಹೇಳುವುದು ಸ್ವಂತ ಇಷ್ಟಾನುಸಾರವೂ ಪ್ರಜ್ಞಾಸಹಿತ ವಾಗಿಯೂ ಆಗಿರಬೇಕೆಂದು ಸಹ ಅದರಿಂದ ಮನಗಾಣ ಬಹುದು. ಆದ್ದರಿಂದ, ಗಂಡ ಹೆಂಡತಿಯೊಡನೆ ನಾನು ನಿನ್ನ ವಿವಾಹಸಂಬಂಧವನ್ನು ಮುರಿದಿದ್ದೇನೆ ಎಂದು ಮೂರು ಬಾರಿ ಒಂದೇ ಸವನೆ ಹೇಳಿದರೆ ಅದರಿಂದ ಆ ದಾಂಪತ್ಯಸಂಬಂಧ ಬೇರ್ಪಡುವುದಿಲ್ಲ. ಹಾಗೆಯೇ ಒಬ್ಬನು ಮದ್ಯದ ಅಮಲಿನಲ್ಲಿ ಹೇಳಿದರೆ ಸಹ ಇಸ್ಲಾಮಿಕ ನಿಯಮ ಪ್ರಕಾರ ಅದು ಸಿಂಧುವಾಗುವುದಿಲ್ಲ. ಒಬ್ಬ ಮುಸ್ಲಿಂ ಮದ್ಯಪಾನ ಮಾಡುವುದು ಯಾವ ರೀತಿ ಇಸ್ಲಾಮಿಕ ಪ್ರವೃತ್ತಿಯಲ್ಲವೋ ಅದೇ ರೀತಿ ಮದ್ಯದ ಗುಂಗಿನಲ್ಲಿ ಅವನು ತನ್ನ ಹೆಂಡತಿಗೆ ತಲಾಖ್ ನೀಡಿ ಅಗಲುವುದೂ ಇಸ್ಲಾಮಿಕವಲ್ಲ. ಒಟ್ಟಾರೆ, ಹಾಗೆ ಮತ್ತೇರಿದ ಸಂದರ್ಭದಲ್ಲಿ ಹೇಳುವ ತಲಾಖ್ ಸಿಂಧುವಾಗದು. ತಲಾಖ್ ಹೇಳುವುದು ದಾಂಪತ್ಯ ಜೀವನವನ್ನು ಮುಂದುವರಿಸಿಕೊಂಡು ಹೋಗಲು ನಿರ್ವಾಹವಿಲ್ಲದ ಹಂತದಲ್ಲಿ ಮಾತ್ರವಾಗಿರಬೇಕು ಹಾಗೂ ಮುಟ್ಟಾದ ಕಾಲವಲ್ಲಾಗಲಿ ಸಂಯೋಗ ಉಂಟಾದ ಶುದ್ಧಿಕಾಲವಲ್ಲಾಗಲಿ ತಲಾಖ್ ಹೇಳಬಾರದೆಂಬ ಇಸ್ಲಾಮಿನ ಉಪದೇಶದಿಂದಲೇ, ಮದ್ಯದ ಮತ್ತಿನಲ್ಲಿ ಹೇಳುವ ತಲಾಖ್ ಸಿಂಧುವಾಗದೆಂದು ಮನವರಿಕೆಯಾಗುತ್ತದೆ. ಏಕೆಂದರೆ ಮತ್ತೇರಿ ತಲೆಗೆ ನಿಯಂತ್ರಣವಿಲ್ಲದ ಯಾವನಿಗಾದರೂ ಈ ನಿಬಂಧನೆಗಳನ್ನು ಪಾಲಿಸಲಿಕ್ಕೆ ಸಾಧ್ಯವಿಲ್ಲ. ಮಾತ್ರವಲ್ಲ, ಇಸ್ಲಾಂ ಧರ್ಮದ ಅಧ್ಯಾಪನ ಪ್ರಕಾರ, ಒಬ್ಬನು ಮಾಡಿದ ಕೆಲಸ ಅವನದೆಂದು ಗಣಿಸಲ್ಪಡಬೇಕಾದರೆ ಅದು ಅವನು ಸ್ವತಂತ್ರ ಬುದ್ಧಿಯಿಂದಲೂ ಯಾರ ನಿರ್ಬಂಧವಾಗಲಿ ಪ್ರೇರಣೆಯಾಗಲಿ ಇಲ್ಲದೆಯೂ ಮಾಡಿರಬೇಕಾಗಿದೆ. ಈ ನಿಯಮ ಪ್ರಕಾರ ಮದ್ಯದ ಅಮಲಿನಲ್ಲಿ ಹೇಳುವ ತಲಾಖ್ ಇಸ್ಲಾಮಿಕ ತಲಾಖ್ ಎಂದು ಗಣಿಸಲ್ಪಡಲಾರದು. ಮಾತ್ರವಲ್ಲ, ಪ್ರವಾದಿ ಮುಹಮ್ಮದ್(ಸ) ಹೀಗೆ ನುಡಿದಿದ್ದಾರೆ: ''ಬುದ್ಧಿ ಸ್ವಾಧೀನದಲ್ಲಿಲ್ಲದವನ ಮತ್ತು ಭ್ರಾಂತನ ತಲಾಖ್ ಹೊರತು ಎಲ್ಲಾ ತಲಾಖ್ ಸಮ್ಮತನೀಯ'' (ತಿರ್ಮುದಿ). ''ನಿರ್ಬಂಧಪೂರ್ವಕವಾದ ತಲಾಖ್ ನ್ಯಾಯಬದ್ಧವಲ್ಲ''(ಅಬೂ ದಾವೂದ್). ಬುದ್ಧಿ ಸ್ಥಿಮಿತದಲ್ಲಿಲ್ಲದವರು ಹೇಳುವ ತಲಾಖ್ ಸಿಂಧುವಾಗದೆಂದು ಹಝ್ರತ್ ಉಸ್ಮಾನ್, ಹಝ್ರತ್ ಆಲೀ, ಹಝ್ರತ್ ಇಬ್ನು ಅಬ್ಬಾಸ್ ಮೊದಲಾದ ಮಹನೀಯರು ಹೇಳಿರುವರೆಂದು ಇಮಾಂ ಬುಖಾರಿ ತನ್ನ ಹದೀಸ್ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಒಟ್ಟಿನಲ್ಲಿ ಮದ್ಯದ ಮತ್ತಿನಲ್ಲಿ ಹೇಳುವ ತಲಾಖ್ ಎಂದಿಗೂ ಇಸ್ಲಾಮಿನ ದೃಷ್ಟಿಯಲ್ಲಿ ಧರ್ಮಬದ್ಧವಲ್ಲ,

ಇನ್ನು, ತಲಾಖ್ ಹೇಳಿ ಬಿಡುಗಡೆಗೊಳಿಸಿದ ಪತ್ನಿಯನ್ನು ಪುನಃ ಮೊದಲನೆಯ ಪತಿಯೇ ಸ್ವೀಕರಿಸುವುದರ ಕುರಿತು ಇಸ್ಲಾಂ ಕಲಿಸುವುದೇನೆಂದು ನೋಡೋಣ.

ವಿವಾಹ ವಿಚ್ಛೇದನ ಸಂಪೂರ್ಣವಾದ ನಂತರ ಯಾವೊಬ್ಬನಾದರೂ ತನ್ನ ಹೆಂಡತಿಯನ್ನು ಪುನಃ ಪಡೆಯಲು ಬಯಸುವುದಿದ್ದರೆ, ಅವನು ತಲಾಖ್ ಕೊಟ್ಟ ಪತ್ನಿಯನ್ನು ಇನ್ನೊಬ್ಬನಿಗೆ ಮದುವೆ ಮಾಡಿಸಿ ಅವನಿಂದ ತಲಾಖ್ ಹೇಳಿಸಿದ ನಂತರ ಮೊದಲ ಗಂಡನಿಗೆ ಅವಳನ್ನು ಪಡೆಯಲು ಸಾಧ್ಯವೆಂದು ಹೇಳಲ್ಪಡುತ್ತದೆ.

ಒಬ್ಬನು ತಾನು ಬಿಟ್ಟ ಹೆಂಡತಿಯನ್ನು ಪುನಃ ಪಡೆಯಲಿಕ್ಕಾಗಿ ಅವಳನ್ನು ಇನ್ನೊಬ್ಬನಿಗೆ ಮದುವೆ ಮಾಡಿಸಿ ಕೊಡಬೇಕೆಂಬ ನಿಯಮ ಇಸ್ಲಾಂ ಧರ್ಮದಲ್ಲಿಲ್ಲ. ಬದಲಿಗೆ, ಹಾಗೆ ಮಾಡುವುದು ಮಹಾ ಪಾಪವೂ ಅನ್ಯಾಯವೂ ಎಂದು ಇಸ್ಲಾಂ ಬೋಧಿಸುತ್ತದೆ. ಆದರೆ ನಿರ್ಭಾಗ್ಯವಶಾತ್ ಇಂದು ಮುಸ್ಲಿಮರು ಧರ್ಮವಿರುದ್ಧವಾದ ಈ ನಿಷಿದ್ಧ ಸಂಪ್ರದಾಯವನ್ನು ಇಸ್ಲಾಮಿಕ ವಿಧಿಯೆಂಬ ರೀತಿಯಲ್ಲಿ ಸ್ವೀಕರಿಸಿ ಅದನ್ನು ಮುಸ್ಲಿಂ ಪಂಡಿತರು ಸಮರ್ಥಿಸಿರುವುದರಿಂದ, ಯಾರಾದರೂ ಈ ರೂಢಿಯನ್ನು ಇಸ್ಲಾಮಿಕವೆಂದು ಭಾವಿಸಿದರೆ ಆಶ್ಚರ್ಯಪಡಲಿಕ್ಕಿಲ್ಲ. ಅಮುಸ್ಲಿಮರು ಮಾತ್ರವಲ್ಲ, ಮುಸ್ಲಿಮರು ಸಹ ಸಾಮಾನ್ಯವಾಗಿ ಈ ನಿಕೃಷ್ಟ ಆಚಾರವನ್ನು ಇಸ್ಲಾಮಿನ ಒಂದು ವಿಧಿಯೆಂದು ತಿಳಿದುಕೊಂಡಿದ್ದಾರೆ. ಅದು ಖಂಡಿತವಾಗಿ ನಿರಪರಾಧಿಯಾದ ಹೆಣ್ಣಿನ ಶೋಷಣೆಗೂ ಮಾನಹಾನಿಗೂ ಕಾರಣವಾಗುತ್ತದೆ. ಒಬ್ಬನು ಅವಿವೇಕದಿಂದಾಗಲಿ, ಕ್ರೋಧದಿಂದಾಗಲಿ ತನ್ನ

ಹೆಂಡತಿಗೆ ಥಟ್ಟನೆ ಮೂರು ತಲಾಖ್ ಸಹ ಹೇಳಿ ಪರಿತ್ಯಜಿಸಿ. ಮರುಕ್ಷಣದಲ್ಲಿ ಅವಳನ್ನು ತಿರುಗಿ ಪಡೆಯಲು ಬಯಸುವುದಿದ್ದರೆ ಅವಳು ಒಂದು ರಾತ್ರಿಯಾದರೂ ಇನ್ನೊಬ್ಬ ಗಂಡನನ್ನು ವರಿಸಬೇಕೆಂದೂ, ಹಾಗೆ ಆದರೆ ಮಾತ್ರ ಮೊದಲ ಗಂಡನಿಗೆ ಅವಳನ್ನು ಸ್ವೀಕರಿಸಲು ಸಾಧ್ಯವೆಂದೂ ಹೇಳುವುದು ಖಂಡಿತವಾಗಿಯೂ ಅವಳ ಮಾನಹಾನಿಗೆ ಕಾರಣವಾಗುತ್ತದೆಂದು ಆಲೋಚಿಸುವವರಿಗೆ ಮನವರಿಕೆಯಾಗಬಹುದು. ಇಸ್ಲಾಮಿಗೆ ಮೊದಲು, ಈ ನಿಷಿದ್ಧ ಆಚಾರ ಅರಬ್ ರಾಜ್ಯದಲ್ಲಿ ವಾಡಿಕೆಯಲ್ಲಿತ್ತು. ಪ್ರವಾದಿ ಮುಹಮ್ಮದ್(ಸ)ರವರು ಈ ದುರಾಚಾರವನ್ನು ಕಠಿಣವಾಗಿ ವಿರೋಧಿಸಿ ಕೊನೆಗೊಳಿಸಿದರು. ಆದರೆ ಅಕಟಾ! ಕಾಲಾಂತರದಲ್ಲಿ ಆ ಪುಣ್ಯ ಪುರುಷರ ಅನುಯಾಯಿಗಳೆಂದು ಅಭಿಮಾನಗೊಳ್ಳುವವರು ಧರ್ಮವಿರುದ್ಧವಾದ ಹಲವು ಆಚಾರಾನುಷ್ಠಾನಗಳನ್ನು ಕೈಗೊಳ್ಳುವುದರೊಂದಿಗೆ ನಿಷಿದ್ಧವೂ ನಿಕೃಷ್ಟವೂ ಆದ ಈ ಸಂಪ್ರದಾಯವನ್ನು ಸಹ ಅಂಗೀಕರಿಸಿದರು. ಇದು ಇಸ್ಲಾಂ ಕಠಿಣವಾಗಿ ವಿರೋಧಿಸಿದ್ದೆಂದು ತಿಳಿದಿದ್ದೂ ಧರ್ಮಪಂಡಿತರು ಅದಕ್ಕೆ ಸೈಗೊಡುತ್ತಾರೆ. ಈ ಪ್ರವೃತ್ತಿ ದೇವಶಾಪಕ್ಕೆ ಕಾರಣವಾಗುವುದೆಂದು ಮುಹಮ್ಮದ್ ಪೈಗಂಬರರು ಎಚ್ಚರಿಕೆ ನೀಡಿದ್ದಾರೆ. ಒಂದು ನಿವೇದನದಲ್ಲಿ ಹಝ್ರತ್ ಇಬ್ನು ಮಸ್‌ಊದ್(ರ) ಹೀಗೆ ಹೇಳಿದ್ದಾರೆ: "ತ್ಯಜಿಸಲ್ಪಟ್ಟ ಪತ್ನಿಯನ್ನು ಮೊದಲ ಗಂಡನಿಗೆ ವಿವಾಹಕ್ಕೆ ಅರ್ಹಳನ್ನಾಗಿ ಮಾಡಲು ಅವಳನ್ನು ತಾತ್ಕಾಲಿಕವಾಗಿ ಮದುವೆಯಾಗುವವನನ್ನೂ ಅವಳನ್ನು ಯಾರಿಗಾಗಿ ವಿವಾಹಕ್ಕೆ ಅರ್ಹಳನ್ನಾಗಿ ಮಾಡಲಾಗುವುದೋ ಅವನನ್ನೂ (ಮೊದಲ ಗಂಡನನ್ನೂ) ಮುಹಮ್ಮದ್ ಪೈಗಂಬರರು ಶಪಿಸಿದ್ದಾರೆ." (ದಾರಿಮೀ, ತಿರ್ಮದೀ ಇತ್ಯಾದಿ). ಮತ್ತೊಂದು ನಿವೇದನದಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ: "ಎರವಲು ಪಡೆಯುವ ಹೋತನ ಕುರಿತು ನಾನು ನಿಮಗೆ ಹೇಳಿಕೊಡಲೇ? ಎಂದೊಮ್ಮೆ ಪೈಗಂಬರರು ಕೇಳುತ್ತಾ, ಶಿಷ್ಯರೊಡನೆ ಹೀಗೆ ಹೇಳಿದರು: ಅದು ಮುಹಿಲ್ಲ್ (ತ್ಯಜಿಸಲ್ಪಟ್ಟ ಪತ್ನಿಯನ್ನು ತ್ಯಜಿಸಿದ ಗಂಡನಿಗೇ ವಿವಾಹಕ್ಕೆ ಅರ್ಹಳನ್ನಾಗಿ ಮಾಡಲು ಅವಳನ್ನು ತತ್ಕಾಲಕ್ಕೆ ಮದುವೆಯಾಗುವವನು). ಅವನಿಗೂ ಯಾರಿಗೋಸ್ಕರ ಅವನು ಹಾಗೆ ಮದುವೆಯಾಗುತ್ತಾನೋ ಅವನಿಗೂ ಅಲ್ಲಾಹನ ಶಾಪವಿದೆ" (ಇಬ್ನುಮಾಜಃ). ಪೈಗಂಬರರ ಈ ನುಡಿಯಿಂದ ತ್ಯಜಿಸಲ್ಪಟ್ಟ ಪತ್ನಿಯನ್ನು ಮೊದಲ ಗಂಡನಿಗೆ ಪುನಃ ಸ್ವೀಕಾರಾರ್ಹಳನ್ನಾಗಿ ಮಾಡಲು ಒಂದು ಉಪಾಯವಾಗಿ ತತ್ಕಾಲಕ್ಕೆ ಮಾತ್ರ ಇನ್ನೊಬ್ಬನು ಮದುವೆಯಾಗುವುದು ಧರ್ಮವಿರುದ್ಧ ಮಾತ್ರವಲ್ಲ, ಅದು ದೇವಶಾಪಕ್ಕೆ ಕಾರಣವಾಗುವ ಒಂದು ಪಾಪಕರ್ಮ ಕೂಡ ಎಂದು ಸ್ಪಷ್ಟವಾಗುತ್ತದೆ. ಆ ರೀತಿ ಮದುವೆಯಾಗುವವನನ್ನು, ಜೊತೆಗೂಡಿಸಲು ಎರವಲು ಪಡೆಯುವ ಹೋತನಿಗೆ ಹೋಲಿಸಿಕೊಂಡು ಮುಹಮ್ಮದ್ ಪೈಗಂಬರರು, ಈ ಸಂಪ್ರದಾಯ ಬಹಳ ನಿಕೃಷ್ಟವೂ ಮ್ಲಾನಿಯೂ, ಅದು ಆ ಸ್ತ್ರೀಗೆ ಅತ್ಯಂತ ಮಾನಹಾನಿಯುಂಟು ಮಾಡುವಂಥ ಒಂದು ಪ್ರವೃತ್ತಿಯೆಂದೂ ಮನಗಾಣಿಸಿಕೊಟ್ಟಿದ್ದಾರೆ. ಅಷ್ಟೇ ಅಲ್ಲ, ಈ ದುಷ್ಟ ಆಚಾರ ಇಸ್ಲಾಮಿಗೆ ಮೊದಲು ಅಧರ್ಮ ಕಾಲದಲ್ಲಿ ವಾಡಿಕೆಯಲ್ಲಿದ್ದ ಒಂದು ಕ್ರಮವಾಗಿತ್ತೆಂದು ಸಹ ಪ್ರಸ್ತುತ ವಚನದಿಂದ ತಿಳಿದು ಬರುತ್ತದೆ.

ಇಸ್ಲಾಮಿನ ದೃಷ್ಟಿಯಲ್ಲಿ ವಿವಾಹವೆಂಬುದು ಕಾಲ ನಿರ್ಣಯವಿಲ್ಲದೆಯೇ ಎಂದೆಂದಿಗೂ ಒಬ್ಬಳು ಸ್ತ್ರೀಯನ್ನು ಸಹಧರ್ಮಿಣಿಯನ್ನಾಗಿ ಮಾಡಲು ಅವಳೊಡನೆ ನಿಯಮಾನುಸಾರ ಉಂಟುಮಾಡುವ ಸಂಬಂಧವಾಗಿದೆ. ಆದ್ದರಿಂದ ಒಂದು ಕ್ಲಪ್ತಕಾಲಕ್ಕಾಗಿ ಮಾಡುವ ವಿವಾಹ ಮತ್ತು ಸ್ತ್ರೀಯನ್ನು ತನ್ನ ಧರ್ಮಪತ್ನಿಯಾಗಿ ಸ್ವೀಕರಿಸುವ ಉದ್ದೇಶ ವಿನಾ ಮಾಡುವ ವಿವಾಹ ಇಸ್ಲಾಮೀ ಅಧ್ಯಾಪನವನುಸಾರ ವಿವಾಹವಾಗುವುದಿಲ್ಲ. ಶಿಯಾ ಪಂಥಕ್ಕೆ ಸೇರಿದ ಮುಸ್ಲಿಮರು ಅಂಗೀಕರಿಸಿರುವ 'ಮುತ್‌ಅ' ಅಥವಾ ಕಾಲ ನಿರ್ಣಯದ ವಿವಾಹ ಇಸ್ಲಾಮಿಕವಲ್ಲವೆಂದು ಸುನ್ನೀ ಪಂಥದವರು ಹೇಳುವುದು ಕಾಲನಿರ್ಣಯ ನಿಮಿತ್ತ ಅದು ಯಥಾರ್ಥದಲ್ಲಿ ವಿವಾಹವಲ್ಲದಾಗುವುದರಿಂದಲೇ ಆಗಿದೆ. 'ಮುತ್‌ಅ' ಧರ್ಮಬದ್ಧವಲ್ಲವೆಂದಾಗುವಾಗ, ತ್ಯಜಿಸಲ್ಪಟ್ಟ ಹೆಂಡತಿಯನ್ನು ತ್ಯಜಿಸಿದ ಗಂಡನಿಗೇ ಸ್ವೀಕರಿಸಲರ್ಹಳನ್ನಾಗಿಸಲು ಮಾಡಿಸುವ ವಿವಾಹ ಅದಕ್ಕಿಂತ ಹೆಚ್ಚು ಧರ್ಮವಿರುದ್ಧವಾಗುತ್ತದೆ. ಏಕೆಂದರೆ ಈ ತಾತ್ಕಾಲಿಕ ವಿವಾಹದಲ್ಲಿ ಕಾಲ ನಿರ್ಣಯ ಇರುವುದು ಮಾತ್ರವಲ್ಲ, ಈ ಮದುವೆಯ ಉದ್ದೇಶವೇ ಸ್ತ್ರೀಯನ್ನು ಸ್ವಂತ ಧರ್ಮಪತ್ನಿಯಾಗಿ

ಸ್ವೀಕರಿಸುವುದು ಸಹ ಅಲ್ಲ. ಆದುದರಿಂದ ಈ ವಾಡಿಕೆ ಇಸ್ಲಾಮೀ ನಿಯಮದ ಪ್ರಕಾರ ಮದುವೆಯೇ ಅಲ್ಲವೆಂದು ಆಲೋಚಿಸುವವರಿಗೆ ಸುಲಭದಲ್ಲಿ ಮನದಟ್ಟಾಗಬಹುದು. ಹಾಗೆ ಅದು ವಿವಾಹವೇ ಅಲ್ಲವೆಂದಾಗುವಾಗ, ಮೂರು ಬಾರಿ ತಲಾಖ್ ಹೇಳಿ ತ್ಯಜಿಸಿದ ಸ್ತ್ರೀಯನ್ನು ಪುನಃ ಪತ್ನಿಯಾಗಿ ಸ್ವೀಕರಿಸಲಿಕ್ಕೆ ಇಂತಹ ಲಜ್ಜಾಕರವಾದ ಒಂದು ಕ್ರಮವನ್ನು ರೂಢಿಗೊಳಿಸಿ ಅದನ್ನು ವಿವಾಹವೆಂದು ಕರೆಯುವುದು ಇಸ್ಲಾಂ ಧರ್ಮದ ದೃಷ್ಟಿಯಲ್ಲಿ ಎಂದಿಗೂ ಸಿಂಧುವಾಗದು. ಕಾಲನಿರ್ಣಯ ಸಹಿತ ಮಾಡುವ ವಿವಾಹ ವ್ಯಭಿಚಾರದ ಒಂದು ಪ್ರಭೇದ ಮಾತ್ರವೇ ಆಗುತ್ತದೆ. ಧರ್ಮಪತ್ನಿಯನ್ನಾಗಿ ಮಾಡುವ ಉದ್ದೇಶದಿಂದ ಹೊರತು ಒಂದು ಸ್ತ್ರೀಯೊಡನೆ ಹೊಂದುವ ತಾತ್ಕಾಲಿಕ ಸಂಬಂಧಕ್ಕೆ ವಿವಾಹ ಎಂದು ಹೆಸರಿಡುವುದು ವಿವಾಹವನ್ನು ಪರಿಹಾಸ್ಯಕ್ಕೆ ಗುರಿಪಡಿಸುವಂಥ ಹಾಗೂ ಸ್ತ್ರೀಯನ್ನು ಅಪಮಾನಿಸುವಂಥ ಒಂದು ಪ್ರವೃತ್ತಿಯಾಗಿದೆ. ಪವಿತ್ರ ಖುರ್‌ಆನ್ ಒಂದು ಕಡೆಯಲ್ಲಿ ಹೀಗೆ ಹೇಳುತ್ತದೆ: "ಅವರು (ಹೆಂಡಂದಿರು) ನಿಮಗೆ ಉಡುಪು; ನೀವು ಅವರಿಗೆ ಉಡುಪು" (2:188). ಹೀಗೆ ಪತಿ-ಪತ್ನಿಯರು ಪರಸ್ಪರ ಉಡುಗೆಯಾಗಿರುವವರೆಂದು ಹೇಳುತ್ತಾ ಪವಿತ್ರ ಖುರ್‌ಆನ್ ಯಾವ ರೀತಿಯಲ್ಲಿ ಉಡುಪು ಸುಖವನ್ನೂ ಆರೋಗ್ಯವನ್ನೂ ನೀಡಲಿಕ್ಕೂ ನ್ಯೂನತೆಗಳನ್ನು ಮರೆಮಾಚಲಿಕ್ಕೂ ಸೌಂದರ್ಯವನ್ನು ವರ್ಧಿಸಲಿಕ್ಕೂ ಉಪಯುಕ್ತವಾಗುತ್ತದೋ, ಅದೇ ಪ್ರಕಾರವೇ ಗಂಡ-ಹೆಂಡಿರ ಪರಸ್ಪರ ಸಂಬಂಧ ಅವರಲ್ಲಿ ಸದೃಶಗಳಾದ ಆಧ್ಯಾತ್ಮಿಕ ಮತ್ತು ಶಾರೀರಿಕ ಗುಣಗಳನ್ನು ಉತ್ಪಾದಿಸಲು ಪರ್ಯಾಪ್ತವಾಗಿರುವುದೆಂದು ಮನಗಾಣಿಸುತ್ತದೆ. ಈ ವಿಧ ಗುಣಗಳು, ಕಾಲನಿರ್ಣಯರಹಿತವಾದ ಎಂದೆಂದಿಗೂ ಸ್ತ್ರೀಯನ್ನು ಸಹಧರ್ಮಿಣಿಯನ್ನಾಗಿ ಮಾಡುವ ವಿವಾಹ ಮುಖೇನ ಮಾತ್ರವೇ ಸಿದ್ಧಿಸುತ್ತದೆಯಷ್ಟೆ. ಪವಿತ್ರ ಖುರ್‌ಆನ್ ಇನ್ನೊಂದೆಡೆಯಲ್ಲಿ, ವಿವಾಹವಾಗಲು ನಿಷೇಧಿಸಲ್ಪಟ್ಟ ಬಂಧು ಸ್ತ್ರೀಯರ ಕುರಿತು ವಿವರಿಸುತ್ತಾ ಹೀಗೆ ಹೇಳುತ್ತದೆ: "ಇವರ ಹೊರತಾದ ಸ್ತ್ರೀಯರನ್ನು ನೀವು ಧನ ಕೊಟ್ಟು, ವ್ಯಭಿಚಾರಕ್ಕಾಗಿಯಲ್ಲ; ಸಹಧರ್ಮಿಣಿಗಳಾಗಿ ಸ್ವೀಕರಿಸುವುದಕ್ಕೆ ನಿಮಗೆ ಸಮ್ಮತಿಯನ್ನೀಯಲಾಗಿದೆ" (4:25). ಹೀಗೆ ಖುರ್‌ಆನಿನ ಹಲವು ವಚನಗಳಿಂದಲೂ ಪೈಗಂಬರರ ನುಡಿಗಳಿಂದಲೂ ಯಥಾರ್ಥ ರೀತಿಯಲ್ಲಿರುವ ವಿವಾಹಸಂಬಂಧದ ಉದ್ದೇಶವೇನೆಂದೂ, ಕಾಲನಿರ್ಣಯ ಸಹಿತದ ಅಥವಾ ಸ್ತ್ರೀಯನ್ನು ಧರ್ಮಪತ್ನಿ ಮಾಡುವ ಉದ್ದೇಶದಿಂದ ಹೊರತಾದ ಸಂಬಂಧ ಸರಿಯಾದ ವಿವಾಹವಾಗಲಿಕ್ಕಿಲ್ಲವೆಂದೂ ಮನವರಿಕೆಯಾಗುತ್ತದೆ.

ವಿವಾಹ ವಿಚ್ಛೇದನಗೊಂಡ ಸ್ತ್ರೀಯನ್ನು ಅವಳ ಮೊದಲ ಗಂಡ ಪುನಃ ಪತ್ನಿಯಾಗಿ ಸ್ವೀಕರಿಸಲಿಕ್ಕೋಸ್ಕರ ಅವಳನ್ನು ತಾತ್ಕಾಲಿಕವಾಗಿ ಇನ್ನೊಬ್ಬ ಮದುವೆಯಾಗುವುದು ಮೃಗೀಯವೂ ದೇವಕೋಪಕ್ಕೆ ಈಡಾಗುವಂಥದ್ದೂ ಸ್ತ್ರೀಗೆ ಮಾನಹಾನಿಯುಂಟುಮಾಡುವಂಥದ್ದೂ ಆದ ಒಂದು ಪ್ರವೃತ್ತಿಯಾಗಿದ್ದು ಸಹ ಮುಸ್ಲಿಮರು ಈ ನೀಚ ಸಂಪ್ರದಾಯವನ್ನು ಧರ್ಮವಿಧಿಯೆಂಬಂತೆ ಆಚರಿಸಲು ಕಾರಣವಾದುದು ಒಂದೇ ಸಂದರ್ಭದಲ್ಲಿ ಹೇಳುವ ಮೂರು ತಲಾಖನ್ನು ಮೂರೆಂದೇ ಧರ್ಮಪಂಡಿತರು ಪರಿಗಣಿಸಿ ಅದನ್ನು ಇಸ್ಲಾಮಿಕ ನಿಯಮವೆಂದು ಅಂಗೀಕರಿಸಿದ್ದರಿಂದಾಗಿದೆ. ಒಂದೇ ಸಮಯದಲ್ಲಿ ಮೂರು ತಲಾಖ್ ಸಹ ಹೇಳಬಾರದೆಂದೂ ಹಾಗೆ ಹೇಳುವುದಾದರೆ ಅದನ್ನು ಒಂದೆಂದು ಮಾತ್ರ ಗಣಿಸಬೇಕೆಂಬ ಇಸ್ಲಾಮಿನ ನಿರ್ದೇಶವನ್ನು ನಿಯಮವೆಂದು ಅಂಗೀಕರಿಸಿದ್ದರೆ, ಒಬ್ಬನು ಒಂದೇ ಕಾಲದಲ್ಲಿ ಮೂರಲ್ಲ ಮುನ್ನೂರು ತಲಾಖ್ ಹೇಳಿದರೂ ಅವನ್ನು ಒಂದು ತಲಾಖೆಂದು ಎಣಿಸಲಾಗುವುದರಿಂದ, ತಲಾಖ್ ಪಡೆದವಳನ್ನು ಪುನಃ ಸ್ವೀಕರಿಸಲಿಕ್ಕಾಗಿ ತತ್ಕಾಲಕ್ಕೆ ಅವಳನ್ನು ಮತ್ತೊಬ್ಬನಿಗೆ ಮದುವೆ ಮಾಡಿಕೊಡುವ ನಿಷಿದ್ಧವೂ ಮೃಗೀಯವೂ ಆದ ಕ್ರಮವನ್ನು ಕೈಗೊಳ್ಳಲಿಕ್ಕಾಗಲಿ ಉಭಯ ಕಡೆಯವರೂ ಶಾಪಗ್ರಸ್ತರಾಗಲಿ ಆಗುತ್ತಿರಲಿಲ್ಲ. ಏಕೆಂದರೆ, ಒಬ್ಬನು ತನ್ನ ಪತ್ನಿಗೆ ಒಂದು ಸಲ ಯಾ ಎರಡು ಸಲ ತಲಾಖ್ ಹೇಳುವುದಾದರೆ, ಕಾಲಾವಧಿಯೊಳಗೆ ಪ್ರತ್ಯೇಕ ವಿವಾಹ ಕರ್ಮ ವಿನಾ ಮತ್ತು ಕಾಲಾವಧಿ ಕಳೆದರೆ ಹೊಸ ವಿವಾಹ ಕರ್ಮ ಮೂಲಕ ಅವಳನ್ನು ಪುನಃ ಪತ್ನಿಯಾಗಿ ಸ್ವೀಕರಿಸಬಹುದಾಗಿದೆ. ಹಾಗೆ ಸ್ವೀಕರಿಸಲಿಕ್ಕೆ ಅವಳನ್ನು ಇನ್ನೊಬ್ಬನಿಗೆ ಮದುವೆ ಮಾಡಿಕೊಡುವುದೂ ಅವನು ಅವಳನ್ನು ತ್ಯಜಿಸುವುದೂ ಅಗತ್ಯವಿಲ್ಲ. ಆದರೆ,

ಇಸ್ಲಾಮಿೂ ಧರ್ಮೋಪದೇಶಕ್ಕೆ ವಿರುದ್ಧವಾಗಿ ಒಂದೇ ಸಂದರ್ಭದಲ್ಲಿ ಹೇಳುವ ಮೂರು ತಲಾಖನ್ನು ಮೂರಾಗಿಯೇ ಪರಿಗಣಿಸುವುದರ ಫಲವಾಗಿ ಶಾಪಗ್ರಸ್ತ ಮತ್ತು ನಿಷಿದ್ಧವೆಂದು ಇಸ್ಲಾಂ ಹೇಳಿಕೊಡುವ ಲಜ್ಜಾಕರವಾದ ಮತ್ತೊಂದು ಸಂಪ್ರದಾಯವನ್ನು ಇಸ್ಲಾಮಿೂ ನಿಯಮವೆಂದು ಮುಸ್ಲಿಮರು ಸ್ವೀಕರಿಸಬೇಕಾಯಿತು. ಇದು ಇಸ್ಲಾಮಿಕ ಅಧ್ಯಾಪನವನ್ನು ಅಲಕ್ಷ್ಯ ಮಾಡಿದ್ದಕ್ಕೆ ಮುಸ್ಲಿಮರು ಅನುಭವಿಸಬೇಕಾಗಿ ಬಂದ ಒಂದು ಶಿಕ್ಷೆಯೆಂದು ಹೇಳಬಹುದು. ಮನುಷ್ಯರೆಲ್ಲ ಒಂದೇ ತರದಲ್ಲಿ ಸಹನಶೀಲರೂ, ವಿವೇಕಪೂರ್ಣವಾಗಿ ವರ್ತಿಸುವವರೂ ಅಲ್ಲ. ಆದ್ದರಿಂದ, ಅವಿವೇಕಿಯೂ ಕೋಪಿಷ್ಠನೂ ಆದ ಒಬ್ಬ ಗಂಡ ಥಟ್ಟನೆ ತನ್ನ ಪತ್ನಿಗೆ ಒಂದೇ ಸಂದರ್ಭದಲ್ಲಿ ಮೂರು ತಲಾಖ್ ಕೂಡ ಹೇಳಲೂಬಹುದು. ಹಾಗೆ ಒಮ್ಮೆಲೇ ಹೇಳಿದ ಮೂರು ತಲಾಖ್ ಒಂದು ಮಾತ್ರವೇ ಆಗುವುದೆಂಬ ಇಸ್ಲಾಮಿಕ ನಿಯಮವನ್ನು ಅವಗಣಿಸಿಕೊಂಡು ಅದನ್ನು ಮೂರು ತಲಾಖೆಂದು ಎಣಿಸತೊಡಗಿದಾಗ ಅವಿವೇಕಿಗಳಾದ ಗಂಡಂದಿರ ಆಲೋಚನಾರಹಿತವಾದ ಪ್ರವೃತ್ತಿಗೆ ಪರಿಹಾರ ಕಾಣಲಿಕ್ಕಾಗಿ ಹೀಗೆ ವಿವಾಹವೆಂಬ ನಾಮದಲ್ಲಿ ಇಸ್ಲಾಮಿಕವಲ್ಲದ ಒಂದು ಏರ್ಪಾಡು ಮಾಡುವರೆ ಅಂತಹವರು ನಿರ್ಬಂಧಿತರಾದರು. ಹಾಗಲ್ಲದೆ ಇದು ಇಸ್ಲಾಮಿೂ ನಿಯಮವಾಗಲಿ ಇಸ್ಲಾಮಿನ ಅಧ್ಯಾಪನಕ್ಕನುಗುಣವಾದ ಒಂದು ಪ್ರವೃತ್ತಿಯಾಗಲಿ ಅಲ್ಲ.

ಒಬ್ಬನು ಮೂರು ತಲಾಖ್ ಹೇಳಿ ತ್ಯಜಿಸಿದ ಒಬ್ಬಾಕೆ ಸ್ತ್ರೀಯನ್ನು ಇಸ್ಲಾಮಿಕ ನಿಯಮಾನುಸಾರ ಇನ್ನೊಬ್ಬನು ಮದುವೆಯಾಗಿ, ನ್ಯಾಯಾನುಸಾರ ಅವನು ಅವಳನ್ನು ಪರಿತ್ಯಜಿಸುವುದಾದರೆ ಅವಳನ್ನು ಮೊದಲ ಗಂಡ ಪುನಃ ಮದುವೆ ಮಾಡಿಕೊಳ್ಳಬಹುದೆಂದು ಇಸ್ಲಾಂ ಕಲಿಸುತ್ತದೆ. ಎರಡನೆಯವನು ಅವಳನ್ನು ಮದುವೆಯಾಗುವುದು ಮೊದಲಿನ ಗಂಡನಿಗೆ ಅವಳನ್ನು ಸ್ವೀಕಾರಾರ್ಹಳನ್ನಾಗಿ ಮಾಡಲಿಕ್ಕೋಸ್ಕರವಾದರೆ ಅದು ಯಥಾರ್ಥದಲ್ಲಿ ವಿವಾಹವಾಗಲಿಕ್ಕಿಲ್ಲ; ಧರ್ಮನಿರ್ದೇಶವನ್ನು ಅಪಹಾಸ್ಯಕ್ಕೆ ಗುರಿಪಡಿಸುವ ಒಂದು ಕ್ರಮ ಮಾತ್ರವಾಗುತ್ತದೆ. ಅಂತಹ ಒಂದು ಕ್ರಮದಿಂದ ಅವಳು ಮೊದಲ ಗಂಡನಿಗೆ ಸ್ವೀಕಾರಯೋಗ್ಯಳಾಗುವುದೇ ಇಲ್ಲ. ಅವನಿಗೆ ಅವಳನ್ನು ಸ್ವೀಕರಿಸಲು ಸಾಧ್ಯವಾಗಬೇಕೆಂದಾದರೆ ಎರಡನೆಯ ಗಂಡ ಸರಿಯಾದ ರೀತಿಯಲ್ಲಿ ಅವಳನ್ನು ವಿವಾಹವಾಗಿ ನಿಯಮಾನುಸಾರ ಅವಳನ್ನು ತ್ಯಜಿಸಬೇಕಾಗಿದೆ. ವಿವಾಹಸಂಬಂಧವನ್ನು ಸಾಧ್ಯವಿದ್ದಷ್ಟು ಅಪರಿಚ್ಛೇದ್ಯಗೊಳಿಸಲಿಕ್ಕೂ ದಾಂಪತ್ಯ ಜೀವಿತವನ್ನು ಸುಗಮವಾಗಿ ಸಾಗಿಸಿಕೊಂಡು ಹೋಗಲಿಕ್ಕೂ ದಂಪತಿಗಳು ಪ್ರೇರಿತರಾಗಲಿಕ್ಕಾಗಿಯೇ ಇಸ್ಲಾಂ ಹೀಗೆ ವಿಧಿಸಿದ್ದು. ವಿವಾಹಸಂಬಂಧವನ್ನು ಮುರಿಯದಿರಲಿಕ್ಕಾಗಿ ಇಸ್ಲಾಂ ಒಂದನೆಯದಾಗಿ ತಲಾಖಿಗೆ ಕೆಲವು ಪ್ರತಿಬಂಧಕಗಳನ್ನು ವಿಧಿಸಿತು. ಈ ಪ್ರತಿಬಂಧಕಗಳನ್ನೆಲ್ಲಾ ತೊಡೆದುಹಾಕಿ ಒಬ್ಬನು ತನ್ನ ಪತ್ನಿಗೆ ತಲಾಖ್ ಹೇಳುವುದಾದರೆ ಅದು ಒಂದು ತಲಾಖ್ ಆಗುವುದು. ಹೀಗೆ ಎರಡು ಸಲ ಹೆಂಡತಿಯನ್ನು ತಲಾಖ್ ಹೇಳಿ ತೊರೆಯಲಿಕ್ಕೂ ಪುನಃ ಸ್ವೀಕರಿಸಲಿಕ್ಕೂ ಅವನಿಗೆ ಸಾಧ್ಯ. ಅನಂತರ ಮೂರನೆಯ ಸಲವೂ ಅವನು ತಲಾಖ್ ಹೇಳುವುದಾದರೆ ಮತ್ತೆ ಅವನು ತನ್ನ ಮಡದಿಯನ್ನು ತಿರುಗಿ ಪಡೆಯುವುದು ಸಲ್ಲದು. ಆಗ, ಅವನು ತನ್ನ ಪತ್ನಿಯನ್ನು ಮೂರು ಬಾರಿ ಸ್ವೀಕರಿಸಿ ಮೂರು ಬಾರಿ ಪರಿತ್ಯಜಿಸಿದನು. ಹೀಗೆ ಹಲವು ಪ್ರತಿಬಂಧಕಗಳನ್ನು ಕಿತ್ತೆಸೆದು ಒಬ್ಬನು ತನ್ನ ಪತ್ನಿಯನ್ನು ಒಂದು ಸಲವಲ್ಲ, ಮೂರು ಸಲವೂ ತ್ಯಜಿಸುವುದಾದರೆ ಅದರರ್ಥ ಅವನಿಗೆ ಅವಳೊಂದಿಗೆ ಸಹಧರ್ಮ ಜೀವಿತ ಮುಂದುವರಿಸಿಕೊಂಡು ಹೋಗಲು ಯಾವ ಪ್ರಕಾರದಲ್ಲೂ ಸಾಧ್ಯವಿಲ್ಲವೆಂದಾಗಿದೆ. ಆದ್ದರಿಂದ, ಇಷ್ಟು ಪ್ರತಿರೋಧಕಗಳನ್ನು ತಳ್ಳಿಹಾಕಿ ದಾಂಪತ್ಯಸಂಬಂಧವನ್ನು ಕೊನೆಗೊಳಿಸಿದವನಿಗೆ ಆ ಸ್ತ್ರೀಯ ಗಂಡನಾಗಲಿಕ್ಕೆ ನಿರ್ವಾಹವಿಲ್ಲವೆಂದು ಅದು ರುಜುಪಡಿಸುತ್ತದೆ. ಒಟ್ಟಿನಲ್ಲಿ, ಇದರ ನಂತರ ಭರ್ತೃಪದವನ್ನು ಪಡೆಯುವ ಹಕ್ಕು ಅವನಿಗೆ ಪರಿಪೂರ್ಣವಾಗಿ ಇಲ್ಲದಾಗುತ್ತದೆ. ಹೀಗೆ, ಪತಿಯು ಪತ್ನಿಯನ್ನು ತೊರೆಯಲಿಕ್ಕೂ ನಂತರ ಸ್ವೀಕರಿಸಲಿಕ್ಕೂ ಇಸ್ಲಾಂ ಒಂದು ನಿಬಂಧನೆಯನ್ನು ಇರಿಸದಿದ್ದರೆ ದಾಂಪತ್ಯ ಸಂಬಂಧ ಒಂದು ವಿನೋದವೂ, ವಿವಾಹ ಮತ್ತು ವಿವಾಹ ವಿಚ್ಛೇದ ಅರ್ಥ ರಹಿತವೂ ಆದ ಪ್ರವೃತ್ತಿಯಾಗಿ ಪರಿಣಮಿಸೀತು. ಆದ್ದರಿಂದ ಪತ್ನಿಯನ್ನು ಸ್ವೀಕರಿಸಲಿಕ್ಕೂ ತ್ಯಜಿಸಲಿಕ್ಕೂ ಇಸ್ಲಾಂ ಒಂದು ಸೀಮೆಯನ್ನು ನಿಶ್ಚಯಿಸಿ, ಅದು ಮೂರು ಬಾರಿ ತನಕ ಆಗಬಹುದೆಂದೂ,

ಅದರೆ ನಂತರ ಆ ಸ್ತ್ರೀಯನ್ನು ಪತ್ನಿಯಾಗಿರಿಸುವ ಹಕ್ಕು ಗಂಡನಿಗೆ ನಷ್ಟವಾಗುತ್ತದೆಂದೂ ವಿಧಿಸಿದೆ. ಈ ಪ್ರಕಾರ ನಿಯಮ ನಿರ್ದೇಶ ಮೂಲಕ ಇಸ್ಲಾಂ ದಾಂಪತ್ಯ ಸಂಬಂಧವನ್ನು ಸಾಧ್ಯವಾದಷ್ಟು ಸುಗಮವೂ ಪ್ರಾಯೋಗಿಕವೂ ಮಾಡಿರುತ್ತದೆ. ಆದರೆ ತಲಾಖ್ ಮೂಲಕ ಪರಿತ್ಯಕ್ತಳಾದ ಸ್ತ್ರೀಯನ್ನು ಇನ್ನೋರ್ವನು ತನ್ನ ಧರ್ಮಪತ್ನಿಯಾಗಿ ವರಿಸಿ ನಂತರ ಅವನು ಸಹ ಅವಳನ್ನು ನಿಯಮಬದ್ಧವಾಗಿ ತ್ಯಜಿಸಿದ ನಂತರ ಮೊದಲ ಗಂಡ ಮತ್ತು ಆ ಸ್ತ್ರೀ ಪುನಃ ಗಂಡ-ಹೆಂಡತಿಯಾಗಲು ಇಷ್ಟಪಡುವ ಪಕ್ಷದಲ್ಲಿ ಅವರು ಮರು ಮದುವೆಯಾಗಬಹುದೆಂದು ಇಸ್ಲಾಂ ಸಮ್ಮತಿಸಿರುವುದು, ಅವರೀರ್ವರೂ ಪರಸ್ಪರ ಸಂಬಂಧವಿಲ್ಲದ ಎರಡು ವ್ಯಕ್ತಿಗಳಂತಾಗಿ ಬಹಳಷ್ಟು ಪಾಠಗಳನ್ನು ಕಲಿತು, ಒಂದು ವೇಳೆ ಮುಂದೆ ಉಂಟುಮಾಡುವ ಹೊಸ ಸಂಬಂಧವನ್ನು ಸಾಮರಸ್ಯದಿಂದ ಮುಂದುವರಿಸಿಕೊಂಡು ಹೋಗಲಿಕ್ಕೆ ಅವಕಾಶವಿರುವುದರಿಂದಾಗಿದೆ. ಈ ರೀತಿ ಅನುಮತಿಸುತ್ತಾ ಇಸ್ಲಾಂ ಮನುಷ್ಯನ ಸ್ನೇಹಶೀಲತೆಯನ್ನು ಗೌರವಿಸಿ ಅವನ ಚಾಪಲ್ಯವನ್ನು ಕ್ಷಮಿಸಿ ನಿಯಮವನ್ನು ಸೌಮ್ಯಗೊಳಿಸಿದೆ. ಬಾಹ್ಯದೃಷ್ಟಿಯಲ್ಲಿ ನೋಡುವಾಗ ಇಷ್ಟು ಹೆಚ್ಚು ಪ್ರತಿಬಂಧಕಗಳನ್ನು ಕಿತ್ತೊಗೆದು ಮೂರು ಸಲ ತನ್ನ ಪತ್ನಿಯನ್ನು ಬಿಟ್ಟು ದಾಂಪತ್ಯ ಸಂಬಂಧವನ್ನು ಕೆಡಿಸಿದವನಿಗೆ ಅವಳನ್ನು ಕೊನೆಯ ವರೆಗೆ ಪತ್ನಿಯಾಗಿ ಸ್ವೀಕರಿಸಲು ಅವಕಾಶವಿರಬಾರದು. ಒಟ್ಟಿನಲ್ಲಿ, ಮೂರು ಬಾರಿ ತಲಾಖ್ ಹೇಳಿ ಪರಿಪೂರ್ಣವಾಗಿ ವಿವಾಹ ಮುಕ್ತಗೊಳಿಸಿದ ಪತ್ನಿಯನ್ನು ಮೊದಲ ಗಂಡ ಸ್ವೀಕರಿಸಲಿಕ್ಕೆ ಸಾಧ್ಯವಾಗಬೇಕಾದರೆ, ಅವಳನ್ನು ಇನ್ನೊಬ್ಬನು ತನ್ನ ಸಹಧರ್ಮಿಣಿಯಾಗಿ ನಿಯಮ ಪ್ರಕಾರ ವರಿಸಿ ನಂತರ ಅವನು ನ್ಯಾಯಬದ್ಧವಾಗಿ ಅವಳನ್ನು ಪರಿತ್ಯಜಿಸಿರಬೇಕು, ಹಾಗಲ್ಲದ, ಮೊದಲ ಗಂಡನಿಗೆ ಅವಳನ್ನು ಸ್ವೀಕರಿಸಲಿಕ್ಕೆ ಒಂದು ಉಪಾಯವಾಗಿ ಮತ್ತೊಬ್ಬನು ಅವಳನ್ನು ಮದುವೆಯಾಗಿ ಬಿಟ್ಟುಬಿಡುವುದರಿಂದ ಅವಳು ಮೊದಲ ಗಂಡನಿಗೆ ಎಂದಿಗೂ ವಿವಾಹ ವಿಹಿತಳಾಗುವುದಿಲ್ಲ.

ದಾಂಪತ್ಯ ಜೀವಿತವನ್ನು ಮುಂದುವರಿಸಿಕೊಂಡು ಹೋಗಲು ನಿರ್ವಾಹವಿಲ್ಲದಂತೆ ಮಾಡುವಂಥ ಕಲಹವಾಗಲಿ ಬಿಕ್ಕಟ್ಟಾಗಲಿ ಉಂಟಾದರೆ ದಂಪತಿಗಳು ದುಃಖಭರಿತ ಜೀವಿತವನ್ನು ಸಾಗಿಸಲು ನಿರ್ಬಂಧಿತರಾಗುವ ಪಕ್ಷದಲ್ಲಿ ವಿವಾಹವಿಚ್ಛೇದ ಸಮ್ಮತನೀಯವೆಂದು ಇಸ್ಲಾಂ ಬೋಧಿಸಿಯಾದರೂ, ಯಥಾರ್ಥದಲ್ಲಿ ಇಸ್ಲಾಂ ನಿರ್ದೇಶಿಸುವ ವೈವಾಹಿಕ ಸಂಬಂಧ ಕಾಲನಿರ್ಣಯರಹಿತವಾದ ಎಂದೆಂದಿಗೂ ಇರುವ ಒಂದು ಬಂಧುತ್ವವಾಗಿದೆ. ಆದುದರಿಂದ, ಅದನ್ನು ಅವರೀರ್ವರೂ ಪಾಲಿಸಿಕೊಂಡು ಹೋಗುವ ಪಕ್ಷದಲ್ಲಿ ಅದು ಅವರ ಮರಣದೊಂದಿಗೆ ಸಹ ಕೊನೆಗೊಳ್ಳುವುದಿಲ್ಲ. ಪಾರತ್ರಿಕ ಜೀವಿತದಲ್ಲೂ ಆ ಸಂಬಂಧ ಅನಶ್ವರವಾಗಿ ನೆಲೆಗೊಳ್ಳುತ್ತದೆ. ಆದ್ದರಿಂದಲೇ ಪವಿತ್ರ ಖುರ್‌ಆನ್ ಈ ರೀತಿ ಹೇಳಿರುತ್ತದೆ: "ಅವರೂ ಅವರ ಸುಕೃತರಾದ ಮಾತಾಪಿತರೂ ಹೆಂಡಂದಿರೂ ಸಂತಾನಗಳೂ ಅನಶ್ವರವಾದ ಸ್ವರ್ಗದಲ್ಲಿ ಪ್ರವೇಶಿಸುವರು" (13:24). ಇದರಿಂದ, ಗಂಡ ಹೆಂಡಿರಿಗೆ ಪರಸ್ಪರ ಆಧ್ಯಾತ್ಮಿಕವಾಗಿ ಸಹಮತವಿದ್ದರೆ ಪಾರತ್ರಿಕ ಜೀವಿತದಲ್ಲೂ ಅವರ ಸಂಬಂಧ ಮುರಿಯದೆಂದು ಮನದಟ್ಟಾಗುತ್ತದೆ. ಯಾವ ರೀತಿ ಆಧ್ಯಾತ್ಮಿಕವಾಗಿ ಸಹಮತವಿಲ್ಲದ ಪಕ್ಷದಲ್ಲಿ ದಂಪತಿಗಳ ಸಂಬಂಧ ಪಾರತ್ರಿಕ ಜೀವಿತದಲ್ಲಿ ಅಂತ್ಯಗೊಳ್ಳುತ್ತದೋ ಅದೇ ಪ್ರಕಾರವೇ ಐಹಿಕ ಜೀವಿತದಲ್ಲಿ ಅವರಿಗೆ ತಮ್ಮ ಬಂಧುತ್ವವನ್ನು ಪಾಲಿಸಿಕೊಂಡು ಹೋಗಲಿಕ್ಕೆ ನಿವೃತ್ತಿಯಿಲ್ಲದಾಗುವ ಘಟ್ಟದಲ್ಲಿ ಅದನ್ನು ವಿಚ್ಛೇದಿಸಬಹುದಾಗಿದೆ. ಹೀಗೆ ನಿರ್ವಾಹವಿಲ್ಲದ ಸಂದರ್ಭದಲ್ಲಿ ಆ ಸಂಬಂಧವನ್ನು ಮುರಿಯಬಹುದೆಂದು ಇಸ್ಲಾಂ ಆದೇಶಿಸುವುದಾದರೂ ಆ ಬಂಧುತ್ವವನ್ನು ಮುಂದುವರಿಸಿಕೊಂಡು ಹೋಗಲು ಇಚ್ಛಿಸುವ ಪಕ್ಷದಲ್ಲಿ ಈ ಜೀವಿತದಲ್ಲಿ ಮಾತ್ರವಲ್ಲ, ಪರಲೋಕ ಜೀವಿತದಲ್ಲೂ ಮುಂದುವರಿಸಿಕೊಂಡು ಹೋಗಬಹುದು. ಅಷ್ಟೇ ಅಲ್ಲ, ಆ ರೀತಿಯಲ್ಲಿ ಈ ಸಂಬಂಧವನ್ನು ಪರಲೋಕ ಜೀವಿತದಲ್ಲೂ ಮುಂದುವರಿಸಿಕೊಂಡು ಹೋಗಲು ಶ್ರಮಿಸಬೇಕೆಂದೂ ಇಸ್ಲಾಂ ಬೋಧಿಸುತ್ತದೆ. ಆದ್ದರಿಂದಲೇ, ಪತ್ನಿ ಮತ್ತು ಮಕ್ಕಳನ್ನು ಸಾತ್ವಿಕರೂ ದೇವಭಕ್ತರೂ ಆಗಿ ಮಾರ್ಪಡಿಸಲಿಕ್ಕೆ ಶ್ರಮಿಸಬೇಕಾದುದು ಮುಸ್ಲಿಮನ ಕರ್ತವ್ಯವೆಂದು ಇಸ್ಲಾಂ ಉಪದೇಶಿಸಿದೆ. ಆದರೆ ದಾಂಪತ್ಯ ಸಂಬಂಧ ಯಾವ ರೀತಿಯುಳ್ಳದ್ದರೂ ಕೊನೆಗೊಳಿಸಬಾರದೆಂದು ಇತರ ಕೆಲವು ಧರ್ಮಗಳು ಅನುಶಾಸಿಸುವಂತೆ ಇಸ್ಲಾಂ ಉಪದೇಶಿಸುವುದಿಲ್ಲ. ಹಾಗೆ ಇಸ್ಲಾಂ ಬೋಧಿಸುವುದಾದರೆ ಅದರ ಅಧ್ಯಾಪನಗಳು ಸರ್ವಲೌಕಿಕವೂ ಸುಗ

# ದೇವನೂ ಸೃಷ್ಟಿಯೂ

★ ಎಂ. ಮುಹಮ್ಮದ್ ಯೂಸುಫ್ ಎಂ.ಎ., ಬಿ.ಎಲ್.

(ಮುಂದುವರಿದುದು)

## ಸರ್ವಲೋಕ ಸೃಷ್ಟಿಕರ್ತ

ದೇವನು ಈ ಪ್ರಪಂಚದ ಸೃಷ್ಟಿಕರ್ತನೆಂಬ ವಿಚಾರದಲ್ಲಿ ಎಲ್ಲ ಧರ್ಮಗಳು ಒಂದು ರೀತಿಯಲ್ಲಿ ಅಲ್ಲವಾದರೆ ಇನ್ನೊಂದು ರೀತಿಯಲ್ಲಿ ಸಹಮತ ಹೊಂದಿವೆ. ಆದರೆ ದೇವನ ವಿಶೇಷ ಗುಣಗಳ ಬಗ್ಗೆ ಧರ್ಮಗಳಲ್ಲಿ ಭಿನ್ನಾಭಿಪ್ರಾಯವಿದೆ. "ಸಕಲ ಲೋಕಗಳ ಸೃಷ್ಟಿಕರ್ತ" ಎಂಬ ದೇವರ ಗುಣ ಬಹಳ ವ್ಯಾಪಕ ಮತ್ತು ವಿಶಾಲವಾದುದೆಂದು ಇಸ್ಲಾಮಿನ ಸಿದ್ಧಾಂತವಾಗಿದೆ. ದೇವರು ಒಂದು ನಿರ್ದಿಷ್ಟ ಜನತೆಯ ಸೃಷ್ಟಿಕರ್ತನೂ ಪರಿಪಾಲಕನೂ ಸಂರಕ್ಷಕನೂ ಅಲ್ಲ, ಸಕಲ ಲೋಕದ ಸೃಷ್ಟಿಕರ್ತನೂ ಪರಿಪಾಲಕನೂ ಸಂರಕ್ಷಕನೂ ಆಗಿದ್ದಾನೆಂದು ಇಸ್ಲಾಂ ಸಾರುತ್ತದೆ.

---

ಮವೂ ಎಂದು ಹೇಳಲಸದಳ. ಅದೇ ಪ್ರಕಾರವೇ ದಾಂಪತ್ಯ ಸಂಬಂಧ ಅಂತ್ಯಗೊಳ್ಳದಿರಲಿಕ್ಕೂ ಪರಲೋಕದಲ್ಲಿ ಅದನ್ನು ನೆಲೆನಿಲ್ಲಿಸಲಿಕ್ಕೂ ಅವರಿಗೆ ಸಂತಾನ ಉಂಟಾಗಿರಬೇಕೆಂದಾಗಲಿ, ಸಂತಾನವಿಲ್ಲದಿದ್ದರೆ "ಸ್ವರ್ಗಸ್ಥನಾದ ಪತಿಯ ಆತ್ಮಮುಕ್ತಿಗಾಗಿ" ಪತ್ನಿ ಯಾರನ್ನಾದರೂ ದತ್ತು ಸ್ವೀಕರಿಸಬೇಕೆಂದಾಗಲಿ, ಅಥವಾ ಪತ್ನಿಯು ನಿಯೋಗ ಕ್ರಮ ಪ್ರಕಾರ ಅನ್ಯ ಪುರುಷನಿಂದ ಸಂತಾನೋತ್ಪಾದನೆ ಮಾಡಿಕೊಳ್ಳಬೇಕೆಂದಾಗಲಿ ಇಸ್ಲಾಂ ಬೋಧಿಸುವುದಿಲ್ಲ. ಪತಿ-ಪತ್ನಿಯರು ಸತ್ಯವಿಶ್ವಾಸಿಗಳೂ ಸಾತ್ವಿಕರೂ ಆಗಿ ಪರಿವರ್ತಿತರಾಗಿ ಅವರು ತಮ್ಮ ದಾಂಪತ್ಯ ಸಂಬಂಧವನ್ನು ಮುರಿಯದಿದ್ದ ಪಕ್ಷದಲ್ಲಿ ಪರಲೋಕ ಜೀವಿತದಲ್ಲೂ ಅವರಿಗೆ ತಮ್ಮ ಆ ಸಂಬಂಧವನ್ನು ಆಧ್ಯಾತ್ಮಿಕವಾಗಿ ಮುಂದುವರಿಸಿಕೊಂಡು ಹೋಗಬಹುದೆಂದು ಇಸ್ಲಾಂ ಕಲಿಸುತ್ತದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ದಾಂಪತ್ಯ ಜೀವಿತವನ್ನು ಮುಂದುವರಿಸಿಕೊಂಡು ಹೋಗಲು ಪ್ರಯಾಸಕರವಾದ ಕೆಲವು ತೊಡಕುಗಳು ದಂಪತಿಗಳೆಡೆಯಲ್ಲಿ ಸಂಭವಿಸಬಹುದಾದ್ದರಿಂದ, ಅವರನ್ನು ದುರಿತಪೂರ್ಣ ಜೀವಿತದಿಂದ ರಕ್ಷಿಸಲಿಕ್ಕೆ ವಿವಾಹ ವಿಚ್ಛೇದನ ಮಾಡಬಹುದೆಂದು ಇಸ್ಲಾಂ ಸಮ್ಮತಿಸಿರುತ್ತದೆ. ಹಾಗೆ ಅದಕ್ಕೆ ಸಮ್ಮತಿ ನೀಡದಿದ್ದರೆ ಅದರ ಅಧ್ಯಾಪನ ಸಾರ್ವಲೌಕಿಕವೂ ಸುಗಮವೂ ಎಂದು ಗಣಿಸಲ್ಪಡಲಿಕ್ಕಿಲ್ಲ; ಮಾತ್ರವಲ್ಲ ವಿವಾಹ ವಿಚ್ಛೇದನ ಸಲ್ಲದೆಂದು ಅನುಶಾಸಿಸುವ ಧರ್ಮಗಳ ಅನುಯಾಯಿಗಳಂತೆ ಮುಸ್ಲಿಮರು ಸಹ ಹೊಸ ನಿಯಮ ನಿರ್ಮಾಣ ಮೂಲಕ ವಿವಾಹ ವಿಚ್ಛೇದವನ್ನು ಸಿಂಧುಗೊಳಿಸಲು ಶ್ರಮಿಸಬೇಕಾದೀತು. ಇಸ್ಲಾಂ ವಿವಾಹ ವಿಚ್ಛೇದವನ್ನು ಒಪ್ಪುವುದಾದರೂ ಮುಸ್ಲಿಮರಲ್ಲಿ ನಡೆಯುವ ಮದುವೆಗಳಲ್ಲಿ 99 ಶೇಕಡ ನಿರ್ವಿಘ್ನವಾಗಿ ಮುಂದುವರಿದು ಕೊಂಡು ಹೋಗುತ್ತವೆ. ಇದಕ್ಕೆ ವಿರುದ್ಧವಾಗಿ, ವಿವಾಹ ವಿಚ್ಛೇದನ ಸಲ್ಲದೆಂದು ಅನುಶಾಸಿಸುವ ಧರ್ಮಗಳ ಅನುಯಾಯಿಗಳಲ್ಲಿ ವಿವಾಹ ವಿಚ್ಛೇದನ ಮುಸ್ಲಿಮರೆಡೆಯಲ್ಲಿರುವುದಕ್ಕಿಂತ ಕಮ್ಮಿಯಲ್ಲ, ಹೆಚ್ಚೇ ಇದೆಯೆಂದು ಹೇಳಿದರೆ ಅದು ತಪ್ಪೆನಿಸದು. ಇದರಿಂದ, ಇಸ್ಲಾಮಿಕ ವಿಧಿಯು ಪ್ರಾಯೋಗಿಕತೆಯೂ ಆವಶ್ಯಕತೆಯೂ ಎಷ್ಟರ ಮಟ್ಟಿಗಿದೆಯೆಂದು ಮನಗಾಣಬಹುದು. ●

ಪವಿತ್ರ ಖುರ್‌ಆನ್ ಆದರ ಪ್ರಥಮಾಧ್ಯಾಯದ ಆರಂಭದಲ್ಲೇ ದೇವರ ಮಹಿಮೆಯಾಗಿ ಪ್ರಕೀರ್ತನ ಮಾಡಿದ್ದು "ರಬ್ಬುಲ್ ಆಲಮೀನ್" (ಸರ್ವಲೋಕಗಳ ಪ್ರಭು) ಎಂದಾಗಿದೆ. ಈ ವಚನ ಇಸ್ಲಾಮಿನ ವಿಶಾಲವೀಕ್ಷಣೆಯನ್ನು ತೋರಿಸುತ್ತದೆ. "ಸರ್ವಲೋಕಗಳ ಪ್ರಭು" ಎಂಬ ಮಾತಿನಲ್ಲಿ ವಿವಿಧ ಕಾಲಗಳ ಮತ್ತು ವಿವಿಧ ದೇಶಗಳ ಜನರೆಲ್ಲರೂ ಸೇರುತ್ತಾರೆ. "ರಬ್ಬುಲ್ ಆಲಮೀನ್" ಎಂಬ ಪದಪ್ರಯೋಗ ಸಂಕುಚಿತವಾದ ವೀಕ್ಷಣೆಯಿಂದ ಕೂಡಿದ ಧರ್ಮ ಸಿದ್ಧಾಂತಗಳಿಗೆಲ್ಲ ಒಂದು ಪಂಥಾಹ್ವಾನವಾಗಿದೆ. ದೇವರ ಅನುಗ್ರಹ ಕೆಲವು ನಿರ್ದಿಷ್ಟ ದೇಶದವರಿಗೂ ಗೋತ್ರದವರಿಗೂ ಮಾತ್ರವಿದೆಯೆಂದು ಭಾವಿಸುವವರಿಗೆ ತಕ್ಕುದಾದ ಉತ್ತರ ಕೊಡುತ್ತಾ ಪವಿತ್ರ ಖುರ್‌ಆನ್ ದೇವರ ಸಾರ್ವಲೌಕಿಕವಾದ ಅನುಗ್ರಹದಾನವನ್ನು ಸ್ಪಷ್ಟಪಡಿಸಿದೆ. ಕೆಲವು ನಿರ್ದಿಷ್ಟ ಜನಾಂಗಗಳ ಹೊರತು ಬೇರೆ ಯಾವ ಜನಾಂಗಕ್ಕೂ ದೇವಾನುಗ್ರಹಗಳಿಗೆ ಅರ್ಹತೆ ಇಲ್ಲವೆಂದು ಸಹ ಇವರು ಭಾವಿಸುತ್ತಾರೆ. ಆದರೆ ಸಕಲ ಲೋಕಗಳ ಸೃಷ್ಟಿಕರ್ತನೂ ಪಾಲಕನೂ ಸಂರಕ್ಷಕನೂ ಎಂಬ ದೇವರ ವಿಶೇಷ ಗುಣ ಮನುಷ್ಯರಾಶಿ ಒಂದೆಂದು ಘೋಷಿಸುತ್ತಾ ಎಲ್ಲರೂ ಸಮಾನರು ಮತ್ತು ಸಹೋದರರು ಎಂದು ಸಹ ಸ್ಪಷ್ಟಪಡಿಸುತ್ತದೆ.ದೇವಾನುಗ್ರಹಗಳಿಗೆ ಯಾವುದೇ ಪ್ರಾದೇಶಿಕ ಸೀಮೆಗಳು ನಿಶ್ಚಯಿಸಲ್ಪಡದೆ ಸಾರ್ವತ್ರಿಕವಾದ ಅನುಗ್ರಹವನ್ನು ತೋರಿಸುವ ಪವಿತ್ರ ಖುರ್‌ಆನಿನ ಈ ವಚನ ಅತಿ ಶ್ರೇಷ್ಠವಾದ ಒಂದು ದೈವಿಕ ಗುಣವನ್ನು ಪ್ರಕಾಶಗೊಳಿಸುತ್ತದೆ. ಸರ್ವಶಕ್ತನಾದ ದೇವನು ಯಾವ ರೀತಿ ಯುರೋಪಿನಲ್ಲಿರುವ ಜನರಿಗೆ ಸಂರಕ್ಷಣೆ ನೀಡಿ ಅವರನ್ನು ಪರಿಪಾಲಿಸುತ್ತಾನೋ ಅದೇ ಪ್ರಕಾರವೇ ಅವನು ಏಷ್ಯಾದ ಜನರ ಆವಶ್ಯಕತೆಗಳನ್ನು ಪೂರೈಸುತ್ತಾನೆ. ಆಫ್ರಿಕದ ಜನರನ್ನು ಅವನು ತನ್ನ ಅನುಗ್ರಹಗಳಿಂದ ಸಂರಕ್ಷಿಸುವ ರೀತಿಯಲ್ಲೇ ಅಮೇರಿಕದ ಜನರ ಆವಶ್ಯಕತೆಗಳನ್ನು ಸಹ ಅವನು ಈಡೇರಿಸುತ್ತಾನೆ. ಯಾವ ರೀತಿ ಮನುಷ್ಯಕುಲದ ಭೌತಿಕ ಆವಶ್ಯಕತೆಗಳನ್ನು ಅವನು ಈಡೇರಿಸಿಕೊಡುತ್ತಾನೋ ಅದೇ ರೀತಿಯಲ್ಲಿ ಅವರಿಗೆ ಆಧ್ಯಾತ್ಮಿಕ ಅನುಗ್ರಹಗಳನ್ನು ಸಹ ದಯಪಾಲಿಸುತ್ತಾನೆ.

ಜಗತ್ತಿನಲ್ಲಿ ಮೊದಲು ದೇಶಗಳ ಮಧ್ಯೆ ಪರಸ್ಪರ ಸಂಪರ್ಕವಿಲ್ಲದ ಕಾಲವಿತ್ತು. ಅಂತಹ ಕಾಲಘಟ್ಟದಲ್ಲಿ "ದೇವ ದರ್ಶನ" ಮತ್ತು ಪ್ರವಾದಿತ್ವ ಬಗ್ಗೆ ವಿವಿಧ ದೇಶಗಳ ಜನರು ಪರಸ್ಪರ ತಿಳಿಯುವ ಯಾವ ಮಾರ್ಗವೂ ಇರಲಿಲ್ಲ. ಆ ಕಾಲಘಟ್ಟ ಮತ್ತು ಜನತೆಗಳ ಕುರಿತು ಪವಿತ್ರ ಖುರ್‌ಆನ್ ಹೀಗೆ ಸಾರಿದೆ:

"ಮಾರ್ಗದರ್ಶನಕ್ಕಾಗಿ ಓರ್ವ ಪ್ರವಾದಿ ನಿಯೋಜಿಸಲ್ಪಡದ ಯಾವುದೇ ಜನಾಂಗ ಲೋಕದಲ್ಲಿರಲಿಲ್ಲ" (35:24).

"ಸೃಷ್ಟಿಕರ್ತನಾದ ದೇವನನ್ನು ಆರಾಧಿಸಿರಿ; ದೇವೇತರರನ್ನು ನಿರಾಕರಿಸಿರಿ ಎಂಬ ಉಪದೇಶದೊಂದಿಗೆ (ಅಂದರೆ ಅಧರ್ಮಿಗಳ ಮತ್ತು ದುಷ್ಟ ಜನರ ಉಪದೇಶಗಳಿಗೆ ಕಿವಿಗೊಡದೆ ದೇವನನ್ನು ಮಾತ್ರ ಆರಾಧಿಸಬೇಕೆಂಬ ನಿರ್ದೇಶದೊಂದಿಗೆ) ನಾವು ದಿಟವಾಗಿಯೂ ಎಲ್ಲ ಸಮುದಾಯಗಳಲ್ಲೂ ಪ್ರವಾದಿಗಳನ್ನು ನಿಯೋಜಿಸಿದ್ದೇವೆ. ಕೆಲವರು ಮಾರ್ಗದರ್ಶನ ಪಡೆದರು. ಬೇರೆ ಕೆಲವರು ನಿರಾಕರಿಸಿ ಅಜ್ಞತೆಯಲ್ಲೇ ಮುಂದುವರಿದರು. ಆದ್ದರಿಂದ ನೀವು ಭೂಲೋಕದಲ್ಲೆಲ್ಲ ಸಂಚರಿಸಿ(ಲೋಕದೆಲ್ಲೆಡೆ ಆಗಮಿಸಿದ್ದ ಪ್ರವಾದಿಗಳ ಬಗ್ಗೆ ತಿಳಿದುಕೊಂಡು) ಪ್ರವಾದಿಗಳನ್ನು ಸುಳ್ಳಾಗಿಸಿದ ದುರ್ಜನರ ಅಂತ್ಯ ಏನಾಯಿತೆಂದು ಮನಗಾಣಿರಿ" (16:37).

'ರಬ್ಬುಲ್ ಆಲಮೀನ್' ಎಂಬ ಪ್ರಯೋಗಕ್ಕೆ ವ್ಯಾಖ್ಯಾನ ನೀಡುತ್ತಾ ಇಸ್ಲಾಂ ಒಂದು ನವೀನ ಸತ್ಯವನ್ನು ಲೋಕಕ್ಕೆ ಕಾಣಿಕೆಯಿತ್ತಿದೆ. ಹಾಗೆ ವಿಶ್ವ ಸಹೋದರ್ಯಕ್ಕೆ ಬುನಾದಿ ಹಾಕಿದೆ. ಆದ ಕಾರಣ ಒಬ್ಬ ಮುಸ್ಲಿಂ ಇತರ ಧರ್ಮ ಸ್ಥಾಪಕರನ್ನು ಗೌರವಿಸುತ್ತಾನೆ. ಒಬ್ಬ ಮುಸ್ಲಿಮನ ದೃಷ್ಟಿಯಲ್ಲಿ ಶ್ರೀ ಕೃಷ್ಣ, ಶ್ರೀ ರಾಮ, ಶ್ರೀ ಬುದ್ಧ, ಝೊರಾಸ್ಟರ್, ಕನ್‌ಫ್ಯೂಷ್ಯಸ್ ಇವರೆ

ಲ್ಲರೂ ಅಬ್ರಹಾಂ, ಮೋಸೆಸ್, ಯೇಸು ಇವರಂತೆಯೇ ಪ್ರವಾದಿಗಳಾಗಿದ್ದಾರೆ. ಆದರೆ ಇದರಲ್ಲಿ ಒಂದು ವ್ಯತ್ಯಾಸ ವೇನೆಂದರೆ, ಎರಡನೆಯದಾಗಿ ಹೇಳಿದವರ ಹೆಸರುಗಳು ಖುರ್‌ಆನಿನಲ್ಲಿ ಉಲ್ಲೇಖಿಸಲ್ಪಟ್ಟಿವೆ ಎಂದು ಮಾತ್ರವಾಗಿದೆ. ಅವರ ಬಗ್ಗೆ ಸ್ಪಷ್ಟವಾದ ಚರಿತ್ರೆಗಳು ಲಭ್ಯವೆಂದು ಅಂಗೀಕರಿಸಲ್ಪಟ್ಟಿದೆ.

ದೇವನು ರಬ್ಬುಲ್ ಆಲಮೀನ್ ಎಂಬುದಾಗಿ ಪವಿತ್ರ ಖುರ್‌ಆನ್ ಘೋಷಿಸುತ್ತದೆಂದು ಮೊದಲು ಹೇಳಲಾಯಿತಷ್ಟೇ. ಅವನ ಅನುಗ್ರಹಗಳು ಅರೇಬಿಯಾ ಅಥವಾ ಸಿರಿಯಾಕ್ಕೆ ಸೀಮಿತಗೊಳಿಸಲಿಲ್ಲವೆಂದು ಪವಿತ್ರ ಖುರ್‌ಆನಿನಿಂದ ಸ್ಪಷ್ಟವಾಗಿದೆ. ಭೌತಿಕ ಸೂರ್ಯನು ಜಗತ್ತನ್ನೆಲ್ಲ ಪ್ರಕಾಶಮಯವನ್ನಾಗಿ ಮಾಡುವಂತೆಯೇ ದೇವವಚನವೆಂಬ ಪ್ರಭೆ ಸರ್ವ ದೇಶಗಳನ್ನು ಅನುಗ್ರಹ ಪೂರ್ಣವನ್ನಾಗಿ ಮಾಡುತ್ತದೆ.

ದೇವರ ಬಗ್ಗೆ ಸಾಮಾನ್ಯವಾಗಿ ಕೇಳಲ್ಪಡುವ ಒಂದು ಪ್ರಶ್ನೆ, ದೇವರು ನಿಜವಾಗಿಯೂ ಇದ್ದರೆ ಯಾಕೆ ನಮಗೆ ಅವನನ್ನು ಕಾಣಲು ಸಾಧ್ಯವಾಗುವುದಿಲ್ಲ ಎಂದಾಗಿದೆ. ಈ ಪ್ರಶ್ನೆಗೆ ಉತ್ತರವಾಗಿ ಪವಿತ್ರ ಖುರ್‌ಆನ್ ದೇವರ ಗುಣ ಮಹಿಮೆಗಳ ಕುರಿತು ಸರಿಯಾದ ಜ್ಞಾನವನ್ನು ನಮಗೆ ನೀಡುತ್ತದೆ: "ದೃಷ್ಟಿಗಳು ದೇವರನ್ನು ತಲಪಲಾರವು. ಆದರೆ ಅವನು ದೃಷ್ಟಿಗಳನ್ನು ತಲಪುತ್ತಾನೆ. (ದೇವರು ಮಾಂಸದೃಷ್ಟಿಗಳಿಂದ ಕಾಣಲ್ಪಡುವ ಒಂದು ಭೌತಿಕ ವಸ್ತುವಲ್ಲ). ಆದರೆ ದೇವರು ಎಲ್ಲವನ್ನು ಕಾಣುವವನೂ ಬಲ್ಲವನೂ ಆಗಿದ್ದಾನೆ" (6:104). ಇದು ದೇವರ ಕುರಿತು ಸಂಕ್ಷಿಪ್ತ ಹಾಗೂ ಸಂಪೂರ್ಣವಾದೊಂದು ವಿಶದೀಕರಣವಾಗಿದೆ. ವಿದ್ಯುಚ್ಛಕ್ತಿ, ವಾಯು, ಈಥರ್ ಇತ್ಯಾದಿಗಳನ್ನು ಮನುಷ್ಯನಿಗೆ ಕಣ್ಣಿನಿಂದ ಕಾಣಲು ಅಸಾಧ್ಯವಷ್ಟೆ, ಇವೆಲ್ಲ ಅತಿ ಸೂಕ್ಷ್ಮವಾದ ಪದಾರ್ಥಗಳಾಗಿವೆ. ಹಾಗಿರುವಾಗ ಅತಿ ಸೂಕ್ಷ್ಮ ಪದಾರ್ಥಗಳ ಪೈಕಿ ಅತಿ ಸೂಕ್ಷನಾಗಿರುವ ದೇವರನ್ನು ಮಾಂಸದೃಷ್ಟಿಯಿಂದ ಹೇಗೆ ದರ್ಶಿಸಲು ಸಾಧ್ಯ?

ಮನುಷ್ಯನು ದೇವಸಾಮಿಪ್ಯ ಮತ್ತು ದೇವದರ್ಶನಕ್ಕೋಸ್ಕರ ಕಾತರಗೊಳ್ಳುತ್ತಾನೆಂದು ದೇವರಿಗೆ ಗೊತ್ತು. ಆದ್ದರಿಂದ ಅವನೇ ಸ್ವಯಂ ಮನುಷ್ಯನ ಸಮೀಪಕ್ಕೆ ಬರುತ್ತಾನೆ. ದೇವರು ತನ್ನ ಶಕ್ತಿ ಮತ್ತು ಗುಣಗಳನ್ನು ಪ್ರಕಟಪಡಿಸುವ ಮೂಲಕ ಮನುಷ್ಯನಿಗೆ ಪ್ರತ್ಯಕ್ಷನಾಗುತ್ತಾನೆ. ಹಾಗೆ ಮನುಷ್ಯನು ಅವನ ಆಧ್ಯಾತ್ಮಿಕ ದೃಷ್ಟಿ ಮತ್ತು ಬುದ್ಧಿಯಿಂದ ದೇವರನ್ನು ದರ್ಶಿಸುತ್ತಾನೆ. ಕೆಳಗಿನ ವಾಕ್ಯದ ಮೂಲಕ ಪವಿತ್ರ ಖುರ್‌ಆನ್ ದೇವಾಸ್ತಿತ್ವವನ್ನು ರುಜುಪಡಿಸಲು ಹೆಚ್ಚಿನ ಪುರಾವೆಗಳನ್ನು ನೀಡಿರುತ್ತದೆ.

"ಯಾರ ಕೈಯಲ್ಲಿ ಪರಮಾಧಿಕಾರವೂ ಎಲ್ಲ ಕಾರ್ಯಗಳಲ್ಲಿ ಪೂರ್ಣ ಸಾಮರ್ಥ್ಯವೂ ಇರುವುದೋ ಅವನೇ ಪರಿಶುದ್ಧ ದೇವನು. ನಿಮ್ಮ ಪೈಕಿ ಯಾರು ಸತ್ಕರ್ಮಗೈಯುತ್ತಾರೆಂದು ನಿಮ್ಮನ್ನು ಪರೀಕ್ಷಿಸಿ ತಿಳಿಯಲಿಕ್ಕೋಸ್ಕರ ಅವನು ಮರಣ ಮತ್ತು ಜೀವನವನ್ನು ಸೃಷ್ಟಿಸಿದ್ದಾನೆ. ಅವನು ಪ್ರತಾಪಶಾಲಿಯೂ ಕ್ಷಮಾಶೀಲನೂ ಆಗಿದ್ದಾನೆ. ಏಳು ಆಕಾಶಗಳನ್ನು ಪದರು ಪದರಾಗಿ ಅವನು ಸೃಷ್ಟಿಸಿದ್ದಾನೆ. ಕಾರುಣ್ಯನಿಧಿಯಾದ ಅಲ್ಲಾಹನ ಸೃಷ್ಟಿಯಲ್ಲಿ ಅಸಮಂಜಸವಾದ ಏನನ್ನೂ ನೀವು ಕಾಣಲಾರಿರಿ. (ಏನಾದರೂ ನ್ಯೂನತೆಗಳನ್ನು ದೇವಸೃಷ್ಟಿಯಲ್ಲಿ ಹುಡುಕಲು ನೀವು ಪ್ರಯತ್ನಿಸಬೇಡಿರಿ). ನೀವು ಎಷ್ಟೇ ಶ್ರಮಿಸಿದರೂ ಸರಿ, ಯಾವುದೇ ಕುಂದು ಕೊರತೆಯನ್ನು ಕಂಡುಹಿಡಿಯಲಾಗದೆ ನಿಮ್ಮ ದೃಷ್ಟಿಯೆಲ್ಲ ದಣಿದು, ಸೋತು ನಿಮ್ಮೆಡೆಗೆಯೇ ಮರಳುವುವು. (67:2–5)

ಮೇಲೆ ಉದ್ಧರಿಸಲಾದ ಪವಿತ್ರ ಖುರ್‌ಆನಿನ ವಚನಗಳ ಬಗ್ಗೆ ಗಾಢವಾಗಿ ಚಿಂತಿಸಿದರೆ, ಈ ಪ್ರಪಂಚದ ಸೃಷ್ಟಿಯಲ್ಲಿರುವ ಅದ್ಭುತಕರವಾದ ಸ್ಥಿತಿಯನ್ನು ನಮಗೆ ಮನಗಾಣಲು ಸಾಧ್ಯ. ಪ್ರತಿಯೊಂದು ಸೃಷ್ಟಿಯ ಆವಶ್ಯಕತೆಗಳೆಲ್ಲವೂ ಅದ್ಭುತಕರವಾದ ರೀತಿಯಲ್ಲಿ ನಿರ್ವಹಿಸಲ್ಪಟ್ಟಿವೆ ಎಂದು ನಮಗೆ ಮನವರಿಕೆಯಾಗುವುದು. ಬಹಳ ಅದ್ಭುತಕರವಾದ ರೀತಿಯಲ್ಲಿ ಪ್ರತಿಯೊಂದು ಜೀವಿಯ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಬೇಕಾದ ಭೌತಿಕ ಅನುಕೂಲತೆಗಳನ್ನೆಲ್ಲ ದೇವರು ಸಿದ್ಧಪಡಿಸಿರುವನೆಂಬ ವಿಚಾರ ಸಹ ನಮಗೆ ಮನದಟ್ಟಾಗುವುದು. ●

(ಮುಂದುವರಿಯುವುದು)

# ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ - II

## ಮದೀನ ಪ್ರವೇಶ

★ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್

ಸುರಾಖರನ್ನು ಬೀಳ್ಕೊಟ್ಟ ನಂತರ ಪೈಗಂಬರರು ತನ್ನ ಪ್ರಯಾಣ ಮುಂದುವರಿಸಿ ದೀರ್ಘ ಯಾತ್ರೆಯನ್ನು ಕ್ರಮಿಸಿದ ಬಳಿಕ ಮದೀನಕ್ಕೆ ತಲಪಿದರು. ಮದೀನದ ಜನರು ಬಹಳ ಕಾತರದಿಂದ ಪೈಗಂಬರರ ಬರವನ್ನು ಎದುರುನೋಡುತ್ತಿದ್ದರು. ಮಕ್ಕದಲ್ಲಿ ಉದಯಿಸಿದ ದಿವ್ಯಪ್ರಕಾಶದ ಆ ಸೂರ್ಯನು ಮದೀನದಲ್ಲಿ ಬೆಳಗುವಂತಾದುದು ಮದೀನದವರ ಮಹಾ ಭಾಗ್ಯವೇ ಆಗಿತ್ತು. ಪೈಗಂಬರರು ಮಕ್ಕದಿಂದ ಹೊರಟಿರುವರೆಂಬ ಸುದ್ದಿ ತಿಳಿದಾಗಿನಿಂದಲೇ ಅವರು ಬಹಳ ಉತ್ಸಾಹದಿಂದ ಕಾಯತೊಡಗಿದ್ದರು. ಅವರಲ್ಲಿ ಕೆಲವರಂತೂ ಪ್ರತಿದಿನ ಮದೀನದಿಂದ ಹೊರಗೆ ಕೆಲವು ಮೈಲಿಗಳಷ್ಟು ದೂರ ಹೋಗಿ ಪೈಗಂಬರರ ಆಗಮನವನ್ನು ಪ್ರತೀಕ್ಷಿಸುತ್ತಾ ಸಾಯಂಕಾಲದ ವರೆಗೆ ಕಾಣದಾದಾಗ ನಿರಾಶೆಯಿಂದ ಹಿಂತಿರುಗುತ್ತಿದ್ದರು. ಅಂತೂ ಹಝ್ರತ್ ಪೈಗಂಬರ್ ಮತ್ತು ಸಂಗಡಿಗರು ಮದೀನದ ಸಮೀಪಕ್ಕೆ ಬಂದು ತಲಪಿದರು. ಖಬಾ ಎಂಬ ಹತ್ತಿರದ ಒಂದು ಗ್ರಾಮದಲ್ಲಿ ಸ್ವಲ್ಪ ಕಾಲ ತಂಗಲು ಪೈಗಂಬರರು ತೀರ್ಮಾನಿಸಿದರು. ಮದೀನದ ಓರ್ವ ಯೆಹೂದಿ ಅವರ ಒಂಟೆಗಳನ್ನು ಕಂಡು ಇದು ಪೈಗಂಬರರೇ ಎಂದು ಖಚಿತಪಡಿಸಿಕೊಂಡು ಎತ್ತರವಾದ ಒಂದು ಸ್ಥಳವನ್ನೇರಿ ಈ ರೀತಿ ಜೋರಾಗಿ ಕೂಗಿ ಹೇಳಿದರು: "ಎಲೈ ಖೈಲಾ ಸಂತತಿಗಳೇ* ನೀವು ಯಾರ ಪ್ರತೀಕ್ಷೆಯಲ್ಲಿದ್ದೀರೋ ಆ ವ್ಯಕ್ತಿ ಇದೋ ಬಂದಿರುವರು.'' ಈ ಶಬ್ದವನ್ನು ಕೇಳಿ ಮದೀನದ ಜನರು 'ಖಬಾ'ದ ಕಡೆಗೆ ಓಡಿ ಬಂದರು. ಇತ್ತ ಖಬಾದ ಜನರು ತಮ್ಮ ಗ್ರಾಮದಲ್ಲಿ ಅಲ್ಲಾಹನ ಪೈಗಂಬರರು ಉಳಕೊಂಡಿರುವರೆಂಬ ಸುದ್ದಿ ತಿಳಿದು ಅತ್ಯಂತ ಸಂತೋಷದಿಂದಿದ್ದರು.

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ರವರ ಅತ್ಯಂತ ವಿನಯ ಹಾಗೂ ಸರಳ ವ್ಯಕ್ತಿತ್ವದ ಕಡೆಗೆ ಬೆಳಕು ಚೆಲ್ಲುವ ಒಂದು ಸ್ವಾರಸ್ಯಕರ ಘಟನೆ 'ಖಬಾ'ದಲ್ಲಿ ನಡೆಯಿತು. ಮದೀನದ ಜನರಲ್ಲಿ ಹೆಚ್ಚಿನವರು ಮೊದಲೆಂದೂ ಪೈಗಂಬರರನ್ನು ಕಣ್ಣಾರೆ ಕಂಡಿರಲಿಲ್ಲ. ಪೈಗಂಬರರ ಮುಖಪರಿಚಯ ಅವರಿಗಿರಲಿಲ್ಲ. ಪೈಗಂಬರ್(ಸ) ಮತ್ತು ಸಂಗಡಿಗರು ವಿಶ್ರಾಂತಿ ಪಡೆಯುತ್ತಿದ್ದ ವೃಕ್ಷದ ಕೆಳಗೆ ಬಂದು ಜಮಾಯಿಸಿದ ಮದೀನದ ಜನರು ಮೊದಲು ಹಝ್ರತ್ ಅಬೂಬಕರ್(ರ) ಅವರನ್ನು ಪೈಗಂಬರರೆಂದು ತಪ್ಪಾಗಿ ಗ್ರಹಿಸಿಕೊಂಡರು. ಅಬೂಬಕರ್‌ರಿಗೆ ಮುಹಮ್ಮದ್(ಸ)ರಿಗಿಂತಲೂ ಪ್ರಾಯ ಕಡಿಮೆಯಿದ್ದರೂ ಅವರ ದಾಡಿರೋಮಗಳು ಹೆಚ್ಚು ಬಿಳಿಯಾಗಿದ್ದವು. ಉತ್ತಮ ಉಡುಪು ಸಹ ಅವರದೇ ಆಗಿತ್ತು. ಆದುದರಿಂದ ಹ| ಅಬೂಬಕರ್‌ರನ್ನೇ ಪ್ರವಾದಿಯೆಂದು ಗ್ರಹಿಸಿದ ಜನರು ವಿನಯದಿಂದ ಅವರ ಮುಂದೆ ಕುಳಿತುಕೊಂಡರು. ಇದರಿಂದ ಮದೀನದ ಜನರು ತನ್ನನ್ನು ಪ್ರವಾದಿಯೆಂದು ತಪ್ಪಾಗಿ ತಿಳಿದುಕೊಂಡಿರುವರೆಂಬುದನ್ನು ಗ್ರಹಿಸಿಕೊಂಡ ಅಬೂಬಕರ್, ಒಡನೆಯೇ ಒಂದು ಹೊದಿಕೆಯನ್ನು ಕೈಯಲ್ಲಿ ತೆಗೆದುಕೊಂಡು ಸೂರ್ಯನಿಗೆ ಅಭಿಮುಖವಾಗಿ ಅವನ್ನು ಹಿಡಿಯುತ್ತಾ ಪೈಗಂಬರರೊಡನೆ ಈ ರೀತಿ ಹೇಳಿದರು: "ಓ ಅಲ್ಲಾಹನ ಪ್ರವಾದಿಯರೇ, ತಮ್ಮ ಮೇಲೆ ಸೂರ್ಯನ ಬಿಸಿಲು ಬೀಳುತ್ತಿದೆ. ಅದಕ್ಕಾಗಿ

---

* ಮದೀನದ ನಿವಾಸಿಗಳು ಖೈಲಾ ಎಂಬ ಪೂರ್ವ ಕಾಲದ ಓರ್ವ ಮಹಿಳೆಯ ವಂಶಜರಾದುದರಿಂದ ಅವರನ್ನು ಖೈಲಾ ಸಂತತಿಗಳು ಎಂದು ಕರೆಯಲಾಗುತ್ತಿತ್ತು.

ನಾನು ಈ ಬಟ್ಟೆಯಿಂದ ನೆರಳು ಸಿಗುವಂತೆ ಮಾಡುತ್ತಿದ್ದೇನೆ." (ಬುಖಾರಿ). ಈ ರೀತಿಯಾಗಿ ಸ್ವಾರಸ್ಯಕರ ಶೈಲಿಯಿಂದ ಹ। ಅಬೂಬಕರ್ ಮದೀನದ ಜನರಿಗೆ ಉಂಟಾದ ತಪ್ಪು ಭಾವನೆಯನ್ನು ನೀಗಿಸಿದರು.

'ಖುಬಾ'ದಲ್ಲಿ ಹತ್ತು ದಿವಸ ತಂಗಿದ ಬಳಿಕ ಮದೀನದ ಜನರು ಪ್ರವಾದಿವರ್ಯರನ್ನು ತಮ್ಮ ನಗರಕ್ಕೆ ಕರಕೊಂಡು ಹೋದರು. ಮದೀನಕ್ಕೆ ಪ್ರವೇಶಿಸಿದ ಪ್ರವಾದಿಯವರಿಗೆ ಅಲ್ಲಿಯ ಮುಸಲ್ಮಾನ ಪುರುಷರೂ ಸ್ತ್ರೀಯರೂ ಮಕ್ಕಳೂ ಎಲ್ಲಾ ಸೇರಿ ಸ್ತುತಿ ಕೀರ್ತನೆಗಳನ್ನು ಹಾಡಿ ಸ್ವಾಗತ ಬಯಸಿದರು. ಪೈಗಂಬರರನ್ನು ತಮ್ಮ ನಗರಕ್ಕೆ ಸ್ವಾಗತಿಸುತ್ತಾ ಅವರು ಹಾಡಿದ ಹಾಡುಗಳಲ್ಲಿ ಒಂದು ಈ ರೀತಿಯಿತ್ತು:

ತಲಅಲ್‌ಬದ್‌ರು ಅಲೈನಾ
ಮಿನ್‌ಸಾನಿಯ್ಯಾತಿಲ್ ವಿದಾಈ
ವಜಬುಶ್ಶುಕ್ರು ಅಲೈನಾ
ಮಾ ದಆ ಲಿಲ್ಲಾಹಿ ದಾಈ
ಅಯ್ಯುಹಲ್ ಮಬ್‌ಊಸು ಫೀನಾ
ಜಿಅ್‌ತ ಬಿಲ್‌ಅಮ್ರಿಲ್ ಮುತಾಈ

ಅಸ್ತಮಯ ದಿಕ್ಕಿನಿಂದ (ಪಶ್ಚಿಮದಿಂದ) ಪೌರ್ಣಮಿಯ ಚಂದ್ರನು ನಮ್ಮ ಮೇಲೆ ಉದಯಿಸಿ ಬಂದಿರುವನು, ದೇವನೆಡೆ ಆಹ್ವಾನಿಸುವ ಈ ಸಂದೇಶವಾಹಕರು ನಮ್ಮ ಮಧ್ಯೆ ಇರುವ ಕಾಲವೆಲ್ಲಾ ದೇವರಿಗೆ ಕೃತಜ್ಞತೆ ಸಲ್ಲಿಸಲು ನಾವು ಹೊಣೆಗಾರರಾಗಿದ್ದೇವೆ. ದೇವರಿಂದ ನಮಗಾಗಿ ಕಳುಹಿಸಲ್ಪಟ್ಟ ಮಹಾಪುರುಷರೇ, ನಮ್ಮ ಅನುಸರಣೆಯನ್ನು ಪೂರ್ಣವಾಗಿ ನಿಮ್ಮ ಚರಣಗಳಿಗೆ ಒಪ್ಪಿಸಿರುತ್ತೇವೆ.

ಹಜ್ರತ್ ಪೈಗಂಬರರು ಮದೀನ ನಗರಕ್ಕೆ ಅವರ ಪೂರ್ವದ ಕಡೆಯಿಂದ ಪ್ರವೇಶಿಸಿರಲಿಲ್ಲ. ಆದರೆ, ಪೂರ್ಣ ಚಂದ್ರನ ಉದಯವು ಪೂರ್ವದಿಂದ ಉಂಟಾಗುತ್ತದೆಯಷ್ಟೆ. ಮದೀನ ನಿವಾಸಿಗಳು ತಮ್ಮ ಮೇಲೆ ದಿವ್ಯ ಪ್ರಭೆ ಸುರಿಸಲು ಆಗಮಿಸಿದ ಈ ಪ್ರವಾದಿವರ್ಯರನ್ನು ಆಧ್ಯಾತ್ಮಿಕ ನಭೋಮಂಡಲದ ಪೂರ್ಣಚಂದ್ರ ಎಂಬ ಅರ್ಥದಲ್ಲಿ ಸಂಬೋಧಿಸಿದ್ದರು. ಅದಕ್ಕಿಂತ ಮೊದಲು ಅವರು ಆಧ್ಯಾತ್ಮಿಕ ಅಂಧಕಾರದಲ್ಲಿ ಮುಳುಗಿದ್ದರೆಂದೂ ಭೌತಿಕ ಚಂದ್ರನು ಸಾಮಾನ್ಯವಾಗಿ ಮೂಡಿ ಬರುವ ದಿಕ್ಕಿಗಿಂತ ಭಿನ್ನ ದಿಕ್ಕಿನಲ್ಲಿ ಈ ಆಧ್ಯಾತ್ಮಿಕ ಚಂದ್ರೋದಯ ಉಂಟಾಗಿದೆಯೆಂದೂ ಅವರು ಹಾಡಿನಲ್ಲಿ ಹೇಳಿದುದರ ಇಂಗಿತವಾಗಿತ್ತು. ಅದೊಂದು ಸೋಮವಾರವಾಗಿತ್ತು. ಹಜ್ರತ್ ಪೈಗಂಬರರು "ಸೌರ್" ಗುಹೆಯಿಂದ ಮದೀನಕ್ಕೆ ಯಾತ್ರೆ ಪ್ರಾರಂಭಿಸಿದ್ದು ಸಹ ಒಂದು ಸೋಮವಾರವೇ. ಆಶ್ಚರ್ಯದ ಸಂಗತಿಯೆಂದರೆ, ಪೈಗಂಬರರು ಹತ್ತು ವರ್ಷಗಳ ನಂತರ ಮಕ್ಕದೊಳಗೆ ವಿಜಯಿಯಾಗಿ ಮರು ಪ್ರವೇಶ ಮಾಡಿದ್ದು ಸಹ ಒಂದು ಸೋಮವಾರವೇ ಆಗಿತ್ತು!

ಪೈಗಂಬರರಿಗೆ ಆತಿಥ್ಯ ನೀಡಿ ಅವರನ್ನು ತಮ್ಮ ಮನೆಯಲ್ಲಿ ಇರಗೊಳಿಸಬೇಕೆಂದು ಮದೀನದ ಪ್ರತಿಯೊಬ್ಬ ವ್ಯಕ್ತಿಯ ಆಶೆಯಾಗಿತ್ತು. ಪೈಗಂಬರರ ಒಂಟೆಯು ಆ ನಗರದ ಬೀದಿಗಳಲ್ಲಿ ಸಾಗುತ್ತಿದ್ದಾಗ ಆಯಾ ಸ್ಥಳದ ಮುಂದಾಳುಗಳೂ ಮಹನೀಯ ವ್ಯಕ್ತಿಗಳೂ ತಮ್ಮ ಮನೆಯ ಮುಂದೆ ಆದರದಿಂದ ಪೈಗಂಬರರಿಗೆ ಸ್ವಾಗತ ಬಯಸಿ ತಮ್ಮ ಮನೆಯಲ್ಲಿ ಉಳಕೊಳ್ಳುವಂತೆ ವಿನಂತಿಸುತ್ತಿದ್ದರು. "ಓ ಪೈಗಂಬರರೇ ಇದೋ ನಮ್ಮ ಭವನಗಳು, ನಮ್ಮ ಸ್ವತ್ತು ಸಂಪತ್ತುಗಳು, ನಮ್ಮ ಜನರು ಎಲ್ಲವೂ ತಮ್ಮ ಸೇವೆಗಾಗಿ ಸಿದ್ಧ ಇವೆ. ತಮಗೆ ಬೇಕಾದ ಭದ್ರತೆ ಒದಗಿಸಲು ಹಾಗೂ ತಮ್ಮ ಸೇವೆಗೈಯಲು ನಾವು ಸರ್ವಥಾ ಸಿದ್ಧರಿದ್ದೇವೆ. ಆದುದರಿಂದ ನಮ್ಮ ಮನೆಗೆ ದಯಪಾಲಿಸಿರಿ" ಎಂಬುದಾಗಿ ಅವರು ಭಿನ್ನವಿಸಿಕೊಳ್ಳುತ್ತಿದ್ದರು. ಕೆಲವರಂತೂ ಆವೇಶದಿಂದ ಮುಂದೆ ಬಂದು ಪೈಗಂಬರರ ಒಂಟೆಯ ಮೂಗುದಾರವನ್ನು ಹಿಡಿದು ನಿಲ್ಲಿಸಿ ತಮ್ಮ ಮನೆಗೆ ಬರಲೇ ಬೇಕೆಂದು ವಿನಯ ಪೂರ್ವಕ ಒತ್ತಾಯಿಸುತ್ತಿದ್ದರು. ಹಜ್ರತ್ ಪೈಗಂಬರರು ಪ್ರತಿಯೊಬ್ಬರನ್ನೂ ಸಾಂತ್ವನ ಪಡಿಸುತ್ತಾ ಅವರಿಗೆ ಈ ರೀತಿ ಉತ್ತರಿಸುತ್ತಿದ್ದರು– "ನನ್ನ ಒಂಟೆಯನ್ನು ಅದರ ಪಾಡಿಗೇ ಬಿಟ್ಟು ಬಿಡಿರಿ. ಇಂದು ಅದು ದೇವರ ಆಜ್ಞಾನುಸಾರವಾಗಿ ಚಲಿಸುತ್ತಿದೆ. ದೇವರು ಇಚ್ಛಿಸಿದಲ್ಲಿ ಮಾತ್ರ ಅದು ನಿಲ್ಲುವುದು."

ಕೊನೆಗೆ. ಬನೂ ನಜ್ಜಾರ್ ಗೋತ್ರದ ಅನಾಥರಿಗೆ ಸೇರಿದ ಒಂದು ನಿವೇಶನದಲ್ಲಿ ಬಂದು ಪೈಗಂಬರರ ಒಂಟೆ ನಿಂತಿತು. ಪೈಗಂಬರರು ಅಲ್ಲಿ ಒಂಟೆಯಿಂದಿಳಿದು ಹೇಳಿದರು: "ನಾವು ಇಲ್ಲಿ ಉಳಕೊಳ್ಳಬೇಕೆಂಬುದೇ ದೇವೇಚ್ಛೆ

ಯೆಂದು ತೋರುತ್ತದೆ." ನಂತರ ಪೈಗಂಬರರು ಕೇಳಿದರು: "ಈ ಜಮೀನ್ ಯಾರಿಗೆ ಸೇರಿದ್ದು?" ವಿಚಾರಿಸಲಾಗಿ ಅದು ಕೆಲವು ಅನಾಥರಿಗೆ ಸೇರಿದ ಜಮೀನೆಂದು ತಿಳಿದು ಬಂತು, ಆ ಅನಾಥರ ರಕ್ಷಕ (guardian) ಮುಂದೆ ಬಂದು ಪೈಗಂಬರರ ಉಪಯೋಗಾರ್ಥ ಆ ಜಮೀನನ್ನು ಅರ್ಪಿಸಲು ಸಿದ್ಧರಾದರು. ಪೈಗಂಬರರು ಹೇಳಿದರು: "ನಾವು ಯಾರದಾರೂ ಹಕ್ಕನ್ನು ಉಚಿತವಾಗಿ ಪಡೆಯಲಿಚ್ಛಿಸುವುದಿಲ್ಲ." ಹಾಗೆ ಆ ಜಾಗಕ್ಕೆ ಒಂದು ಮೌಲ್ಯವನ್ನು ನಿಗದಿಪಡಿಸಿದ ನಂತರ ಪೈಗಂಬರರು ಅಲ್ಲಿ ಒಂದು ಮಸ್ಜಿದನ್ನೂ ಅದಕ್ಕೆ ಹೊಂದಿಕೊಂಡು ತಮ್ಮ ಮನೆಗಳನ್ನೂ ನಿರ್ಮಿಸಲು ತೀರ್ಮಾನಿಸಿದರು.

ನಂತರ ಪೈಗಂಬರರು ಆ ಸ್ಥಳಕ್ಕೆ ಅತಿ ಹತ್ತಿರದ ಮನೆ ಯಾರದೆಂದು ಕೇಳಿದರು. ಆಗ ಅಬೂ ಅಯ್ಯೂಬ್ ಅನ್ಸಾರಿ ಎಂಬವರು ಮುಂದೆ ಬಂದು ತನ್ನ ಮನೆ ಅತಿ ಹತ್ತಿರದ್ದೆಂದೂ ಪೈಗಂಬರರ ಸೇವೆಗಾಗಿ ಅದು ಸಿದ್ಧವಿದೆಯೆಂದೂ ತಿಳಿಸಿದರು. ಅವರ ಮನೆಯಲ್ಲಿ ಒಂದು ಕೊಠಡಿಯನ್ನು ತನಗಾಗಿ ಸಜ್ಜುಗೊಳಿಸುವಂತೆ ಪೈಗಂಬರರು ಅವರೊಡನೆ ಅಪೇಕ್ಷಿಸಿದರು. ಅಬೂ ಅಯ್ಯೂಬ್ ಅನ್ಸಾರಿಯವರದು ಒಂದು ಮಾಳಿಗೆ ಮನೆಯಾಗಿತ್ತು. ಅವರು ತನ್ನ ಮನೆಯ ಮೇಲಂತಸ್ತನ್ನು ಪೂರ್ತಿ ಪೈಗಂಬರರಿಗೆ ಬಿಟ್ಟುಕೊಡಲು ಸಿದ್ಧರಾದರು. ಆದರೆ, ಸಂದರ್ಶಕರ ಸೌಕರ್ಯವನ್ನು ಪರಿಗಣಿಸಿ ಪೈಗಂಬರರು ಮನೆಯ ಕೆಳಭಾಗದಲ್ಲೇ ಉಳಕೊಳ್ಳುವ ಇಚ್ಛೆಯನ್ನು ಪ್ರಕಟಿಸಿದರು.

ಮದೀನದ ಮುಸ್ಲಿಮರಿಗೆ ಹಜ್ರತ್ ಪೈಗಂಬರರ ಮೇಲಿದ್ದ ಅನನ್ಯವಾದ ಭಕ್ತಿ ಆದರಗಳು ಪುನಃ ಪ್ರಕಟವಾದವು. ಅಬೂ ಅಯ್ಯೂಬ್ ಅನ್ಸಾರಿ ಪೈಗಂಬರರ ಇಂಗಿತದ ಮೇರೆಗೆ ತನ್ನ ಮನೆಯ ಕೆಳಭಾಗವನ್ನು ಅವರಿಗೆ ನೀಡಿದ್ದರೂ ಪೈಗಂಬರರು ಉಳಕೊಂಡ ಒಂದು ಕಟ್ಟಡದ ಮಹಡಿಯ ಮೇಲೆ ತಾನು ಮತ್ತು ಕುಟುಂಬ ಇರುವುದನ್ನು ಅವರು ಇಷ್ಟಪಡಲಿಲ್ಲ. ಅಂದು ರಾತ್ರಿ ಅವರು ಮತ್ತು ಅವರ ಪತ್ನಿ ನಿದ್ದೆ ಮಾಡಲೇ ಇಲ್ಲ. ಆ ರಾತ್ರಿ ನೀರು ತುಂಬಿದ ಒಂದು ಪಾತ್ರೆಯು ಆಕಸ್ಮಾತ್ ಕೈಜಾರಿ ಕೆಳಗೆ ಬಿದ್ದು ನೀರೆಲ್ಲಾ ನೆಲದಲ್ಲಿ ಚೆಲ್ಲಿತು. ಅವರ ಕೆಳಗಿನ ಕೊಠಡಿಯಲ್ಲಿ ಪೈಗಂಬರರು ಮಲಗಿರುವುದರಿಂದ ನೀರಿನ ಹನಿಯೇನಾದರೂ ಬೀಳಬಹುದೆಂಬ ಶಂಕೆಯಲ್ಲಿ ಅಬೂ ಅಯ್ಯೂಬರು ಕೂಡಲೇ ತನ್ನ ರಜಾಯಿಯನ್ನು ನೀರಲ್ಲಿ ಹಾಕಿ ಅದ್ದಿ ತೆಗೆದು ನೀರು ಕೆಳಗೆ ಹರಿಯದಂತೆ ತಡೆದರು. ಮರುದಿನ ಬೆಳಿಗ್ಗೆ ಹಜ್ರತ್ ಪೈಗಂಬರರ ಸಮಕ್ಷಮದಲ್ಲಿ ಅವರು ಈ ಘಟನೆಯನ್ನು ವಿವರಿಸಿದರು. ಇದನ್ನು ಕೇಳಿದ ಹಜ್ರತ್ ಪೈಗಂಬರರು ತಾನು ಮನೆಯ ಮೇಲ್ಭಾಗದಲ್ಲಿ ಉಳಕೊಳ್ಳಲು ಒಪ್ಪಿದರು. ಪ್ರತಿದಿನ ಅಬೂ ಅಯ್ಯೂಬ್ ಅನ್ಸಾರಿಯವರ ಮನೆಯಿಂದ ಪೈಗಂಬರರಿಗೆ ಭೋಜನ ಕಳುಹಿಸಲಾಗುತ್ತಿತ್ತು. ಪೈಗಂಬರರು ಉಂಡು ಮಿಕ್ಕಿದ್ದನ್ನು ಅನ್ಸಾರಿಯವರ ಮನೆಯವರೆಲ್ಲರೂ ಉಣ್ಣುತ್ತಿದ್ದರು. ಕೆಲವು ದಿನಗಳ ಬಳಿಕ ಪೈಗಂಬರರಿಗೆ ಆತಿಥ್ಯ ನೀಡಲು ನಮಗೆ ಅವಕಾಶ ಲಭಿಸಬೇಕೆಂದು ಇತರ ಅನ್ಸಾರಿಯರು* ಸಹ ಅಪೇಕ್ಷೆಪಟ್ಟರು. ಹಾಗೆ ಪೈಗಂಬರರು ತನ್ನ ಸ್ವಂತ ಮನೆಯ ನಿರ್ಮಾಣವನ್ನು ಪೂರ್ಣಗೊಳಿಸುವ ವರೆಗೆ ಮದೀನದ ಮುಸಲ್ಮಾನರು ಒಬ್ಬೊಬ್ಬರಾಗಿ ತಮ್ಮ ಮನೆಯಿಂದ ಪೈಗಂಬರರಿಗೆ ಆಹಾರವನ್ನು ತಲಪಿಸುತ್ತಿದ್ದರು.

ಮದೀನದ ಓರ್ವ ವಿಧವೆ ಹೆಂಗಸು – ಅವರಿಗೆ ಅನಸ್ ಎಂಬ ಹೆಸರಿನ ಒಬ್ಬ ಮಗ ಇದ್ದ. ಆಗ ಅನಸ್‌ನ ಪ್ರಾಯ 8 ಅಥವಾ 9 ವರ್ಷಗಳಾಗಿರಬಹುದು. ಆ ಮಹಿಳೆ ತನ್ನ ಈ ಒಬ್ಬನೇ ಮಗನನ್ನು ಹಜ್ರತ್ ಪೈಗಂಬರರ ಬಳಿಗೆ ಕರೆ ತಂದು ಆತನನ್ನು ಪೈಗಂಬರರ ಸೇವೆಗಾಗಿ ಅರ್ಪಿಸುತ್ತಿರುವೆನೆಂದೂ ಸ್ವೀಕರಿಸುವ ಕೃಪೆ ತೋರಬೇಕೆಂದೂ ವಿನಂತಿಸಿಕೊಂಡರು. ಆ ಮಹಿಳೆ ಪೈಗಂಬರರ ಮೇಲಿನ ಸ್ನೇಹಾದರಗಳಿಂದ ತನ್ನ ಏಕಮಾತ್ರ ಪುತ್ರನನ್ನು ಅವರ ಸೇವೆಗಾಗಿ ಬಲಿಯರ್ಪಿಸುತ್ತಿದ್ದರೂ ಆ ಬಾಲಕನಿಗೆ ನಿಜಾರ್ಥದಲ್ಲಿ ಅವರು ಅಮರ ಜೀವನವನ್ನು ನೀಡುತ್ತಿರುವುದಾಗಿ ಬಹುಶಃ ಅಂದು ಆ ಮಹಿಳೆ ಭಾವಿಸಿರಲಾರರು!

ಅನಸ್ ಹಜ್ರತ್ ಪೈಗಂಬರರ ಬಳಿಯಲ್ಲೇ ಬೆಳೆದು ದೊಡ್ಡವರಾಗಿ ನಂತರ ಇಸ್ಲಾಮಿನ ಓರ್ವ ದೊಡ್ಡ ವಿದ್ವಾಂಸರಾದರು, ಕ್ರಮೇಣ ಅವರೊಬ್ಬ ಧನಾಢ್ಯರೂ ಆದರು. ನೂರಕ್ಕಿಂತ ಹೆಚ್ಚು ವರ್ಷಗಳ ಕಾಲ ಅವರು

* ಪೈಗಂಬರರಿಗೆ ಮದೀನದಲ್ಲಿ ಆಶ್ರಯ ನೀಡಿ ಉಪಚರಿಸಿದ ಮದೀನದ ಮುಸಲ್ಮಾನರನ್ನು 'ಅನ್ಸಾರ್' ಎಂದು ಸಂಕೇತಿಸಲಾಗುತ್ತದೆ.

# ಉಪಗ್ರಹ ಮೂಲಕ ಐದು ಭೂಖಂಡಗಳಲ್ಲಿ ಖಲೀಫರ ಖುತ್ಬ ಪ್ರಸಾರ

★ ಮೌಲ್ವಿ ಮುಹಮ್ಮದ್ ಉಮರ್ ಎಚ್. ಎ.

ಇಂದು ಅಹ್ಮದಿಯಾ ಜಮಾಅತ್ ಚತುರ್ಥ ಖಲೀಫರಾದ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ರವರ ಆಧ್ಯಾತ್ಮಿಕ ನೇತೃತ್ವದಲ್ಲಿ ಜಗತ್ತಿನಾದ್ಯಂತ 140 ರಾಷ್ಟ್ರಗಳಲ್ಲಿ ವಿಜಯ ಪಥದಲ್ಲಿ ಮುನ್ನೇರುತ್ತಿದೆ. ಎಲ್ಲ ಅಡ್ಡಿ ಆತಂಕಗಳನ್ನು ತೊಡೆದು ನೀಗಿಸಿಕೊಂಡಿರುವ ಅಹ್ಮದಿಯಾ ಜಮಾಅತಿನ ಮುನ್ನಡೆ ಅವರ ವಿರೋಧಿಗಳ ಹೃದಯಗಳಲ್ಲಿ ಭಯಾಶಂಕೆಗಳನ್ನು ಸೃಷ್ಟಿಸಿದೆ.

---

(21 ಪುಟದಿಂದ)

ಬದುಕಿದ್ದರು. ಇಸ್ಲಾಮಿನ ಖಿಲಾಫತ್ ಕಾಲದಲ್ಲಿ ಅವರೊಬ್ಬ ಪ್ರತಿಷ್ಠಿತ ವ್ಯಕ್ತಿಯಾಗಿದ್ದರು. ಹ| ಅನಸ್ ಈ ರೀತಿ ಹೇಳುತ್ತಾರೆ: "ನಾನು ಬಾಲ್ಯ ಕಾಲದಿಂದಲೇ ಹಝ್ರತ್ ಪೈಗಂಬರರ ಸೇವೆಗಾಗಿ ನಿಯುಕ್ತನಾಗಿದ್ದೆ. ಹಾಗೂ ಅವರ ಜೀವನದ ಕೊನೆ ವರೆಗೂ ನಾನು ಅವರ ಜೊತೆಯಲ್ಲೇ ಇದ್ದೆ. ಪೈಗಂಬರರು ಯಾವತ್ತೂ ನನ್ನೊಡನೆ ಕಠೋರವಾಗಿ ವರ್ತಿಸಿದ್ದಿಲ್ಲ. ಕೋಪಿಸಿ ಮಾತನಾಡಿಯೂ ಇಲ್ಲ. ನನಗೆ ವಹಿಸಲು ಸಾಧ್ಯವಾಗದ ಯಾವ ಕೆಲಸವನ್ನೂ ಅವರು ನನ್ನಿಂದ ಮಾಡಿಸುತ್ತಿರಲಿಲ್ಲ.*" ಪೈಗಂಬರರು ಮದೀನದಲ್ಲಿದ್ದ ಕಾಲವೆಲ್ಲಾ ಅವರ ಸೇವಕನಾಗಿದ್ದುದು ಹ| ಅನಸ್ ಮಾತ್ರ. ಆದುದರಿಂದ ಅನಸ್(ರ) ಅವರ ಈ ಹೇಳಿಕೆಯು ಹಝ್ರತ್ ಮುಹಮ್ಮದ್ ಪೈಗಂಬರ್(ಸ)ರ ಸ್ವಭಾವ ಗುಣಗಳ ಮೇಲೆ ಬೆಳಕು ಚೆಲ್ಲುವ ಒಂದ ಮಹತ್ವಪೂರ್ಣ ಹೇಳಿಕೆಯಾಗಿದೆ. (ಸಶೇಷ) ●

---

* ಸಹೀಹ್ ಮುಸ್ಲಿಂ

1983ರಲ್ಲಿ ಪಾಕ್ ಅಧ್ಯಕ್ಷ ಝಿಯಾಉಲ್ ಹಕ್ ಹೂಡಿದ ಒಂದು ಗೂಢಾಲೋಚನೆಯನ್ನು ಅಲ್ಲಾಹನು ನಿಷ್ಫಲಗೊಳಿದನು. ಅದು ಹಝ್ರತ್ ಖಲೀಫರಿಗೆ ಪಾಕಿಸ್ಥಾನವನ್ನು ತೊರೆದು ಹೋಗಲು ಸಂದರ್ಭವನ್ನು ಮಾಡಿಕೊಟ್ಟಿತು. ಹೇಗಾದರೂ 'ಖಾದಿಯಾನಿ ಖಲೀಫ' ರನ್ನು ಸೆರೆ ಹಿಡಿದು ಏನಾದರೂ ಹೇತುಮಾಡಿ ಅವರನ್ನು ವಿಚಾರಣೆಗೊಳಪಡಿಸಿ ನೇಣುಗಂಬಕ್ಕೇರಿಸಿ, ಅಹ್ಮದಿಯಾ ಖಿಲಾಫತ್ ಒಂದು ಭಯೋತ್ಪಾದಕ ಕಾರ್ಯಾಚಟುವಟಿಕೆಯೆಂದೂ ಆದ್ದರಿಂದ ಅದನ್ನು ತಾವು ನಾಶಪಡಿಸಿ ನಾಮಾವಶೇಷ ಮಾಡಿದೆವೆಂದೂ ಜಗತ್ತಿನಲ್ಲೆಡೆ, ಮುಖ್ಯವಾಗಿ ಇಸ್ಲಾಮೀ ರಾಷ್ಟ್ರಗಳಲ್ಲಿ ಪ್ರಚಾರ ಮಾಡುವ ಉದ್ದೇಶದಿಂದ ಅವರು ಹೀಗೆ ಒಂದು ಆಜ್ಞೆಯನ್ನು ಹೊರಡಿಸಿದ್ದರು: Mirza Nasir Ahinad Head of the Ahmadiyya Community can not leave the country. (ಅಹ್ಮದಿಯಾ ಸಂಘಟನೆಯ ನಾಯಕ ಮಿರ್ಝಾ ನಾಸಿರ್ ಅಹ್ಮದ್ ದೇಶ ಬಿಟ್ಟು ಹೋಗಬಾರದು.)

ಈ ಆಜ್ಞೆಯನ್ನು ಹೊರಡಿಸಿದಾಗ ಮೂರನೆಯ ಖಲೀಫರಾದ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ರವರು ನಿಧನಹೊಂದಿ ಸುಮಾರು ಒಂದು ವರ್ಷವಾಗಿತ್ತು. ಆದ್ದರಿಂದ ಈಗಿನ ಖಲೀಫರಾದ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್‌ರವರಿಗೆ ಪಾಸ್‌ಪೋರ್ಟ್ ಮತ್ತು ವೀಸಾ ಮೂಲಕ ಪಾಕಿಸ್ಥಾನದಿಂದ ನಿರ್ಗಮಿಸಲು ಸಾಧ್ಯತಾಯಿತು. ಅವರ ಫಲವಾಗಿ ಕೇವಲ ಹತ್ತು ವರ್ಷಗಳೊಳಗೆ ಅಹ್ಮದಿಯಾ ಜಮಾಅತ್‌ಗಳಿಸಿದ ಅಭಿವೃದ್ಧಿ

ಅಹ್ಮದಿಯಾ ಜಮಾಅತ್ ಸ್ಥಾಪಿಸಲ್ಪಟ್ಟ ಮೊದಲ್ಗೊಂಡು ಲಭ್ಯವಾದುದಕ್ಕಿಂತ ಹೆಚ್ಚಿನದ್ದಾಗಿದೆ.

ತಾನು ಪಾಕಿಸ್ತಾನವನ್ನು ತೊರೆಯದೆ ಅಲ್ಲೇ ಉಳಿದು ಬಿಡುತ್ತಿದ್ದರೆ ಈ ಅಭಿವೃದ್ಧಿಗಳೆಲ್ಲ ಬರೇ ಒಂದು ದಿವಾ ಸ್ವಪ್ನವಾಗುತ್ತಿತ್ತೆಂದು ಹಝ್ರತ್ ಖಲೀಫರು ಹಲವು ಸಲ ನುಡಿದಿರುತ್ತಾರೆ.

ಅಲ್ಲಾಹನು ಹೇಳುತ್ತಾನೆ: "ಮಕರೂ ವ ಮಕ ರಲ್ಲಾಹು ವಲ್ಲಾಹು ಖೈರುಲ್ ಮಾಕಿರೀನ್" (ಅವರು ಹಲವು ತಂತ್ರಗಳನ್ನು ಪ್ರಯೋಗಿಸಿ ನೋಡಿದರು, ಅಲ್ಲಾಹರು ಸಹ ತಂತ್ರ ಪ್ರಯೋಗಿಸಿದನು. ಅಲ್ಲಾಹನು ತಂತ್ರ ಪ್ರಯೋಗಿಸುವುದರಲ್ಲಿ ಶ್ರೇಷ್ಠನಾಗಿದ್ದಾನೆ.) ಹೌದು, ಝಿಯಾಉಲ್‌ಹಕ್‌ರ 'ಮಕರೆ ಶರ್' (ಕುತಂತ್ರ) ಅಲ್ಲಾಹನು ಅಹ್ಮದಿಯತಿನ ಮಹಾ ಪುರೋಗತಿಗೆ 'ಮಕರೆ ಖೈರ್' (ಉತ್ತಮ ತಂತ್ರ) ಆಗಿ ಮಾರ್ಪಡಿಸಿದನು.

ಈ ಕಾಲ ಘಟ್ಟದಲ್ಲಿ ಅಹ್ಮದಿಯಾ ಜಮಾಅತಿಗೆ ಲಭಿಸಿರುವ ಅತಿ ಮಹತ್ವದ ಪುರೋಗತಿಗಳಲ್ಲಿ ಒಂದು ಹಝ್ರತ್ ಖಲೀಫರವರ ಖುತ್ಬಗಳು ಮತ್ತು ಪ್ರವಚನಗಳು ಉಪಗ್ರಹ ಮೂಲಕ ಅಮೇರಿಕ. ಆಫ್ರಿಕ, ಏಷ್ಯಾ, ಯುರೋಪ್, ಆಸ್ಟ್ರೇಲಿಯಾ ಎಂಬೀ ಭೂಖಂಡಗಳಲ್ಲಿ ಪ್ರಸಾರ ಮಾಡಲ್ಪಡುತ್ತವೆ ಎಂಬುದಾಗಿದೆ.

1992 ಒಕ್ಟೋಬರ್ 16ರಂದು ಕೆನಡದಲ್ಲಿ 25 ಎಕ್ರೆ ನಿವೇಶನದಲ್ಲಿ 20,000 ಚದರ ವಿಸ್ತೀರ್ಣದಲ್ಲಿ ನಿರ್ಮಿಸಲ್ಪಟ್ಟ ಕೆನಡದ ಅತಿ ದೊಡ್ಡ ಮಸೀದಿ "ಬೈತುಲ್ ಇಸ್ಲಾಂ"ನ ಉದ್ಘಾಟನ ಸಮಾರಂಭ ಮತ್ತು ಖಲೀಫರ ಭಾಷಣಗಳು ಐದು ಭೂಖಂಡಗಳಲ್ಲಿ ಉಪಗ್ರಹ ಮೂಲಕ ಪ್ರಸಾರ ಮಾಡಲ್ಪಟ್ಟದ್ದು ಸಹ ಪ್ರಸ್ತುತ ಸಾಧನೆಗಳಲ್ಲಿ ಒಂದಾಗಿದೆ.

ಆದರೆ ಈ ರೀತಿಯ ಸಾಧನೆಗಳು ಅಹ್ಮದಿಯಾ ಜಮಾಅತಿನ ವೈರಿಗಳಲ್ಲಿ ಅವರ ಕ್ರೋಧವನ್ನೂ ಹಗೆಯನ್ನೂ ಅಸೂಯೆಯನ್ನೂ ಹೆಚ್ಚಿಸಲು ಕಾರಣವಾದವು. "ಫಝಾದಹುಮುಲ್ಲಾಹು ಮರಳ" (ಅಲ್ಲಾಹನು ಅವರ ಹೃದಯದ ರೋಗಗಳನ್ನು ಹೆಚ್ಚು ಮಾಡಿದನು) ಎಂಬ ದೇವ ವಚನವನ್ನು ಅದು ಸಾರ್ಥಕಗೊಳಿಸಿದೆ.

ಪಾಕಿಸ್ತಾನದಿಂದ ಪ್ರಕಟವಾಗುವ 'ಅಹ್ಲೆ ಹದೀಸ್' ಎಂಬ ವಾರ ಪತ್ರಿಕೆ 1992 ಸಪ್ಟೆಂಬರ್ 11ರ ಸಂಚಿಕೆಯಲ್ಲಿ ಹೀಗೆ ಬರೆಯುತ್ತದೆ:

"1992 ಆಗಸ್ಟ್ 25ರ 'ಜಂಗ್' (ಲಾಹೋರ್) ಪತ್ರಿಕೆಯ ಕೊನೆಯ ಪುಟದಲ್ಲಿ ಖಾದಿಯಾನಿಯರ ಇಮಾಂ ಮಿರ್ಝಾ ತಾಹಿರ್ ಅಹ್ಮದ್‌ರವರ ಕುರಿತುಳ್ಳ ಒಂದು ವಾರ್ತೆ ಬಹಳ ಆತಂಕಕಾರಿಯಾಗಿದೆ.

"ವ್ಯಾಜ ನಿರ್ಮಿತವಾದ ಈ ಜಮಾಅತ್ (?) ನಕ್ಷತ್ರಗಳಿಗೆ ಲಗ್ಗೆಯಿಡುತ್ತಿರುವಾಗ ದೀನಿ ಜಮಾಅತುಗಳು ಪರಸ್ಪರ ಜಗಳಾಡಿ ತಲೆ ಒಡೆದುಕೊಳ್ಳುತ್ತಿರುವುದನ್ನು ಕಾಣುವಾಗ ಅತ್ಯಂತ ವ್ಯಥೆಯಾಗುತ್ತದೆ.

"ಖಾದಿಯಾನಿಸಂ ಒಂದು ಅಸತ್ಯ ಸಂಘಟನೆಯಾಗಿದ್ದು ಸಹ (?) ಇಂದು ಅತಿ ಹೆಚ್ಚು ಮುನ್ನೇರುತ್ತಿದೆ. ಯಾವ ರೀತಿಯ ಭಯವಾಗಲಿ ಕೋಲಾಹಲವಾಗಲಿ ಇಲ್ಲದೆ ಸಂಪೂರ್ಣ ಮೌನವಲಂಬಿಸಿಕೊಂಡು ತಮ್ಮ ಗುರಿ ಸಾಧನೆಗೆ ರಾತ್ರಿ ಹಗಲು ಅವರು ಪರಿಶ್ರಮಿಸುತ್ತಾರೆ. ಖಾದಿಯಾನಿಗಳ ಬಜೆಟ್ ಕೋಟಿಗಟ್ಟಲೆಗೆ ಮೇಲೇರುತ್ತಿದೆ. ಪ್ರಚಾರದ ಹೆಸರಿನಲ್ಲಿ ಅವರು ಜಗತ್ತಿನಲ್ಲೆಡೆ ತಮ್ಮ ಬಲೆ ಬೀಸುತ್ತಿದ್ದಾರೆ. ಅವರ ಮುಬಲ್ಲಿಗರು (ಧರ್ಮ ಪ್ರಚಾರಕರು) ದೂರ ದೂರ ದೇಶಗಳಿಗೆ ಹೋಗಿ ಅಲ್ಲಿರುವ ಮಣ್ಣನ್ನು ಗಾಳಿಸುತ್ತಿದ್ದಾರೆ. ಅವರು ತಮ್ಮ ಪತ್ನಿ ಮಕ್ಕಳನ್ನೂ ಬಂಧು ಬಾಂಧವರನ್ನೂ ಬಿಟ್ಟು ನಿಂತು ಹಾಗೂ ಬಹಳ ಕಷ್ಟದಿಂದ ಜೀವನ ಸಾಗಿಸಿ ಆಫ್ರಿಕದ ಉಷ್ಣದಿಂದ ಕೂಡಿದ ಮರಳು ಗಾಡಿನಲ್ಲಿಯೂ ಯುರೋಪಿನ ಕಠಿಣವಾದ ಶೈತ್ಯ ಪ್ರದೇಶಗಳಲ್ಲೂ ಆಸ್ಟ್ರೇಲಿಯಾ, ಕೆನಡಾ, ಅಮೇರಿಕ ಎಂಬೆಡೆಗಳಲ್ಲೂ ಖಾದಿಯಾನಿಸಮಿನ ಪ್ರಚಾರಕ್ಕಾಗಿ ಅಹೋ ರಾತ್ರಿ ತಿರುಗಾಡುತ್ತಿದ್ದಾರೆ. ಆದರೆ ನಮ್ಮ ಸ್ಥಿತಿಯೇನು? ನಮ್ಮ ಧಾರ್ಮಿಕ ಸಂಘಟನಗಳ ಬಜೆಟ್ ಕೆಲವು ಲಕ್ಷಗಳಿಗೆ ಸೀಮಿತವಾಗಿದೆ. ಪಾಕಿಸ್ತಾನದಲ್ಲಿ ಕ್ರೈಸ್ತ ಮಿಶನರಿಗಳೂ ಬಹಾಯಿಗಳೂ ಜನರನ್ನು ದಾರಿ ತಪ್ಪಿಸಲು ರಾತ್ರಿಹಗಲು ಪ್ರಯತ್ನಿಸುತ್ತಿದ್ದಾರೆ. ಅವರ ಪ್ರಚಾರ ಕಾರ್ಯಕ್ರಮಗಳು ದಿನೇ ದಿನೇ ಬಲಗೊಳ್ಳುತ್ತಿದೆ. ಅವರು ತಮ್ಮ ಸುಳ್ಳು ಧರ್ಮ ಪ್ರಚಾರಕ್ಕಾಗಿ ಪುಸ್ತಕಗಳನ್ನೂ ಕಿರುಕೃತಿಗಳನ್ನೂ ರಾಶಿಹಾಕುತ್ತಿ

ದ್ದಾರೆ. ಮತ್ತೆ ಆಧುನಿಕ ವಿದ್ಯಾಭ್ಯಾಸ ಮೂಲಕ ವೈಜ್ಞಾನಿಕ ರಂಗದಲ್ಲೂ ಜನರನ್ನು ತಮ್ಮ ಕಡೆಗೆ ಸೆಳೆಯುತ್ತಿದ್ದಾರೆ. ಆದರೆ ದೀನಿ ಜಮಾಅತ್‌ಗಳು ಮತ್ತು ಅವರ ಮುಖಂಡರು ಕುಫ್ರ್ ಫತ್ವ ಎಂಬ ಬಾಂಬುಗಳನ್ನು ಎಸೆಯುವುದರಲ್ಲಿ ಮಾತ್ರ ತೃಪ್ತಿ ಹೊಂದುತ್ತಿದ್ದಾರೆ.

"ಜಂಗ್ ದೈನಿಕ ಕೊನೆಯ ಪುಟದಲ್ಲಿ ಹೀಗೆ ಒಂದು ವಾರ್ತೆಯನ್ನು ಪ್ರಕಟಿಸಿದೆ:

"ಅಂದರೆ ಮಿರ್ಝಾ ತಾಹಿರ್ ಅಹ್ಮದ್‌ರವರ ಪ್ರವಚನ ಉಪಗ್ರಹ (Satellite) ಮೂಲಕ ಆಸ್ಟ್ರೇಲಿಯಾ, ಆಫ್ರಿಕ, ಯುರೋಪ್, ಏಷ್ಯಾ ಎಂಬ ಭೂಖಂಡಗಳಲ್ಲಿ ಪ್ರಸಾರಗೊಳುತ್ತಿದೆ. ನಮ್ಮ ಆಧ್ಯಾತ್ಮಿಕ ಸಮ್ಮೇಳನ ಹಜ್ಜ್ ವೇಳೆಯಲ್ಲಿ ಅರಫಾತ್ ಮೈದಾನ ದಲ್ಲಿ ಜರಗುತ್ತದೆ. ಹಜ್ಜ್‌ನ ಕೆಲವು ದೃಶ್ಯಗಳು ಉಪ ಗ್ರಹ ಮೂಲಕ ಕೆಲವು ಏಷ್ಯನ್ ಆಫ್ರಿಕನ್ ದೇಶಗಳಲ್ಲಿ ಮಾತ್ರ ಬಹಳ ಕಷ್ಟದಿಂದ ಪ್ರದರ್ಶಿಸಲ್ಪಡುತ್ತವೆ. ಯಾವುದಾದರೂ ಒಂದು ರಾಷ್ಟ್ರದ ನಾಯಕನ ಭಾಷಣ ಕೂಡ ಇಷ್ಟರವರೆಗೆ ಉಪಗ್ರಹ ಮೂಲಕ ಜಗತಿ ನೆಲ್ಲೆಡೆ ಪ್ರಸಾರ ಮಾಡಲ್ಪಟ್ಟಿಲ್ಲ. ವಿವಿಧ ದೇಶಗಳಲ್ಲಿ ದೊಡ್ಡ ದೊಡ್ಡ ರಾಜಕೀಯ ಪಕ್ಷಗಳಿವೆ ಮತ್ತು ಅವರ ದೊಡ್ಡ ದೊಡ್ಡ ನಾಯಕರು ಇದ್ದಾರೆ. ಅವರ ಭಾಷಣಗಳು ಮತ್ತು ಹೇಳಿಕೆಗಳು ಪ್ರೆಸ್ ಮೂಲಕ ಪ್ರಚಾರಗೊಳ್ಳು ತ್ತವೆ ಹೊರತು ಉಪಗ್ರಹ ಮೂಲಕ ಪ್ರಸಾರಗೊಳ್ಳು ವುದಿಲ್ಲ. ನಮ್ಮ ದೇಶದಲ್ಲಿ ಸಹ ಎರಡು ದೊಡ್ಡ ರಾಜಕೀಯ ಪಕ್ಷಗಳಿವೆ. ಮುಹಮ್ಮದ್ ಖಾನ್ ಜೊನೇಜೊರವರ ನಾಯಕತ್ವದಲ್ಲಿರುವ ಪಾಕಿಸ್ಥಾನ್ ಮುಸ್ಲಿಂ ಲೀಗ್ ಮತ್ತು ಮಿಸೆಸ್ ಬೆನಝೀರ್ ಭುಟ್ಟೋ ರವರ ನಾಯಕತ್ವದಲ್ಲಿರುವ ಪಾಕಿಸ್ಥಾನ್ ಪೀಪ್‌ಲ್ಸ್ ಪಾರ್ಟಿ. ಈ ಎರಡು ಪಕ್ಷಗಳೂ ಇಲ್ಲಿಯ ಆಡಳಿತೆ ಯನ್ನು ಪರ್ಯಾಯವಾಗಿ ವಹಿಸುತ್ತಿರುತ್ತವೆ. ಈ ಇಬ್ಬರು ನಾಯಕರುಗಳ ಭಾಷಣವಾಗಲಿ ಇಷ್ಟರ ವರೆಗೆ ಉಪಗ್ರಹ ಮೂಲಕ ಪ್ರಸಾರಗೊಳ್ಳಲಿಲ್ಲ; ಬೇರೆ ದೇಶಗ ಳಿಗೆ ತಲಪಿಸಲ್ಪಡಲೂ ಇಲ್ಲ. ಮಿಯಾನ್ ನವಾಜ್ ಶರೀಫ್ ಈ ದೇಶದ ಪ್ರಧಾನ ಮಂತ್ರಿ ಮತ್ತು ಅಸೆಂಬ್ಲಿಯ ನಾಯಕರಾಗಿದ್ದಾರೆ. ಗುಲಾಂ ಇಸಾಕ್ ಖಾನ್ ಪಾಕ್ ಅಧ್ಯಕ್ಷರು ಮತ್ತು ಜನರಲ್ ಆಸಿಫ್ ನವಾಬ್ ಜನ್ಜೋಗ ಚೀಫ್ ಓಫ್ ಸ್ಟಾಫ್ ಆಗಿದ್ದಾರೆ. ಇವರಲ್ಲಿ ಯಾರದೇ ಒಂದು ಭಾಷಣ ಅಥವಾ ಹೇಳಿಕೆ ಇಷ್ಟರ ತನಕ ಉಪ ಗ್ರಹ ಮೂಲಕ ಪ್ರಸಾರಗೊಳ್ಳಲಿಲ್ಲ. ಕಾರಣವೇನೆಂದರೆ ಉಪಗ್ರಹ ಮೂಲಕ ಪ್ರಸಾರ ಮಾಡಿ ದೂರ ದೇಶಗಳಿಗೆ ತಮ್ಮ ಅನಿಸಿಕೆಗಳನ್ನು ತಲಪಿಸುವುದು ಬಹಳ ವೆಚ್ಚದ ಏರ್ಪಾಡಾಗಿದೆ. ಅದು ನಮ್ಮಂತಹ ಒಂದು ದರಿದ್ರ ದೇಶದ ಶಕ್ತಿಗೆ ಅತೀತವಾದುದಾಗಿದೆ.

"ನಾವು ಪಾಕಿಸ್ಥಾನದ ಎಲ್ಲ ಜಮಾಅತ್‌ಗಳೊಡನೆ ಮತ್ತು ನಾಯಕರೊಡನೆ, ಅವರು ಅಲ್ಲಾಹನನ್ನು ಸ್ಮರಿಸಿ ಇಸ್ಲಾಮಿನ ಮಹತ್ವಕ್ಕೂ ದೀನಿನ ಉನ್ನತಿಗೂ ಪೈಗಂಬರರ ಖಾತಮುನ್ನುಬುವ್ವತಿನ ಸಂರಕ್ಷಣೆಗೂ ಸಹಾಬಗಳ ಗೌರವಾದರವನ್ನು ಕಾಪಾಡುವುದಕ್ಕೂ ಬೇಕಾಗಿ 1953ರಲ್ಲಿ ಮಾಡಿದಂತೆ ಒಗ್ಗಟ್ಟಾಗಿರಿ ಎಂದು ವಿನಂತಿಸಿಕೊಳ್ಳುತ್ತೇವೆ. ಅಲ್ಲವಾದರೆ ಇಕ್ಬಾಲ್ ಹೇಳಿ ದಂತೆ ನಾವು ಸಹ

"ತುಮಾರಿ ದಾಸ್ತಾನ್ ತಕ್ ಭೀ
ನಹೋಗೀ ದಾಸ್ತಾನೋಂಮೆ"

(ಇತಿಹಾಸ ಗ್ರಂಥಗಳಲ್ಲಿ ನಿಮ್ಮ ಚರಿತ್ರೆ ಕೂಡ ಬಾಕಿ ಯಾಗಲಾರದು) ಎಂದು ಹೇಳಬೇಕಾದೀತು.

"ಈ ಲೇಖನವನ್ನು ಮುಕ್ತಾಯಗೊಳಿಸುವುದ ಕ್ಕಿಂತ ಮುಂಚೆ ಆಗಸ್ಟ್ 25ರ 'ಜಂಗ್' ಪತ್ರಿಕೆಯಲ್ಲಿ ಪ್ರಕಟವಾದ ವಾರ್ತೆಯನ್ನು ಸಹ ಇಲ್ಲಿ ಉದ್ಧರಿಸುವುದು ಉಚಿತವೆಂದು ಭಾವಿಸುತ್ತೇನೆ. ಸಮಾಜದ ಮೇಲೆ ಪ್ರೀತಿಯೂ ಸಮಾಜದ ಬಗ್ಗೆ ಸಹಾನುಭೂತಿಯೂ ಇರು ವವರು ಈ ವಾರ್ತೆಯನ್ನು ಓದಿ ಸರಿಯಾದ ವಿವೇಚನೆ ಮತ್ತು ಆತ್ಮಶೋಧನೆ ಮಾಡಿಕೊಳ್ಳಲಿ.

"ಮಿರ್ಝಾ ತಾಹಿರ್ ಅಹ್ಮದ್‌ರವರ ಖುತ್ಬ 4 ಭೂಖಂಡಗಳಲ್ಲಿ ಪ್ರಸಾರಗೊಳಿಸಲ್ಪಟ್ಟಿತು ಎಂಬ ಶೀರ್ಷಿ ಕೆಯಡಿಯಲ್ಲಿ ಪ್ರಕಟಗೊಂಡ ವಾರ್ತೆ ಈ ರೀತಿ ಯಾಗಿತ್ತು:

"ರಬ್‌ವ – ಅಹ್ಮದಿಯಾ ಜಮಾಅತಿನ ನೇತಾರ ಮಿರ್ಝಾ ತಾಹಿರ್ ಅಹ್ಮದ್ ಹೀಗೆ ಹೇಳಿದರು: ಜಗತ್ತಿ ನಲ್ಲಿ ಗೋಚರಿಸಲ್ಪಡುವ ಕೆಡುಕುಗಳಲ್ಲಿ ಅತಿ ದೊಡ್ಡದು

ಅಸತ್ಯವಾಗಿದೆ. ದುರೂಹೆ ಸಹ ಸುಳ್ಳೇ ಆಗಿದೆ. ಜಗತ್ತಿನಲ್ಲಿ ಕಾಣಲ್ಪಡುವ ಹೆಚ್ಚಿನ ಕಲಹಗಳು ದುರೂಹೆ ಕಾರಣದಿಂದ ಸಂಭವಿಸುತ್ತವೆ. ಸುಳ್ಳು 'ರಿಸ್ಕ'ನ್ನು (ಜೀವನಾಧಾರವನ್ನು) ಕಬಳಿಸಿ ಬಿಡುತ್ತದೆ. ಸುಳ್ಳನ್ನು ಕೈವಶ ಮಾಡಿಕೊಂಡಿರುವ ಸಮುದಾಯಗಳ ರಿಸ್ಕ್ ಅಪಹರಿಸಲ್ಪಡುತ್ತದೆ. ಇದರಲ್ಲಿ ಧರ್ಮ ವಿಶ್ವಾಸಿಗಳೆಂದಾಗಲಿ ಧರ್ಮ ರಹಿತರೆಂದಾಗಲಿ ವ್ಯತ್ಯಾಸವೇನೂ ಇಲ್ಲ. ಸತ್ಯದಲ್ಲಿ ನಡೆಯುವ ಸಮುದಾಯಗಳ ರಿಸ್ಕಿನಲ್ಲಿ ಅನುಗ್ರಹ ಉಂಟಾಗುತ್ತದೆ. ಮುಸ್ಲಿಂ ಲೋಕವನ್ನು ಸ್ಮರಿಸುತ್ತಾ ಇಸ್ಲಾಮಿಕ ರಾಷ್ಟ್ರಗಳು ಪರಸ್ಪರ ಸ್ನೇಹಾದರದಿಂದಲೂ ಸೌಹಾರ್ದದಿಂದಲೂ ವರ್ತಿಸಬೇಕಾದ ಆವಶ್ಯಕತೆಯನ್ನು ಅವರು ಒತ್ತಿ ಹೇಳಿದರು.

"ಅವರ ಈ ಖುತ್ಬ ಉಪಗ್ರಹ ಮೂಲಕ ಜಗತ್ತಿನ 4 ಭೂಖಂಡಗಳಲ್ಲಿ ಟೆಲಿವಿಶನಿನಲ್ಲಿ ಗೋಚರಿಸಲ್ಪಟ್ಟಿತು ಹಾಗೂ ಶ್ರವಿಸಲ್ಪಟ್ಟಿತು. ಈ ನಾಲ್ಕು ಭೂಖಂಡಗಳು ಆಸ್ಟ್ರೇಲಿಯಾ, ಏಷ್ಯಾ, ಯುರೋಪ್, ಆಫ್ರಿಕ ಎಂಬಿವುಗಳಾಗಿವೆ. ಶೀಘ್ರವೇ ಅವರ ಖುತ್ಬಗಳು ಅಮೇರಿಕದಲ್ಲೂ ಕೆನಡಾದಲ್ಲೂ ಅದೇ ರೀತಿಯಲ್ಲಿ ಉಪಗ್ರಹ ಮೂಲಕ 'ಡಿಶ್ ಆಂಟೆನಾ'ದ ನೆರವಿನಿಂದ ಗೋಚರಿಸಲ್ಪಡುವುದು ಹಾಗೂ ಶ್ರವಿಸಲ್ಪಡುವುದು."

('ಅಹ್ಲೆ ಹದೀಸ್' ವಾರಪತ್ರಿಕೆ, ಲಾಹೋರ್ 11-9-1992).

ಪಾಕಿಸ್ಥಾನದ ಅಹ್ಲೆ ಹದೀಸ್ ಸಂಘಟನೆಯ ಮುಖವಾಣಿಯಾದ 'ಅಹ್ಲೆ ಹದೀಸ್' ವಾರ ಪತ್ರಿಕೆಯ, ಮೇಲೆ ಉದ್ಧರಿಸಿದ ಹೇಳಿಕೆಯ ಭಯಾಶಂಕೆಗಳ ಕುರಿತು ವಿವೇಚಿಸುವುದಕ್ಕೆ ಬದಲು ಹಜ್ರತ್ ಖಲೀಫರ ಒಂದು ಹೇಳಿಕೆಯನ್ನು ಇಲ್ಲಿ ಉದ್ಧರಿಸುವುದು ಉಚಿತವೆಂದು ನಾನು ಭಾವಿಸುತ್ತೇನೆ:

"ನಾನು ಪಾಕಿಸ್ಥಾನದ ಮೌಲ್ವಿಗಳೊಡನೆ, ನೀವು ಅಹ್ಮದಿಯತಿನ ವಿಜಯ ಪಥದಲ್ಲಿ ತಡೆಯೊಡ್ಡಬಾರದೆಂದೂ ಅದು ನಿಮಗೆಯೇ ಹಾನಿಕರವಾಗುವುದೆಂದೂ ಹೇಳಿದ್ದೆ. ನೀವು ಒಂದು ದಾರಿಯನ್ನು ಮುಚ್ಚಿದರೆ ಅಲ್ಲಾಹನು ದಶವಿಧ ಬೇರೆ ದಾರಿಗಳನ್ನು ತೆರೆದು ಕೊಡುವನು. ನೀವು ಭೌತಿಕ ದಾರಿಗಳನ್ನು ಮುಚ್ಚಿದರೆ ಜಗತ್ತಿನಲ್ಲಿರುವ ಯಾವ ಶಕ್ತಿಗೂ ತಡೆಯಲು ಅಸಾಧ್ಯವಾದ ರೀತಿಯಲ್ಲಿ ಅಲ್ಲಾಹನ ಅನುಗ್ರಹಗಳು ಆಕಾಶದಿಂದ ವರ್ಷಿಸುವುವು..... ನಾನು ಹೀಗೆ ಅವರೊಡನೆ ಹೇಳಿದ್ದು ನನಗೆ ಈಗಲೂ ನೆನಪಿದೆ. ಅಂದರೆ, ಆಕಾಶದಿಂದ ಅಹ್ಮದಿಯಾ ಜಮಾಅತಿನ ಮೇಲೆ ಅನುಗ್ರಹಗಳ ಮಳೆ ಸುರಿಯುವಾಗ ನಿಮ್ಮ ಛತ್ರಿಗಳಿಂದಲೂ ಛಾವಣಿಗಳಿಂದಲೂ ಆ ಮಳೆಯನ್ನು ತಡೆದು ನಿಲ್ಲಿಸಲು ನಿಮಗೆ ಸಾಧ್ಯವೇ?. ಇಂದು ದಿಗಂತದಲ್ಲಿ ಹರಡಿಕೊಂಡಿರುವ ದೇವಾನುಗ್ರಹಗಳ ಮೇಘಗಳನ್ನು, ಹೌದು ಇಂದು 4 ಭೂಖಂಡಗಳಲ್ಲಿ ಹರಡಿಕೊಂಡಿರುವ ದೈವಿಕ ಕಾರುಣ್ಯದ ಮೇಘಗಳನ್ನು, ಜಗತ್ತಿನೆಲ್ಲೆಡೆ ಸುರಿಯುತ್ತಿರುವ ಅನುಗ್ರಹಗಳ ಮಳೆಯನ್ನು ತಡೆದು ನಿಲ್ಲಿಸಲು, ಅವುಗಳ ದಾರಿಗಳನ್ನು ತಡೆಯಲು ಯಾವ ಮೌಲ್ವಿಗೆ ಸಾಧ್ಯವಿದೆ? ಯಾವ ಕೊಡೆ ಹಿಡಿದುಕೊಂಡು ಈ ಮೌಲ್ವಿಗಳು ದೈವಿಕ ಅನುಗ್ರಹಗಳು ಭೂಮಿಗೆ ಇಳಿಯುವುದನ್ನು ತಡೆದು ನಿಲ್ಲಿಸುವರು? ...... ನಿಮ್ಮ ಎಲ್ಲ ಶಕ್ತಿಗಳನ್ನು ಪ್ರಯೋಗಿಸಿ ಈ ದೈವಿಕಾನುಗ್ರಹಗಳನ್ನು ತಡೆಯಲು ಪ್ರಯತ್ನಿಸಿರಿ. ಪವಿತ್ರ ಖುರ್‌ಆನ್ ಶೈತಾನನಿಗೆ ಪಂಥಾಹ್ವಾನ ನೀಡಿದ ಪ್ರಕಾರ ನಿಮ್ಮ ಕುದುರೆ ಪಡೆಗಳನ್ನು ಓಡಿಸಿರಿ. ಆದರೆ ನಿಮಗೆಂದೂ ದೇವದಾಸರ ವಿಜಯ ಪಥದಲ್ಲಿ ಯಾವ ತಡೆಯೊಡ್ಡಲಿಕ್ಕೂ ಸಾಧ್ಯವಾಗದು. ನಾವು ಅಲ್ಲಾಹನ ಭಕ್ತದಾಸರು. ನಮ್ಮನ್ನು ಸೋಲಿಸಲು ನಿಮ್ಮಿಂದ ಸಾಧ್ಯವಿಲ್ಲ. ನಿಮ್ಮ ಎಲ್ಲ ಶಕ್ತಿಗಳನ್ನೂ ಒಟ್ಟಿಗೆ ಪ್ರಯೋಗಿಸಿದರೂ ಅಲ್ಲಾಹನ ಪವಿತ್ರ ನಾಮದಲ್ಲಿ ನಾನು ಆಣೆ ಹಾಕಿ ಹೇಳುತ್ತೇನೆ–ನಿಮಗೆ ಎಂದಿಗೂ ಜಯಗಳಿಸಲಿಕ್ಕೆ ಸಾಧ್ಯವಿಲ್ಲ."

(ಖುತ್ಬ: 21-8-1992)

* * * * * *

# ಉತ್ತರ ಭೂಶಿರದಲ್ಲಿ ಪ್ರಥಮ ಜುಮುಅ

★ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್
ಅಹ್ಮದಿಯಾ ಜಮಾಅತಿನ ಚತುರ್ಥ ಖಲೀಫ

ಉತ್ತರ ಧ್ರುವ ವೃತ್ತಕ್ಕೆ ಸೇರಿದ, ನೋರ್ವೆಯ ಅತಿ ಉತ್ತರದ ನೋರ್ತ್ ಕೇಪ್ (North Cape)ನಲ್ಲಿ ಅಹ್ಮದಿಯಾ ಜಮಾಅತಿನ ಚತುರ್ಥ ಖಲೀಫ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್‌ರವರು 25–6–1993ರಂದು ಮಾಡಿದ ಜುಮುಅ ಖುತ್ಬದ ಇದು ಅನುವಾದವಾಗಿದೆ. ನೋರ್ವೆಯ ರಾಜಧಾನಿ ಓಸ್ಲೋದಿಂದ 2500 ಕಿಲೋ ಮೀಟರ್ ಉತ್ತರಕ್ಕೆ ಮತ್ತು ಉತ್ತರ ಧ್ರುವದಿಂದ 2100 ಕಿಲೋ ಮೀಟರ್ ದಕ್ಷಿಣಕ್ಕೆ ಇರುವ ಈ ಪ್ರದೇಶದಲ್ಲಿ ಈಗ 3 ತಿಂಗಳ ಕಾಲ ಹಗಲು. 3 ಮಾಸ ಕಾಲ ಸೂರ್ಯನು ಇಲ್ಲಿ ಅಸ್ತಮಿಸುವುದಿಲ್ಲ. ಆ ಬಳಿಕ ಇಲ್ಲಿ ಕಠಿಣ ಚಳಿಯಿಂದ ಕೂಡಿದ 3 ಮಾಸ ದೀರ್ಘವ ರಾತ್ರಿ ಬರುತ್ತದೆ. ಉತ್ತರ ಭೂಶಿರ (ನೋರ್ತ್ ಕೇಪ್) ಯುರೋಪಿನ ಅತಿ ಉತ್ತರ ಕೊನೆಯಲ್ಲಿದ್ದು, ಉತ್ತರ ಧ್ರುವ ಸಾಗರ ವಲಯದಲ್ಲಿದೆ.

"ಮೈ ತೇರಿ ತಬ್ಲೀಗ್ ಕೊ ಜಮೀನ್ ಕೆ ಕಿನಾರೋಂತಕ್ ಪಹುಂಚಾಊಂಗಾ" (ನಾನು ನಿನ್ನ ಸಂದೇಶವನ್ನು ಭೂಮಿಯ ಎಲ್ಲೆಗಳ ವರೆಗೂ ತಲಪಿಸುವೆನು) ಎಂದು ಹಝ್ರತ್ ಅಹ್ಮದ್‌ರವರಿಗೆ ಅರುಹಿಸಲ್ಪಟ್ಟ ದೈವಿಕ ಪ್ರಕಟನೆ ಇಲ್ಲಿ ಈಡೇರಿದ್ದು ಸಹ ಗಮನಾರ್ಹವಾಗಿದೆ.

ಇಂದಿನ ಈ ಜುಮುಅ ನಮಗೆ ಸಂಬಂಧಿಸಿದಂತೆ ಅಸಾಮಾನ್ಯವೂ ಐತಿಹಾಸಿಕವೂ ಆಗಿದೆ. ಕಾರಣವೇನೆಂದರೆ, ಇಂದಿನ ಜುಮುಅ ನಿರ್ವಹಿಸುವುದರೊಂದಿಗೆ ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರವರ ಒಂದು ಭವಿಷ್ಯೋಕ್ತಿ ನೆನಪಿಗೆ ಬರುತ್ತದೆ.

ಹಝ್ರತ್ ಪೈಗಂಬರ್ (ಸ)ರವರು ದಜ್ಜಾಲ್ ಕುರಿತು ಭವಿಷ್ಯ ನುಡಿಯುತ್ತಾ, ದಜ್ಜಾಲ್‌ನ ಕಾಲದಲ್ಲಿ ಕೆಲವು ಹಗಲುಗಳು ಒಂದು ವರ್ಷ ಕಾಲ, ಕೆಲವು 6 ಮಾಸ ಕಾಲ, ಕೆಲವು 3 ಮಾಸ ಕಾಲ ದೀರ್ಘವುಳ್ಳದ್ದು ಆಗಿರಬಹುದೆಂದೂ ಕೆಲವು ಎರಡು ವಾರ, ಕೆಲವು ಒಂದು ವಾರ, ಬಾಕಿ ದಿನಗಳು 24 ಗಂಟೆ ದೀರ್ಘವಾದುದೂ ಆಗಿರಬಹುದೆಂದೂ ನುಡಿದಿರುವರು.

## ನಮಾಝ್ ಸಮಯವನ್ನು ಗಣಿಸಿ ನಿರ್ಣಯಿಸಬೇಕು

ಇದು ಅತಿ ಮಹತ್ವದ ಒಂದು ಭವಿಷ್ಯ ನುಡಿಯಾಗಿದೆ. ಒಂದು ದಿನ 24 ಗಂಟೆಗಳಿಗಿಂತ ದೀರ್ಘವುಳ್ಳದ್ದಾಗಿ ಮನಗಾಣಲು ಸಾಧ್ಯವಾಗುವ ಯಾವುದೇ ಪ್ರಸ್ತಾಪನೆಯನ್ನು ನಮಗೆ ಇತರ ಧರ್ಮಗ್ರಂಥಗಳಲ್ಲಿ ಕಾಣಲಸದಳ. 1400 ವರ್ಷಗಳಿಗೆ ಮುಂಚೆ ಇಂತಹ ಒಂದು ಕಲ್ಪನೆಗೆ ಎಡೆ ಇರಲಿಲ್ಲ. 24 ಗಂಟೆಗಳಿಗಿಂತ ಹೆಚ್ಚು, 3 ಮಾಸ ಮತ್ತು 6 ಮಾಸ ದೀರ್ಘವಾದ ಒಂದು ಹಗಲಿನ ಬಗ್ಗೆ ಯಾರಿಗೂ ಊಹಿಸಲು ಕೂಡ ಸಾಧ್ಯವಿರಲಿಲ್ಲ, ಆ ಸಂದರ್ಭದಲ್ಲಿ ಅಲ್ಲಾಹನು ಹಝ್ರತ್ ಮುಹಮ್ಮದ್ ಪೈಗಂಬರ್‌ರಿಗೆ ತಿಳಿಸಿದನುಸಾರ ಇಂತಹ ದೀರ್ಘವಿರುವ ಹಗಲು ಮತ್ತು ರಾತ್ರಿಯ ಬಗ್ಗೆ ಅವರು ಭವಿಷ್ಯ ನುಡಿದರು.

ಒಂದು ದೀರ್ಘ ಕಾಲದ ವರೆಗೆ ಈ ಭವಿಷ್ಯೋಕ್ತಿ ಮುಸ್ಲಿಂ ಚಿಂತಕರಿಗೂ ಧರ್ಮ ಪಂಡಿತರಿಗೂ ಸಂದೇಹಾಸ್ಪದವಾದುದಾಗಿತ್ತು. ಇದು ಹೇಗೆ ಘಟಿಸಬಹುದೆಂದು ಅವರಿಗೆ ಮನಗಾಣಲು ಸಾಧ್ಯವಾಗಲಿಲ್ಲ. ಆದರೆ ಈ ಅಂತ್ಯ ಕಾಲದಲ್ಲಿ ದಜ್ಜಾಲ್‌ನ ಆವಿರ್ಭಾವ ಉಂಟಾದಾಗ. ಅಂದರೆ ಪಾಶ್ಚಾತ್ಯ ಕ್ರೈಸ್ತ ಸಮುದಾಯಗಳು ಪ್ರಗತಿ ಹೊಂದಿ ಕ್ರೈಸ್ತ ಧರ್ಮ ಜಗತ್ತಿನಲ್ಲಿ ಆಧಿಪತ್ಯವನ್ನು ಗಳಿಸಿದಾಗ ಉತ್ತರ, ದಕ್ಷಿಣ ಧ್ರುವಗಳ ಬಗ್ಗೆ ನಮಗೆ ತಿಳಿಯುವಂತಾಯಿತು. ಉತ್ತರ ಧ್ರುವದಲ್ಲಿ 6 ತಿಂಗಳು ರಾತ್ರಿ ಮತ್ತು 6 ತಿಂಗಳು ಹಗಲು ಇರುತ್ತದೆ. ಅಂದರೆ ಅಲ್ಲಿ 6 ಮಾಸ ಕಾಲ ಬೆಳಕು ಮತ್ತು 6 ಮಾಸ ಕಾಲ ಕತ್ತಲೆ ಇರುತ್ತದೆ. ಹಾಗೆ ಎರಡೂ ಸೇರಿ ಒಂದು ವರ್ಷವಾಗುತ್ತದೆ. ಈ ಪ್ರಕಾರ ದಜ್ಜಾಲ್‌ನ ಆವಿರ್ಭಾವ ಮೂಲಕ ಕಂಡು ಹಿಡಿಯಲ್ಪಟ್ಟ ಈ ಆರು ಮಾಸದ ಹಗಲು–ರಾತ್ರಿಗಳು ಹಝ್ರತ್ ಮುಹಮ್ಮದ್ ಪೈಗಂಬರರ ಪ್ರಸ್ತುತ ಭವಿಷ್ಯ ನುಡಿಯ ಈಡೇರಿಕೆಯಾಗಿದೆ ಎಂದು ನಮಗೆ ಮನದಟ್ಟಾಗುತ್ತದೆ.

ಪೈಗಂಬರರು ಅದ್ಭುತಕರವಾದ ಈ ಭವಿಷ್ಯೋಕ್ತಿಯನ್ನು ನುಡಿದಾಗ ಓರ್ವ ಸಹಾಬಿ "ಪ್ರವಾದಿಯವರೆ, ಆ ಸಂದರ್ಭದಲ್ಲಿ 6 ಮಾಸ ಹಗಲಿನಲ್ಲಿ ಐದು ಹೊತ್ತಿನ ನಮಾಝ್ ಮಾತ್ರ ಅನುಷ್ಠಿಸಿದರೆ ಸಾಕೋ?'' ಎಂದು ಕೇಳಿದರು. ಅದಕ್ಕೆ ಉತ್ತರವಾಗಿ ಪೈಗಂಬರರು, ನಮಾಝ್ ಅನುಷ್ಠಾನದಲ್ಲಿ ಯಾವುದೇ ಬದಲಾವಣೆ ಇರಲಾರದೆಂದೂ ನೀವು ಐದು ಹೊತ್ತು ಸಹ ಅವರ ಸಮಯವನ್ನು ಅಂದಾಜುಮಾಡಿ ಅನುಷ್ಠಿಸಬೇಕೆಂದೂ ಹೇಳಿದರು. ಪ್ರತಿ 24 ಗಂಟೆಗಳಲ್ಲೂ ನಾವು ಇಲ್ಲಿ ಸಮಯ ನಿರ್ಣಯಿಸಿ ರಾತ್ರಿ ಹಗಲು ಐದು ಹೊತ್ತುಗಳಲ್ಲಿ ನಮಾಝ್ ಅನುಷ್ಠಿಸುವ ರೀತಿಯಲ್ಲಿ ನಮಾಝ್ ಮಾಡಬೇಕೆಂದು ಅವರು ನಿರ್ದೇಶಿಸಿದರು.

ಈಗ ನಾವು ಇಂತಹ ಆರು ಮಾಸ ಹಗಲು, ಆರು ಮಾಸ ರಾತ್ರಿ ಇರುವ ಒಂದು ಪ್ರದೇಶಕ್ಕೆ ಬಂದಿದ್ದೇವೆ. ಅಲ್ಲಾಹನ ಅನುಗ್ರಹದಿಂದ ಪ್ರಸ್ತುತ ಭವಿಷ್ಯ ನುಡಿಯ ನಿರ್ದೇಶವನ್ನು ನಾವು ಇಂದು ಈಡೇರಿಸುತ್ತಿದ್ದೇವೆ.

## ಮೊತ್ತ ಮೊದಲಿನ ಜುಮುಅ ಮತ್ತು ಖುತ್ಬ

ಇದಕ್ಕಿಂತ ಮುಂಚೆ ಇಂತಹ ಪ್ರದೇಶಕ್ಕೆ ಬಂದು ಯಾರೂ ನಮಾಝ್ ನಿರ್ವಹಿಸಿರಲಿಲ್ಲ ಎಂದಲ್ಲ ನಾನು ಹೇಳಿದುದರ ತಾತ್ಪರ್ಯ. ಉತ್ತರ ಧ್ರುವ ವೃತ್ತದಲ್ಲಿ ಬರುವ ಅಲಾಸ್ಕಾದ ಉತ್ತರಕ್ಕೆ ಕೆಲವು ಅಹ್ಮದಿಯರು ಹೋಗಿದ್ದರೆಂದು ನನಗೆ ಗೊತ್ತಿದೆ. ಅವರು ಅಲ್ಲಿ ದಿನದ ಐದು ಹೊತ್ತಿನ ನಮಾಝ್ ನಿರ್ವಹಿಸಿದ್ದಾರೆ. ಆದ್ದರಿಂದ ಪ್ರಸ್ತುತ ಭವಿಷ್ಯವಾಣಿ ಈ ದಿನ ಈಡೇರಿತೆಂದು ನಾನು ಹೇಳುವುದಿಲ್ಲ. ಆದರೆ ಇದಕ್ಕಿಂತ ಮುಂಚೆ 6 ಮಾಸ ಹಗಲು, 6 ಮಾಸ ರಾತ್ರಿ ಇರುವ ಇಂತಹ ಪ್ರದೇಶದಲ್ಲಿ ಐದು ಹೊತ್ತಿನ ನಮಾಝ್ ಇಮಾಂ ಜಮಾಅತಾಗಿ (ಸಾಮೂಹಿಕವಾಗಿ) ನಿರ್ವಹಿಸಿದ್ದು ಹಾಗೂ ಖುತ್ಬ ಮತ್ತು ಜುಮುಅ ನಡೆಸಿದ್ದು ಇದು ಮೊತ್ತ ಮೊದಲಿನ ಸಲವಾಗಿದೆ. ಸಮಾಜದ ನಾಲ್ಕು ವರ್ಗದವರು ಸಹ ಇದರಲ್ಲಿ ಪಾಲುಗೊಂಡಿದ್ದಾರೆ. ಅಂದರೆ ಅನ್ಸಾರ್, ಖುದ್ದಾಮ್, ಅತ್ಫಾಲ್ ಎಂಬೀ ಪ್ರಾಯ ಮಿತಿಯಲ್ಲಿ ಸೇರಿದವರೂ ಸ್ತ್ರೀಯರೂ ಇಲ್ಲಿ ನಮ್ಮೊಂದಿಗಿದ್ದಾರೆ. ನಾವು ನಿನ್ನೆಯಿಂದ ಇಲ್ಲಿ ಜಮಾಅತಾಗಿ ನಮಾಝ್ ನಿರ್ವಹಿಸಲು ಪ್ರಾರಂಭಿಸಿದ್ದೇವೆ. ಈಗ ನಾವು ಜುಮುಅ ನಮಾಝ್ ನಿರ್ವಹಿಸಲಿದ್ದೇವೆ. ಈ ಪ್ರದೇಶದಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ರವರ ಭವಿಷ್ಯೋಕ್ತಿ ಪ್ರಕಾರದ ಮೊತ್ತಮೊದಲಿನ ಜುಮುಅ ನಿರ್ವಹಿಸುವುದು ಐತಿಹಾಸಿಕ ಪ್ರಾಧಾನ್ಯವುಳ್ಳದ್ದಾಗಿದೆ.

ಇಂದು ನಾವು ಒಂದು ಚರಿತ್ರೆಯನ್ನು ಸೃಷ್ಟಿಸುತ್ತಿದ್ದೇವೆ. ಈ ಚರಿತ್ರೆಗೆ ಭೂನಿವಾಸಿಗಳ ದೃಷ್ಟಿಯಲ್ಲಿ ಯಾವ ಮಹತ್ವವೂ ಇಲ್ಲದಿದ್ದರೆ ಕೂಡ ಕೆಲವು ಚರಿತ್ರೆಗಳು ಭೂಮಿಯಲ್ಲಲ್ಲ ಆಕಾಶದಲ್ಲಿ ದಾಖಲಿಸಲ್ಪಡುತ್ತವೆಯೆಂಬ ವಾಸ್ತವಾಂಶವನ್ನು ನಾನು ನಿಮಗೆ ತಿಳಿಸುತ್ತೇನೆ. ಹೀಗೆ ಆಕಾಶದಲ್ಲಿ ದಾಖಲಿಸಲ್ಪಡುವ ಚರಿತ್ರೆಗಳು ದೊಡ್ಡ ದೊಡ್ಡ ಪ್ರವಾದಿಗಳದ್ದಾಗಿವೆ. ಹಝ್ರತ್ ಮೂಸಾ(ಅ)ರ ಕಾಲದಲ್ಲಿ ಭೂಮಿಯಲ್ಲಿ ರಚಿಸಲ್ಪಟ್ಟ ಚರಿತ್ರೆಯಲ್ಲಿ ನಿಮಗೆ ಮೂಸಾ(ಅ)ರ ಹೆಸರನ್ನು ಎಲ್ಲಿಯೂ ಕಾಣಲು ಅಸಾಧ್ಯ. ಹಝ್ರತ್ ಈಸಾ (ಅ) ಸಹ ಒಂದು ಚರಿತ್ರೆ ಸೃಷ್ಟಿಸಿದ್ದಾರೆ. ಆದರೆ ಅವರ

ಕಾಲದಲ್ಲಿ ಭೌಮಿಕ ರಾಜರುಗಳಿಂದ ರಚಿಸಲ್ಪಟ್ಟ ಚರಿತ್ರೆಯಲ್ಲಿ ಈಸಾ(ಅ)ರವರ ಹೆಸರಾಗಲಿ ಅವರ ಬಗ್ಗೆ ಯಾವ ಸೂಚನೆಯಾಗಲಿ ನಿಮಗೆ ಸಿಗಲಾರದು. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಇಡೀ ಜಗತ್ತಿಗೇ ಇರುವ ಒಂದು ಚರಿತ್ರೆಯನ್ನು ಸೃಷ್ಟಿಸಿದರು. ಅವರು ಸಕಲ ಮಾನವೀಯತೆಯ ಚರಿತ್ರೆಯನ್ನು ರೂಪಿಸಿದರು. ಆದರೆ ಆ ಕಾಲದ ರಾಜರುಗಳ ಚರಿತ್ರೆ ಗ್ರಂಥಗಳಲ್ಲಿ ಆ ಬಗ್ಗೆ ಉಲ್ಲೇಖಿಸವಿಲ್ಲ.

## ಪ್ರವಾದಿಗಳ ಚರಿತ್ರೆಗಳು ಆಕಾಶದಲ್ಲಿ

ಪ್ರವಾದಿಗಳ ಚರಿತ್ರೆಗಳು ಆಕಾಶದಲ್ಲಿ ದಾಖಲಿಸಲ್ಪಡುತ್ತವೆ. ಅನಂತರ ಅವು ಭೂಮಿಗೆ ಇಳಿದು, ಭೂಮಿಯಲ್ಲಿ ರಚಿಸಲ್ಪಟ್ಟ ಚರಿತ್ರೆಗಳು ಪುನಾರಚನೆಗೊಳ್ಳುತ್ತವೆ. ಭೂಮಿಯಲ್ಲಿ ರಚಿತವಾದ ಚರಿತ್ರೆಗಳು ಕಾಲ ಕ್ರಮೇಣ ಕುಂದುತ್ತಾ ಹೋಗಿ ಇಲ್ಲದಾಗುತ್ತವೆ. ಆಕಾಶದಲ್ಲಿ ರಚಿಸಲ್ಪಟ್ಟ ಚರಿತ್ರೆಗಳು ಪ್ರಕಾಶಪೂರ್ಣವಾಗುತ್ತವೆ. ನೋಡಿರಿ, ಹಝ್ರತ್ ಮೂಸಾ(ಅ)ರ ಚರಿತ್ರೆ ಎಲ್ಲ ಫಿರ್‌ಔನ್‌ಗಳ ಚರಿತ್ರೆಯ ಮೇಲೆ ವಿಜಯ ಸಾಧಿಸಲಿಲ್ಲವೇ?

ನೀವು ಹಝ್ರತ್ ಈಸಾ(ಅ)ರವರ ಕಾಲದ ಕಡೆಗೆ ನೋಡಿರಿ. ಅವರ ಬಳಿಕ 34 ವರ್ಷಗಳ ಕಾಲ ಅವರ ಕುರಿತಾಗಲಿ ಕ್ರೈಸ್ತ ಧರ್ಮದ ಕುರಿತಾಗಲಿ ಯಾವ ಚರಿತ್ರೆ ಗ್ರಂಥದಲ್ಲಾಗಲಿ ಯಾವುದೇ ಪ್ರಸ್ತಾಪ ಬರುವುದಿಲ್ಲ. ಆದರೆ ಹಝ್ರತ್ ಈಸಾ(ಅ) ಮೂಲಕ ರೂಪಿಸಲ್ಪಟ್ಟ ಚರಿತ್ರೆ ಆಕಾಶದಿಂದ ಭೂಮಿಗೆ ಇಳಿಯಬೇಕೆಂಬ ದೈವಿಕ ನಿಶ್ಚಯದಂತೆ ಅವರ ಮತ್ತು ಕ್ರೈಸ್ತ ಧರ್ಮದ ಚರಿತ್ರೆ ಲೋಕದಲ್ಲೆಲ್ಲ ವ್ಯಾಪಿಸಿತು.

ಬೇರೊಂದು ಚರಿತ್ರೆಯ ಆರಂಭ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಮೂಲಕ ಆಯಿತು. ಆ ಚರಿತ್ರೆಯ ಬಗ್ಗೆ "ಲಿಯುಳ್‌ಹಿರಹು ಅಲದ್ದೀನಿ ಕುಲ್ಲಿಹೀ" (ಎಲ್ಲ ಧರ್ಮಗಳ ಮೇಲೆ ಅದಕ್ಕೆ ಸ್ಪಷ್ಟವಾದ ಜಯ ಪ್ರಾಪ್ತಿಯಾಗುವುದು) ಎಂದು ಅಲ್ಲಾಹನು ವಾಗ್ದಾನಮಾಡಿದ್ದಾನೆ. ಈ ಚರಿತ್ರೆಯೇ ಎಂದೆಂದಿಗೂ ಬಾಕಿಯುಳಿಯುವುದು. ಈ ಚರಿತ್ರೆಯೇ ಗೌರವಾದರಗಳಿಂದ ಸ್ಮರಿಸಲ್ಪಡುವಂಥದ್ದು. ಈ ಚರಿತ್ರೆ ಇತಿಹಾಸಗಾರರ ದೃಷ್ಟಿಯಲ್ಲಿ ಅಪ್ರಾಧಾನ್ಯವಾದುದಾಗಿರಬಹುದು. ಆದರೆ ಆಕಾಶದಲ್ಲಿ ದಾಖಲಿಸಲ್ಪಟ್ಟ ಈ ಚರಿತ್ರೆಗೆ ಚಿರಸ್ಥಾಯಿತ್ವ ಲಭಿಸುವುದು.

ಅದೇ ಪ್ರಕಾರ ಐತಿಹಾಸಿಕ ಮಹತ್ವವಿರುವ ಇಂದಿನ ಈ ಜುಮುಅಕ್ಕೆ ಭೌಮಿಕ ದೃಷ್ಟಿಯಲ್ಲಿ ಯಾವ ಪ್ರಾಧಾನ್ಯವೂ ಇಲ್ಲವಾದರೂ ಆಕಾಶದಲ್ಲಿ ಬರೆಯಲ್ಪಟ್ಟ ಈ ಚರಿತ್ರೆ ಖಂಡಿತವಾಗಿಯೂ ಭೂಮಿಗೆ ಇಳಿಯುವುದು. ನೋರ್ವೆಯ ಜನರು ಮಾತ್ರವಲ್ಲ, ಜಗತ್ತಿನಲ್ಲಿರುವ ಇತರ ಜನಾಂಗಗಳು ಸಹ ಮುಹಮ್ಮದ್ ಪೈಗಂಬರರ ಭವಿಷ್ಯೋಕ್ತಿಯ ಈಡೇರಿಕೆಯನ್ನು ಸೂಚಿಸುವ ಇಂದಿನ ಈ ಜುಮುಅಕ್ಕೆ ಐತಿಹಾಸಿಕ ಮಹತ್ವವನ್ನು ನೀಡುವರು. ಈ ದಿನ ಅಲ್ಲಾಹನ ಮತ್ತು ಅವನ ಪೈಗಂಬರರ ಮಹತ್ವವನ್ನು ಕೊಂಡಾಡಲಿಕ್ಕಾಗಿ ನಾವು ಇಲ್ಲಿ ಸಮ್ಮೇಳಿಸಿದ್ದೇವೆ. ಈ ಚರಿತ್ರೆ ಆಕಾಶದಲ್ಲಿ ಬರೆಯಲ್ಪಡುತ್ತದೆ. ಈ ಚರಿತ್ರೆ ಇಂದು ಅಲ್ಲವಾದರೆ ನಾಳೆ ಭೂಮಿಗೆ ಇಳಿಯುವುದು.

## ಆದರಣೀಯ ಚರಿತ್ರೆಗಳು

ಸಂಕ್ಷಿಪ್ತವಾಗಿ, ಯಥಾರ್ಥ ಹಾಗೂ ಎಂದೆಂದಿಗೂ ಬಾಕಿಯುಳಿಯುವ ಚರಿತ್ರೆ ಅಲ್ಲಾಹನೊಂದಿಗೆ ಮತ್ತು ದೈವಿಕ ವಚನಗಳೊಂದಿಗೆ ಸಂಬಂಧವುಳ್ಳದ್ದಾಗಿದೆ. ಜಗತ್ತಿನಲ್ಲಿ ದೊಡ್ಡ ದೊಡ್ಡ ರಾಜರುಗಳೂ ಚಕ್ರವರ್ತಿಗಳೂ ಬರುತ್ತಲೂ ಹೋಗುತ್ತಲೂ ಇರುತ್ತಾರೆ. ಅವರಲ್ಲಿ ಹೆಚ್ಚಿನವರ ಹೆಸರುಗಳನ್ನು ಜನರು ತಿರಸ್ಕಾರದಿಂದ ಕಾಣುತ್ತಾರೆ. ಆದರೆ ಆಕಾಶದಿಂದ ಇಳಿಸಲ್ಪಡುವ ಚರಿತ್ರೆಗೆ ಸಂಬಂಧಿಸಿದವರನ್ನು ಜನರು ಸ್ನೇಹಾದರದಿಂದ ಸ್ಮರಿಸುತ್ತಾರೆ. ಪವಿತ್ರ ಖುರ್‌ಆನನ್ನು ನೋಡಿರಿ. ಹಝ್ರತ್ ಇಬ್ರಾಹೀಂ(ಅ) ಮತ್ತು ಇತರ ಪ್ರವಾದಿಗಳ ನಾಮಗಳು ಅತಿ ಪ್ರೀತಿ ಮತ್ತು ಗೌರವದಿಂದ ಉಲ್ಲೇಖಿಸಲ್ಪಟ್ಟಿವೆ. ಮೊದಲು ಅವರ ಜನರು ಅವರನ್ನು ನಿಂದಾದೃಷ್ಟಿಯಿಂದ ವೀಕ್ಷಿಸುತ್ತಿದ್ದರು. ಅವರ ಸಂಘಟನೆಗಳನ್ನು ಭೂಲೋಕದಿಂದ ನಿರ್ಮೂಲನಗೊಳಿಸಲು ಅವರು ಪರಿಶ್ರಮಿಸಿದ್ದರು. ಆದರೆ ಅವರೆಲ್ಲ ಈಗ ಎಲ್ಲಿದ್ದಾರೆ? ಹಝ್ರತ್ ಇಬ್ರಾಹೀಂ(ಅ)ರನ್ನು ಅಗ್ನಿಕುಂಡಕ್ಕೆ ಹಾಕಿ ನಾಶಪಡಿಸಲು ಪ್ರಯತ್ನಿಸಿದವರು ಈಗೆಲ್ಲಿ? ಅವರನ್ನೆಲ್ಲ

# ಇಮಾಂ ಮಹ್‌ದಿಯ ಕುರುಹುಗಳು

—ಮೌಲ್ವಿ ಮುಹಮ್ಮದ್ ಉಮರ್ ಎಚ್. ಎ.

1400 ವರ್ಷಗಳಿಗೆ ಮೊದಲು ಹಝ್ರತ್ ಮುಹಮ್ಮದ್ ಪೈಗಂಬರ್ (ಸ.)ರವರು ಕೊನೆಗಾಲದಲ್ಲಿ ಅವತರಿಸುವ ಇಮಾಂ ಮಹ್‌ದಿಯ ಕುರಿತು ಸ್ಪಷ್ಟವಾಗಿ ವಿವರಿಸಿರುವರು. ವಾಗ್ದಾನ ಮಾಡಲ್ಪಟ್ಟ ಆ ಮಹಾ ಸುಧಾರಕ ಅವತರಿಸುವಾಗ ಆಕಾಶ ಭೂಮಿಗಳಲ್ಲಿ ಉಂಟಾಗುವ ಮಹತ್ವದ ಕುರುಹುಗಳ ಕುರಿತೂ ಅಂದು ಲೋಕದ ರಾಜಕೀಯ, ಸಾಂಸ್ಕೃತಿಕ, ಸಾಮುದಾಯಿಕ ರಂಗಗಳಲ್ಲಿ ಉಂಟಾಗುವ ಘಟನೆಗಳ ಕುರಿತೂ ಪೈಗಂಬರರು ಭವಿಷ್ಯ ನುಡಿದಿರುವರು.

ಆಧುನಿಕ ಕಾಲದಲ್ಲಿ ಆಧ್ಯಾತ್ಮಿಕ ಕ್ರಾಂತಿಯ ಇತಿಹಾಸವನ್ನು ವಿರಚಿಸಿ ವಾಗ್ದತ್ತ ಮಸೀಹಾಗಿ ಅವತೀರ್ಣರಾದ ಹಝ್ರ್‌ರತ್ ಅಹ್ಮದರಲ್ಲಿ ಈ ಎಲ್ಲ ಕುರುಹುಗಳೂ ಭವಿಷ್ಯನುಡಿಗಳೂ ನೆರವೇರಿವೆ. ಪೈಗಂಬರ್ (ಸ.)ರವರ ಸತ್ಯಸಾಕ್ಷ್ಯಕ್ಕೆ ಮನೋಜ್ಞ ದೃಷ್ಟಾಂತ ಸಹ ಆಗಿರುವ ಈ ಭವಿಷ್ಯೋಕ್ತಿಗಳೂ ಕುರುಹುಗಳೂ ಹಝ್ರತ್ ಅಹ್ಮದ್ (ಅ)ರವರಲ್ಲಿ ಈಡೇರಿದ್ದು ಹೇಗೆಂದು ಪರಿಶೀಲಿಸೋಣ.

## 1. ಹೆಸರು

ಮಹ್‌ದಿಯ ಹೆಸರು ಅಹ್ಮದ್, ಅಬ್ದುಲ್ಲಾ, ಮಹ್‌ದಿ ಎಂದಾಗಿರುವುದೆಂದು ಪೈಗಂಬರ್ (ಸ.) ನುಡಿದದ್ದು ನಾನು ಕೇಳಿರುವೆನೆಂದು ಹುದೈಫ ವರದಿ

---

(28 ಪುಟದಿಂದ)

ಇಂದು ಶಾಪದೃಷ್ಟಿಯಿಂದಲೇ ಜನರು ಕಾಣುತ್ತಾರೆ. ಈ ಶಾಪ ಅವರನ್ನು ಸದಾಕಾಲ ಬೆನ್ನಟ್ಟುವುದು. ಅದೇ ಪ್ರಕಾರ ಹಝ್ರತ್ ಮೂಸಾ(ಅ) ಮತ್ತು ಹಝ್ರತ್ ಈಸಾ(ಅ)ರವರ ನಾಮಗಳು ಸ್ನೇಹಾದರದಿಂದ ಈಗಲೂ ಸ್ಮರಿಸಲ್ಪಡುತ್ತವೆ. ಕಟ್ಟಕಡೆಯಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರ ಮೇಲೆ ಕೋಟ್ಯಾನುಕೋಟಿ ಜನರು ಸಲಾತ್ ಮತ್ತು ಸಲಾಮ್ ಹೇಳುತ್ತಿದ್ದಾರೆ. ಇಂದು ನಾವು ಜಗತ್ತಿನ ಎಲ್ಲಿಯೇ ಆಗಲಿ ಸಮ್ಮೇಳಿಸುವುದು ಇದೇ ಉದ್ದೇಶವನ್ನಿಟ್ಟುಕೊಂಡಾಗಿದೆ. ಜಗತ್ತಿನಲ್ಲಿರುವ ಯಾವುದೇ ಜನಾಂಗವಾಗಲಿ, ಜಗತ್ತಿನ ಯಾವ ಮೂಲೆಯಾಗಲಿ ಆ ಮಹಾಪುರುಷರ ನಾಮದಲ್ಲಿ ಸಲಾತ್ ಮತ್ತು ಸಲಾಮ್ ಹೇಳದೆ ಬಾಕಿಯಾಗಬಾರದು ಎಂಬುದು ನಮ್ಮ ಉದ್ದೇಶವಾಗಿದೆ.

### ಉತ್ತರಧ್ರುವ ವಲಯದಲ್ಲಿ ಒಂದು ಮಸೀದಿ

ಒಟ್ಟಿನಲ್ಲಿ, ನಾವು ನೋರ್ವೆಯ ಚರಿತ್ರೆಯಲ್ಲಿ ಒಂದು ಹೊಸ ಅಧ್ಯಾಯವನ್ನು ಪ್ರಾರಂಭಿಸುತ್ತಿದ್ದೇವೆ. ಈ ಪ್ರದೇಶದ ಜನರಿಗೆ ಸತ್ಯಸಂದೇಶವನ್ನು ತಲಪಿಸಲು ಪ್ರಯತ್ನಿಸಬೇಕೆಂದು ನಾನು ನೋರ್ವೆ ಜಮಾಅತಿಗೆ ಉಪದೇಶಿಸುತ್ತೇನೆ. ಇಲ್ಲಿ ಅನೇಕ ಚಿಕ್ಕ ಚಿಕ್ಕ ಗ್ರಾಮಗಳಿವೆ. ಇಲ್ಲಿಯ ಜನರು ಪ್ರಕಾಶಕಾಲದಲ್ಲೂ ಅಂಧಕಾರ ಕಾಲದಲ್ಲೂ ಇಲ್ಲೇ ವಾಸಿಸುತ್ತಾರೆ. ಅವರು ಇಲ್ಲಿಯ ಮಣ್ಣಿನ ಮಕ್ಕಳು. ಅವರ ಸಂಪರ್ಕವಿರಿಸಿಕೊಳ್ಳಲು ಶ್ರಮಿಸಿರಿ. ಅಹ್ಮದಿಯತನ್ನು ಅಂದರೆ ಯಥಾರ್ಥ ಇಸ್ಲಾಮನ್ನು ಅವರಲ್ಲಿ ಪ್ರವೇಶಗೊಳಿಸಲು ನಿಮಗೆ ಸಾಧ್ಯವಾದರೆ, ನಾನು ನೋರ್ವೆ ಜಮಾಅತಿಗೆ ಒಂದು ವಾಗ್ದಾನ ನೀಡುತ್ತೇನೆ. ಈ ಪ್ರದೇಶದಲ್ಲಿ ಅಹ್ಮದಿಯತನ್ನು ಪರಿಚಯಪಡಿಸಿ ನಿಮಗೆ ಒಂದು ಜಮಾಅತನ್ನು ಸ್ಥಾಪಿಸಲು ಸಾಧ್ಯವಾದರೆ, ಇಲ್ಲಿ ಪ್ರಥಮದ ಮಸೀದಿಯನ್ನು ನಿರ್ಮಿಸಲು ಎಲ್ಲ ಏರ್ಪಾಡುಗಳನ್ನು ಮಾಡಿಕೊಡಲಾಗುವುದು. ಅದು ಉತ್ತರ ಧ್ರುವ ವಲಯದಲ್ಲಿ, ಯುರೋಪಿನ ಅತಿ ಉತ್ತರದಲ್ಲಿ ನಿರ್ಮಿಸಲ್ಪಡುವ ಪ್ರಥಮ ಮಸೀದಿಯಾಗುವುದು. ಇನ್‌ಶಾಅ್ ಅಲ್ಲಾಹ್. ಅನಂತರ ಮಸೀದಿಗಳ ಒಂದು ಶ್ರೇಣಿಯೇ ಪ್ರಾರಂಭವಾಗುವುದು.

ಮಾಡಿದ್ದಾರೆ. (ಬಿಹಾರುಲ್ ಅನ್ವಾರ್, ಸಂಪುಟ 13, ಪುಟ 174).

### 2. ಕುಟುಂಬ

ಸತ್ಯ ವಿಶ್ವಾಸ ಸುರಯ್ಯಾ (ಕಾರ್ತಿಕ) ನಕ್ಷತ್ರದ ವರೆಗೆ ಮೇಲಕ್ಕೆತ್ತಲ್ಪಡುವ ಕಾಲ ಬಂದೊದಗಿದಾಗ ಫಾರ್ಸಿ ವಂಶದ ಕೆಲವರು ಅಥವಾ ಓರ್ವ ಅದನ್ನು ಭೂಮಿಗೆ ತಿರುಗಿ ತರುವರು. (ಬುಖಾರಿ, ಸಂಪುಟ 3, ಪುಟ 131).

### 3. ರಾಜ್ಯ

ಅಹ್ಮದ್ ಎಂಬ ಹೆಸರಿನ ಮಹ್‌ದಿಯ ಸಂಗಡ ಒಂದು ಜಮಾಅತ್ ಇಂಡಿಯಾದಲ್ಲಿ ಜಿಹಾದ್ (ಧರ್ಮ ಪ್ರಚಾರ) ನಡೆಸುವುದು. (ಅನ್ನಜ್ಮುಸ್ಸಾಖಿಬ್, ಸಂಪುಟ 2, ಪುಟ 41-42).

### 4. ದೇಶ

'ಕದಿಅ' ಎಂಬ ಹೆಸರಿನಿಂದ ಕರೆಯಲ್ಪಡುವ ಸ್ಥಳದಲ್ಲಿ ಇಮಾಂ ಮಹ್‌ದಿ ಪ್ರತ್ಯಕ್ಷಗೊಳ್ಳುವರು. (ಜವಾಹಿರುಲ್ ಅಸ್ರಾರ್, ಬಿಹಾರುಲ್ ಅನ್ವಾರ್, ಸಂಪುಟ 13, ಪುಟ 19).

### 5. ಕಾಲ

ಸಾವಿರದ ಇನ್ನೂರ ನಲ್ವತ್ತು (ಹಿಜ್‌ರಿ) ವರ್ಷಗಳ ನಂತರ ಅಲ್ಲಾಹು ಇಮಾಂ ಮಹ್‌ದಿಯನ್ನು ನಿಯೋಗಿಸುವನು. (ಅನ್ನಜ್ಮುಸಾಖಿಬ್, ಸಂಪುಟ 2, ಪುಟ 209).

### 6. ಜಮಾಅತಿನ ಹೆಸರು

ಅಂತ್ಯಕಾಲದಲ್ಲಿ ತನ್ನ ಸಮುದಾಯ 73 ಪಂಗಡಗಳಾಗಿ ವಿಂಗಡಿಸಲ್ಪಡುವುದೆಂದೂ ಅವುಗಳ ಪೈಕಿ 72 ಪಂಗಡಗಳು ನರಕವಾಸಿಗಳಾಗುವುವೆಂದೂ ಒಂದು ಪಂಗಡ ಮಾತ್ರ ಮೋಕ್ಷಾರ್ಹವಾಗುವುದೆಂದೂ ಆ ಜಮಾಅತು ಓರ್ವ ಆಧ್ಯಾತ್ಮಿಕ ನೇತಾರರ (ಇಮಾಂ ಮಹ್‌ದಿಯ) ಕೈಕೆಳಗೆ ತನ್ನ ಮತ್ತು ತನ್ನ ಸಹಚರರ ಪ್ರವರ್ತನ ಪಥದಲ್ಲಿ ಚಲಿಸುವುದೆಂದೂ ಪೈಗಂಬರ್ (ಸ.) ಪ್ರಸ್ತಾಪಿಸಿದ್ದಾರೆ. ಮಿಶ್ಕಾತಿನ ವ್ಯಾಖ್ಯಾನವಾದ ಮಿರ್ಖಾತ್‌ನಲ್ಲಿ ಆ ಜಮಾಅತಿನ ಹೆಸರು "ಅಹ್ಮದಿಯಾ ಜಮಾಅತ್" ಎಂದಾಗಿರುವುದೆಂದು ಉಲ್ಲೇಖಿಸಲಾಗಿದೆ. ಅದು ಹೀಗಿದೆ:

ಎಪ್ಪತ್ತ ಎರಡು ಪಂಗಡಗಳು ನರಕದಲ್ಲಿ ಬೀಳುವುವು. ಮುಹಮ್ಮದೀ ಶರೀಅತಿನಲ್ಲಿ ಚಲಿಸುವ ಪವಿತ್ರ ಅಹ್ಮದಿಯಾ ತರೀಖತಿನಲ್ಲಿ ಸೇರಿದ ಜಮಾಅತ್ ಮೋಕ್ಷಾರ್ಹವಾದುದು. (ಮಿರ್ಖಾತ್ — ಶರಹ್ ಮಿಶ್ಕಾತ್, ಸಂಪುಟ 1, ಪುಟ 204).

### 7. ಕಾಲ ಸೂಚನೆ

"ವ ಇದಲ್ ಇಷಾರು ಉತ್ತಿಲತ್" (ಖುರ್‌ಆನ್ 81:5). ಮರುಭೂಮಿಯ ಹಡಗು ಎಂಬ "ಒಂಟೆ ತ್ಯಜಿಸಲ್ಪಡುವುದು." ಎಂದರೆ, ನೆಲ, ಜಲ ಆಕಾಶಗಳಲ್ಲಿ ತ್ವರಿತವಾಗಿ ಸಂಚರಿಸುವ ವಾಹನಗಳು ಬಳಸಲ್ಪಡುವ ಕಾರಣದಿಂದಾಗಿ ಒಂಟೆ ಸವಾರಿ ತ್ಯಜಿಸಲ್ಪಡುವುದು.

### 8. ನಾಗರಿಕತೆ

"ವ ಇದಲ್ ವುಹೂಶು ಹುಶ್ಶಿರತ್" (ಖುರ್‌ಆನ್ 81:6). ವನ್ಯ ಮೃಗ ಜಂತುಗಳು ಒಂದುಗೂಡಿಸಲ್ಪಡುವುವು." ಪ್ರಾಣಿ ಸಂಗ್ರಹಾಲಯ ಮತ್ತು ವಸ್ತು ಸಂಗ್ರಹಾಲಯಗಳ ಮೂಲಕ ಪ್ರಪಂಚದ ವಿವಿಧ ಕಡೆಗಳಲ್ಲಿ ಕಂಡು ಬರುವ ಪಕ್ಷಿ ಮೃಗಾದಿಗಳು ಒಂದುಗೂಡಿಸಲ್ಪಡುವುವು. ಹಿಂದುಳಿದ ಸ್ಥಿತಿಯಲ್ಲಿ ಕಾಲ ಕಳೆಯುತ್ತಿದ್ದ ಜನ ವರ್ಗಗಳು ಆಧುನಿಕ ನಾಗರಿಕತೆಯ ಕಾರಣದಿಂದ ಲೋಕದಲ್ಲಿ ಪ್ರಬಲ ಶಕ್ತಿಯಾಗಿ ಬೆಳೆಯುವುವು.

### 9. ಭೂಸ್ಥಿತಿ

"ವ ಇದಲ್ ಬಿಹಾರು ಸುಜ್ಜಿರತ್" (ಖುರ್‌ಆನ್ 81:7). ಕಾಲುವೆಗಳನ್ನು ನಿರ್ಮಿಸಿ "ನದಿಗಳೂ ಸಮುದ್ರಗಳೂ ಪರಸ್ಪರ ಸಂಯೋಜಿಸಲ್ಪಡುವುವು." ಅಣೆಕಟ್ಟುಗಳನ್ನು ರಚಿಸಿ ನೀರಾವರಿ ಯೋಜನೆಯನ್ನು ಏರ್ಪಡಿಸಲ್ಪಡುವುದು.

### 10. ಸಾರಿಗೆ ಸಂಚಾರ ಪ್ರಗತಿ

"ವ ಇದನ್ನುಫೂಸು ಸುವ್ವಿಜತ್" (ಖುರ್‌ಆನ್ 81:8). ಸಾರಿಗೆ ಸಂಚಾರ ಸೌಕರ್ಯವಲ್ಲದೆ ರೇಡಿಯೋ,

ಟೆಲಿವಿಷನ್ ಮೊದಲಾದ ವ್ಯವಸ್ಥೆಗಳ ಮೂಲಕ "ವಿಭಿನ್ನ ಜನತೆಗಳೆಡೆಯಲ್ಲಿ ಅನ್ಯೋನ್ಯ ಸಂಪರ್ಕವುಂಟಾಗುವುದು." ವಿವಿಧ ಪಕ್ಷಗಳೂ ಸಹಕಾರ ಸಂಘಗಳೂ ಹುಟ್ಟಿಕೊಳ್ಳುವುವು.

## 11. ಸಾಹಿತ್ಯ ಪ್ರಕಾಶನ

"ವ ಇದಸ್ಸುಹುಫು ನುಶಿರತ್" (ಖುರ್‌ಆನ್ 81:11). "ಗ್ರಂಥಗಳೂ ಪತ್ರಿಕೆಗಳೂ ಅತ್ಯಧಿಕ ಪ್ರಕಾಶಿತಗೊಳ್ಳುವುವು." ಆಧುನಿಕ ಮುದ್ರಣ ಯಂತ್ರಗಳ ಸಹಾಯದಿಂದ ಪತ್ರಿಕೆಗಳ ಪ್ರಕಟನೆ ವಿಪುಲವಾಗಿ ನಡೆಯುತ್ತವೆ. ವಾಚನಾಲಯ ಮತ್ತು ಗ್ರಂಥಾಲಯಗಳ ಹೆಚ್ಚಳ ಸಹ ಇಲ್ಲಿ ಸೂಚಿತ.

## 12. ಧಾರ್ಮಿಕ ಸ್ಥಿತಿ

ಇಮಾಂ ಮಹ್‌ದಿಯ ಆಗಮನ ಕಾಲದ ಧಾರ್ಮಿಕ ಪರಿಸ್ಥಿತಿಗಳ ಕುರಿತು ಪೈಗಂಬರ್ (ಸ.) ವಿಶದವಾಗಿ ಭವಿಷ್ಯ ನುಡಿದಿರುವರು:

(i) ಆ ಕಾಲದಲ್ಲಿ ಕ್ರೈಸ್ತ ಧರ್ಮಕ್ಕೆ ವಿಪುಲ ಅಭಿವೃದ್ಧಿ ಸಿದ್ಧಿಸುವುದು. (ಮುಸ್ಲಿಂ, ಸಂಪುಟ 2, ಕಿತಾಬುಲ್ ಫಿತನ್).

ಕ್ರೈಸ್ತ ಧರ್ಮದ ಎದುರಲ್ಲಿ ಇಸ್ಲಾಂ ಧರ್ಮದ ಶೋಚನೀಯ ಸ್ಥಿತಿಯ ಕುರಿತು ಹೀಗೆ ಹೇಳಲಾಗಿದೆ:

(ii) ಆ ಕಾಲದಲ್ಲಿ ಇಸ್ಲಾಂ ಆರಂಭದಶೆಯಲ್ಲಿದ್ದಂತೆ ಬಲಹೀನವಾದ ಒಂದು ಸ್ಥಿತಿಯಲ್ಲಿರುವುದು. (ಇಬ್ನು ಮಾಜ).

## 13. ಸಾಮುದಾಯಿಕ ಸ್ಥಿತಿ

(i) ಮುಸ್ಲಿಮರು ದಜ್ಜಾಲಿನ (ಕ್ರೈಸ್ತರ) ಅನುಯಾಯಿಗಳಾಗುವರು. (ತಿರ್ಮದಿ, ಅಬ್ವಾಬುಲ್ ಫಿತನ್).

(ii) ಇಸ್ಲಾಮಿನ ನಾಮ ಮತ್ತು ಖುರ್‌ಆನಿನ ಲಿಪಿ ಮಾತ್ರವೇ ಬಾಕಿಯಾದೀತು. ಮಸೀದಿಗಳು ಜನಬಾಹುಳ್ಯದಿಂದ ಇದ್ದರೂ ಭಕ್ತಿಶೂನ್ಯವಾಗಿದ್ದೀತು. ಅವರ ಮತಪಂಡಿತರು ಆಕಾಶದ ಕೆಳಗೆ ನಿಕೃಷ್ಟಜೀವಿಗಳಾಗುವರು. (ಮಿಶ್ಕಾತ್).

(iii) ಮುಸ್ಲಿಮರು ಪ್ರಾರ್ಥನೆ ತ್ಯಜಿಸುವರು, ಝಕಾತನ್ನು ದಂಡವೆಂಬಂತೆ ಗಣಿಸುವರು. (ಇಬ್ನು ಅಬಾಸಿಯವರ ವರದಿ, ಪುಟ 298, 927 ಹುಜ್ಜುಲ್ ಕಿರಾಮ).

(iv) ಹಝ್ರತ್ ಅಲಿ (ರ) ಈ ರೀತಿ ವರದಿ ಮಾಡುತ್ತಾರೆ: ಅರಬಿಗಳು (ಇಸ್ಲಾಂ) ಧರ್ಮದಿಂದ ಬಹಳ ದೂರವಾಗುವರು.

(v) ಮುಸ್ಲಿಮರು ಯಹೂದರನ್ನೂ ಕ್ರೈಸ್ತರನ್ನೂ ಸಂಪೂರ್ಣವಾಗಿ ಅನುಕರಿಸುವರು. (ಮಿಶ್ಕಾತ್).

## 14. ಸದಾಚಾರ ಸ್ಥಿತಿ

(i) ಆ ಕಾಲದಲ್ಲಿ ಅಶ್ಲೀಲ ಸಾಹಿತ್ಯಗಳೂ ವ್ಯಭಿಚಾರವೂ ವೃದ್ಧಿಗೊಂಡು ವ್ಯಭಿಚಾರ ಸಂತತಿಗಳು ಹೆಚ್ಚುವುವು. (ಇಬ್ನು ಅಬೀಶೀಬ ಅವರ ವರದಿ– ಹುಜ್ಜುಲ್ ಕಿರಾಮ).

(ii) ಆ ಕಾಲದಲ್ಲಿ ಮದ್ಯವು ಬಹಳ ಹೆಚ್ಚಾಗಿ ಉಪಯೋಗಿಸಲ್ಪಡುವುದೆಂದು ಅನಸಿಬ್ನು ಮಾಲಿಕ್ ಅವರು ವರದಿ ಮಾಡಿದ್ದಾರೆ. (ಮುಸ್ಲಿಂ).

(iii) ಜೂಜಾಟ ವಿಪುಲವಾಗಿ ನಡೆಯುವುದು. (ದೈಲಮಿ).

(iv) ಅಮಾನತ್ (ವಿಶ್ವಸ್ತತೆ) ನಾಸ್ತಿಯಾಗುವುದು. (ದೈಲಮಿ, ಹುಜ್ಜುಲ್ ಕಿರಾಮ).

(v) ಪುತ್ರನು ಮಾತಾಪಿತರನ್ನು ಅನುಸರಿಸದೆ ಅವರನ್ನು ಅಪಮಾನಿಸುವನು; ಅವರಿಗೆ ಕಷ್ಟ ಕೊಡುವನು. (ಹುದೈಫಾ ಬಿನ್ ಯಮಾನ್ ವರದಿ ಮಾಡಿದ್ದು).

(vi) ಸಂಪತ್ತು ಮತ್ತು ಪ್ರೌಢಿಮೆಯನ್ನು ಗಣಿಸಿ ಜನರು ಹೊಗಳಲ್ಪಡುವರು. ಜನರು ಧೈರ್ಯವಂತರು, ಬುದ್ಧಿವಂತರು, ಪ್ರತಾಪಶಾಲಿಗಳು ಎಂಬಿತ್ಯಾದಿಯಾಗಿ ಸ್ತುತಿಸಲ್ಪಡುವರು. ಆದರೆ ಅವರ ಹೃದಯದಲ್ಲಿ ತುಸುಮಾತ್ರವಾದರೂ ವಿಶ್ವಾಸ ಇರಲಿಕ್ಕಿಲ್ಲ. (ತಿರ್ಮದಿ).

## 15. ವೇಷಭೂಷಣಗಳು

(i) ಆ ಕಾಲದಲ್ಲಿ ಸ್ತ್ರೀಯರು ವಸ್ತ್ರ ಧರಿಸಿದರೂ ನಗ್ನರಾಗಿ ಕಾಣುವರು. (ಮುಸ್ನದ್ ಅಹ್ಮದ್)

(ii) ಆ ಕಾಲದಲ್ಲಿ ಸ್ತ್ರೀಯರು ಒಂಟೆಯ ಡುಬ್ಬದಂತೆ ತಮ್ಮ ತಲೆಗೂದಲನ್ನು ಅಲಂಕರಿಸುವರು (ಮುಸ್ನದ್).

(iii) ಸ್ತ್ರೀಯರು ತಮ್ಮ ಪತಿಯರೊಂದಿಗೆ ಸೇರಿ ವ್ಯಾಪಾರ ನಡೆಸುವರು. (ಹುಜ್ಜುಲ್ ಕಿರಾಮ).

(iv) ಸ್ತ್ರೀಯರು ಪುರುಷ ವೇಷ ಧರಿಸಿ ಸ್ವತಂತ್ರರಾಗಿ ತಿರುಗಾಡುವರು. (ಇಬ್ನು ಅಬ್ಬಾಸ್).

(v) ಪುರುಷರು ಸ್ತ್ರೀಯರಂತೆ ವಸ್ತ್ರ ಧರಿಸಿ ನಡೆಯುವರು. (ಹುದೈಫತುಬ್ನು ಯಮಾನ್).

(vi) ಆ ಕಾಲದಲ್ಲಿ ಆಕಸ್ಮಿಕ ಮರಣಗಳು (ಹೃದಯಸ್ತಂಭನ ಇತ್ಯಾದಿ) ಹೆಚ್ಚುವುವು. (ಇಬ್ನು ಅಬೀಶೀಬ–ಹುಜ್ಜುಲ್ ಕಿರಾಮ).

## 16. ಆಡಳಿತ ರಂಗ

(i) ಬಡ್ಡಿ ವ್ಯವಹಾರ ಅತ್ಯಧಿಕ ವೃದ್ಧಿಗೊಳ್ಳುವುದು. [ಬ್ಯಾಂಕಿಂಗ್, ಇನ್ಶೂರೆನ್ಸ್ ಇತ್ಯಾದಿ] (ದೈಲಮಿ).

(ii) ದರಿದ್ರರೂ ಇಲ್ಲದವರೂ ರಾಜರಾಗುವರು.

(iii) ಶ್ರಮಜೀವಿಗಳ ಸಂಘಟನೆ ಬಹಳ ಶಕ್ತಿ ಪಡೆಯುವುದು.

(iv) ಆಡಳಿತಾಧಿಕಾರಿಗಳು ಹೆಚ್ಚುವರು. [ಜನಪ್ರತಿನಿಧಿಗಳು ಆಡಳಿತಗಾರರಾಗುವರು] (ಹುದೈಫ).

## 17. ದಜ್ಜಾಲ್

ದಜ್ಜಾಲ್‌ನ ನಿರ್ಗಮನವಾಗುವುದು.

"ದಜ್ಜಾಲಿನ ಬಲಗಣ್ಣು (ಆಧ್ಯಾತ್ಮಿಕ ದೃಷ್ಟಿ) ಕುರುಡಾಗಿರುವುದು. ನಿಮ್ಮಲ್ಲಿ ಯಾರಾದರೂ ಅವನನ್ನು ಕಂಡರೆ ಸೂರಾ ಕಹ್‌ಫಿನ ಪ್ರಾರಂಭ ವಚನಗಳನ್ನು [ಹಝ್ರತ್ ಈಸಾ (ಅ)ರ ದೇವತ್ವಕ್ಕೆ ವಿರುದ್ಧವಾದ ಪ್ರಸ್ತಾಪನೆಗಳಿಂದ ಕೂಡಿದವು] ಓದಿರಿ. ದಜ್ಜಾಲ್ ಮಳೆ ಸುರಿಸಲು ಆಕಾಶದೊಡನೆ ಆಜ್ಞಾಪಿಸುವಾಗ ಆಕಾಶ ಮಳೆ ಸುರಿಸುವುದು (ಕೃತಕ ಮಳೆ). ಮೊಳೆಯಿಸಲಿಕ್ಕೆ ಭೂಮಿಯೊಡನೆ ಆಜ್ಞಾಪಿಸುವಾಗ ಭೂಮಿ ಮೊಳೆಯಿಸುವುದು. ಅವನ ಜೊತೆಯಲ್ಲಿ ರೊಟ್ಟಿಯ ಗುಡ್ಡೆ ಮತ್ತು ನೀರಿನ ಕಾಲುವೆ ಇರುವುವು." (ಮಿಶ್ಕಾತ್).

ಆಧುನಿಕ ಯುಗದಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅಧಿಪತ್ಯ ಗಳಿಸಿರುವ ಕ್ರೈಸ್ತ ಜನತೆಯಾಗಿದೆ ದಜ್ಜಾಲ್ ಎಂಬುದರ ತಾತ್ಪರ್ಯ.

## 18. ಯಅ್‌ಜೂಜ್ ಮಅ್‌ಜೂಜ್

ಯಅ್‌ಜೂಜ್ ಮಅ್‌ಜೂಜ್ ಪ್ರತ್ಯಕ್ಷಗೊಳ್ಳುವುವು. (ಸೂರಃ ಅಂಬಿಯಾ, ಕಹ್‌ಫ್).

ಇವು ರಶ್ಯಾ ಮತ್ತು ಅಮೇರಿಕಾ ಎಂಬೀ ಎರಡು ಶಕ್ತಿಗಳಾಗಿವೆಯೆಂದು ವ್ಯಕ್ತಗೊಂಡಿವೆ.

## 19. ಕುಸಿಯುವ ಶಿಲುಬೆಗಳು

ಇಮಾಂ ಮಹ್‌ದಿಯ ಪ್ರಧಾನ ಕರ್ತವ್ಯವಾಗಿ ಮುಹಮ್ಮದ್ ಪೈಗಂಬರ್(ಸ.) ಹೀಗೆ ನುಡಿದಿರುವರು:

ಅವರು ಬಂದು ಶಿಲುಬೆಯನ್ನು ಮುರಿಯುವರು, ಹಂದಿಯನ್ನು ಕೊಲ್ಲುವರು. (ಹಂದಿಯ ಸ್ವಭಾವವುಳ್ಳವರನ್ನು ಪರಿವರ್ತಿಸಲು ಪ್ರಯತ್ನಿಸುವರು)–[ಬುಖಾರಿ, ಸಂಪುಟ 2, ಪುಟ 19].

ಶಿಲುಬೆಯನ್ನು ಮುರಿಯುವರು ಎಂಬ ಪೈಗಂಬರರ ವಚನಕ್ಕೆ ವ್ಯಾಖ್ಯಾನ ನೀಡುತ್ತಾ ಬಿಹಾರುಲ್ ಅನ್ವಾರ್ ಎಂಬ ಗ್ರಂಥದಲ್ಲಿ ಹೀಗೆ ಹೇಳಲಾಗಿದೆ:

ಶಿಲುಬೆಯನ್ನು ಮುರಿಯಲಾಗುವುದು ಎಂಬುದರ ತಾತ್ಪರ್ಯ ಕ್ರೈಸ್ತ ವಿಶ್ವಾಸದ ಅಬದ್ಧತೆಯನ್ನು ಎತ್ತಿ ತೋರಿಸುವುದು ಹಾಗೂ ಇಸ್ಲಾಮಿಕ ನಿಯಾಮಾನುಸಾರ ವಿಶ್ವಾಸವಿರಿಸುವುದು ಎಂದಾಗಿದೆ. (ಬಿಹಾರುಲ್ ಅನ್ವಾರ್, ಸಂಪುಟ 13, ಪುಟ 198).

## 20. ಅರಬಿಯರಿಗೆ ನಾಶನಷ್ಟ

ಹಝ್ರತ್ ರಸೂಲ್ ಕರೀಂ (ಸ.) ಹೀಗೆ ನುಡಿದಿರುವರು:

ಅರಬಿಯರಿಗೆ ತುಂಬಾ ನಾಶನಷ್ಟಗಳು ಸಂಭವಿಸುವುವು. ಯಅ್‌ಜೂಜ್ ಮಅ್‌ಜೂಜ್‌ಗಳ ಗೋಡೆಯಲ್ಲಿ ಒಂದು ರಂಧ್ರವಿದ್ದೀತೆಂದು ಹೇಳುತ್ತಾ ತನ್ನ ತೋರುಬೆರಳು ಮತ್ತು ಹೆಬ್ಬೆರಳನ್ನು ಸೇರಿಸಿ ಒಂದು ರಂಧ್ರ

ವನ್ನುಂಟು ಮಾಡಿ ತೋರಿಸಿದರು. (ಬುಖಾರಿ, ಯಅ್ ಜೂಜ್ ಮಅ್‌ಜೂಜ್ ಸಂಬಂಧಿಸಿದ ಅಧ್ಯಾಯ).

ಯಅ್‌ಜೂಜ್ ಮಅ್‌ಜೂಜ್ (ಅಮೇರಿಕನ್– ರಶ್ಯನ್ ರಾಷ್ಟ್ರಗಳು) ಮುಖಾಂತರ ಅರಬಿಯರಿಗೆ ಮಹಾ ನಾಶನಷ್ಟಗಳನ್ನು ಎದುರಿಸಬೇಕಾದೀತು.

1967ರ ಅರಬ್-ಇಸ್ರಾಯಿಲ್ ಯುದ್ಧ ಅರಬ್ ಲೋಕಕ್ಕೆ ಉಂಟುಮಾಡಿದ ನಾಶನಷ್ಟಗಳು ಈ ಭವಿ ಷ್ಯೋಕ್ತಿಯ ನೆರವೇರಿಕೆಯೆಂಬಂತೆ ಸಂಭವಿಸಿತು. ಅನಂತರ ಪಶ್ಚಿಮೇಷ್ಯದಲ್ಲುಂಟಾದ ಹೋರಾಟಗಳೂ ಮಹಾನಾಶಗಳೂ ಭವಿಷ್ಯವಾಣಿಯನ್ನು ಸತ್ಯಗೊಳಿಸಿವೆ.

## 21. ಸೂರ್ಯ ಚಂದ್ರ ಗ್ರಹಣಗಳು

"ನಮ್ಮ ಮಹ್‌ದಿಗೆ ಎರಡು ಕುರುಹುಗಳಿವೆ. ಆಕಾಶ ಭೂಮಿ ಉಂಟಾದ ಮೊದಲ್ಗೊಂಡು ಈ ರೀತಿಯ ಕುರುಹುಗಳು ಉಂಟಾಗಿಲ್ಲ*. ಎಂದರೆ ರಮ ಝಾನ್ ಮಾಸವಲ್ಲಿ ಚಂದ್ರ ಗ್ರಹಣಕ್ಕಾಗಿ ನಿರ್ದಿಷ್ಟವಾದ ರಾತ್ರಿಗಳಲ್ಲಿ (13, 14, 15) ಪ್ರಥಮ ರಾತ್ರಿ 13ನೇ ರಾತ್ರಿ) ಚಂದ್ರನಿಗೂ ಸೂರ್ಯ ಗ್ರಹಣಕ್ಕಾಗಿ ನಿರ್ದಿಷ್ಟ ವಾದ ದಿನಗಳಲ್ಲಿ (27, 28, 29) ಮಧ್ಯದಿನದಂದು (28ರಂದು) ಸೂರ್ಯ ಗ್ರಹಣವೂ ಉಂಟಾಗುವುದು" (ಮಿಶ್ಕಾತ್).

## ಇಮಾಂ ಮಹ್‌ದಿ ಮತ್ತು ಮಸೀಹ್

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೀಗೆ ನುಡಿದಿದ್ದಾರೆ:

"ಯೂಶಿಕು ಮನ್ ಆಶ ಮಿಂಕುಮ್ ಅನ್ ಯಲ್ಕಾ ಈಸಬ್ನ ಮರ್ಯಮ ಇಮಾಮನ್ ಮಹ್ ದಿಯ್ಯನ್"

"ನಿಮ್ಮಲ್ಲಿ ಬದುಕಿರುವವರು ಈಸಬ್ನು ಮರ್ಯ ಮರನ್ನು ಇಮಾಂ ಮಹ್‌ದಿಯಾಗಿ ಕಾಣುವರು. (ಮುಸ್ನದ್ ಅಹ್ಮದಿಬ್ನು ಹಂಬಲ್ – ಸಂಪುಟ II, ಪುಟ 411)

"ಲಲ್ ಮಹ್‌ದಿಯ್ಯು ಇಲ್ಲಾ ಈಸಬ್ನ ಮರ್ಯಮ"

"ಈಸಬ್ನು ಮರ್ಯಮ್ ಹೊರತು ಬೇರೆ ಮಹ್‌ದಿ ಇಲ್ಲ" (ಇಬ್ನು ಮಾಜ – ಪುಟ 302)

ಮುಹಮ್ಮದೀ ಉಮ್ಮತಿಗೆ ಸೇರಿದ ಹಲವು ಮಹಾತ್ಮರುಗಳು ಸಹ ಹಝ್ರತ್ ಇಮಾಂ ಮಹ್‌ದಿ ಮತ್ತು ವಾಗ್ದತ್ತ ಮಸೀಹರು ಏಕ ವ್ಯಕ್ತಿಯಾಗಿರುವ ರೆಂಬ ವಿಶ್ವಾಸವನ್ನು ಬಹಿರಂಗಪಡಿಸಿದ್ದಾರೆ.

ಶೈಖುಲ್ ಅಕ್ಬರ್ ಹಝ್ರತ್ ಮುಹ್ಯದ್ದೀನಿಬ್ನು ಅರಬಿ (ರಹ್) ಹೀಗೆ ಹೇಳಿದ್ದಾರೆ:

"ಕೊನೆಯ ಕಾಲದ ವಾಗ್ದತ್ತ ಮಸೀಹರ ಅವ ತಾರಣ ಬೇರೊಂದು ವ್ಯಕ್ತಿತ್ವದಲ್ಲಾಗುವುದು." (ತಫ್ ಸೀರ್ ಅರಾಯಿಸುಲ್ ಬಯಾನ್ – ಸಂಪುಟ 1, ಪುಟ 262)

ಹಝ್ರತ್ ನಿಅ್‌ಮತುಲ್ಲಾಹ್ ವಲಿ (ರಹ್) ಹೀಗೆ ಹೇಳಿದ್ದಾರೆ:

"ಅವರು ಮಹ್‌ದಿಯೂ ಆಗಿರುವರು ಮಸೀಹೂ ಆಗಿರುವರು. ಎರಡು ಗುಣಗಳೂ ಅವರಲ್ಲಿ ಪ್ರತ್ಯಕ್ಷ ಗೊಳ್ಳುವುವು" (ಅಲ್‌ಅರ್ಬಈನ್ ಫೀ ಅಹ್ವಾಲಿಲ್ ಮಹ್ದಿಯ್ಯೀನ್).

ಹಝ್ರತ್ ಅಲ್ಲಾಮ ಹುಸೈನುಬ್ನು ಮುಈನು ದ್ದೀನ್ ಅಲ್‌ಮೈಬದಿ (ಮರಣ: ಕ್ರಿ. ಶ. 1466) ಹೀಗೆ ಹೇಳಿದ್ದಾರೆ:

"ಹಝ್ರತ್ ಈಸಾರ ಆಧ್ಯಾತ್ಮಿಕ ಪ್ರಭಾವ ಹಝ್ರತ್ ಮಹ್‌ದಿ ಮೂಲಕ ಪ್ರತ್ಯಕ್ಷವಾಗುವುದು. ವಾಗ್ದತ್ತ ಮಸೀಹರ ಅವತಾರಣ ಎಂದು ಹೇಳುವುದು ಇದೇ ಆಗಿದೆ" (ಗಾಯತುಲ್ ಮಖ್‌ಸೂದ್, ಪುಟ 21)

ಶೈಖ್ ಮುಹಮ್ಮದ್ ಅಕ್ರಂ ಸಾಬಿರಿ (ಮರಣ: ಹಿಜರಿ 1129) ಹೀಗೆ ಹೇಳುತ್ತಾರೆ:

"ಕೆಲವರ ವಿಶ್ವಾಸ ಪ್ರಕಾರ ಈಸಾರ ಆಧ್ಯಾತ್ಮಿಕ ಪ್ರಭಾವ ಮಹ್‌ದಿಯಲ್ಲಿ ಪ್ರತ್ಯಕ್ಷಗೊಳ್ಳುವುದು. ಹದೀಸಿ ನಲ್ಲಿರುವ 'ನುಸೂಲ್' ಎಂಬ ಪದದ ಅರ್ಥ ಪ್ರತ್ಯಕ್ಷ ವಾಗುವುದು ಎಂದಾಗಿದೆ. 'ಲಾ ಮಹ್‌ದಿಯ್ಯ ಇಲ್ಲಾ ಈಸಾ' ಎಂಬ ಹದೀಸಿನ ವ್ಯಾಖ್ಯಾನ ಸಹ ಇದೇ ಆಗಿದೆ. (ಇಖ್ತಿಬಾಸುಲ್ ಅನ್ವಾರ್ – ಪುಟ 21)

---

* ಓರ್ವ ಪ್ರವಾದಿಗೆ ಸಾಕ್ಷ್ಯವಾಗಿ ಇಂತಹ ಕುರುಹುಗಳು ಮೊದಲೆಂದೂ ಉಂಟಾಗಿಲ್ಲ ಎಂದು ತಾತ್ಪರ್ಯ.

1250 ಶವ್ವಾಲ್ 14ರಂದು (1835 ಫೆಬ್ರವರಿ 13 – ಶುಕ್ರವಾರ) ಭಾರತದ ಕದ್‌ಅ (ಖಾದಿಯಾನ್) ಎಂಬ ಗ್ರಾಮದಲ್ಲಿ ಪಾರ್ಸಿ ವಂಶಜರಾಗಿ ಹಝ್ರತ್ ಅಹ್ಮದ್(ಅ) ಜನಿಸಿದರು. ಅವರ ಸಂಘಟನೆ ಅಹ್ಮದಿಯಾ ಜಮಾಅತ್ (ಅತ್ತರೀಖತುಲ್ ಅಹ್ಮದಿಯಾ) ಎಂಬ ಹೆಸರಿನಲ್ಲಿ ಇಂದು ಜಾಗತಿಕ ಸಂಘಟನೆಯಾಗಿ ವಿಶ್ವ ವಿಖ್ಯಾತವಾಗಿದೆ.

1891ರಲ್ಲಿ ಅವರು ತಾನು ಇಮಾಂ ಮಹ್‌ದಿಯೆಂದು ವಾದಿಸಿದರು. ಪ್ರಸ್ತುತ ವಾದದ ಮೂರನೇ ವರ್ಷ 1894ರಲ್ಲಿ ಮತ್ತು ನಾಲ್ಕನೇ ವರ್ಷ 1895ರಲ್ಲಿ ಭಾರತದಲ್ಲೂ ಅಮೇರಿಕದಲ್ಲೂ ಅನುಕ್ರಮವಾಗಿ ಸೂರ್ಯ ಚಂದ್ರ ಗ್ರಹಣಗಳು ಘಟಿಸಿದುವು. ಅಂದರೆ, ಭಾರತದಲ್ಲಿ 1894 ಮಾರ್ಚ್ 21 ರಂದು ಚಂದ್ರ ಗ್ರಹಣ, ಎಪ್ರಿಲ್ 6 ರಂದು ಸೂರ್ಯಗ್ರಹಣ ಮತ್ತು ಅಮೇರಿಕದಲ್ಲಿ 1895 ಮಾರ್ಚ್ 11 ರಂದು ಚಂದ್ರ ಗ್ರಹಣ, ಮಾರ್ಚ್ 26 ರಂದು ಸೂರ್ಯಗ್ರಹಣ ಸಂಭವಿಸಿದುವು. George F. Chambers 1902 ರಲ್ಲಿ ವಿರಚಿಸಿದ ಲಂಡನ್‌ನಲ್ಲಿ ಪ್ರಕಟಗೊಂಡ The story of Eclipses ಎಂಬ ಗ್ರಂಥದಲ್ಲಿ ಪ್ರಸ್ತುತ ಗ್ರಹಣಗಳ ಬಗ್ಗೆ ಉಲ್ಲೇಖವಿದೆ.

1908 ಮೇ 26ರಂದು ವಾಗ್ದತ್ತ ಮಹ್‌ದಿ(ಅ) ತನ್ನ ದೌತ್ಯ ನಿರ್ವಹಿಸಿದ ನಂತರ ಇಹಲೋಕ ತ್ಯಜಿಸಿದಾಗ ಅವರ ಪ್ರಥಮ ಖಲೀಫರಾಗಿ ಅರಬಿ ವಂಶಜರಾದ ಹಝ್ರತ್‌ಮೌಲಾನಾ ನೂರುದ್ದೀನ್‌ರವರು ಚುನಾಯಿಸಲ್ಪಟ್ಟರು. 1914 ಮಾರ್ಚ್ 13 ರಂದು ಅವರು ಮೃತಪಟ್ಟಾಗ ಎರಡನೇ ಖಲೀಫರಾಗಿ ಹಝ್ರತ್ ಅಹ್ಮದ್(ಅ)ರವರ ಪುತ್ರ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್ ಚುನಾಯಿತರಾದರು. 1968 ನವೆಂಬರ್ 8 ರಂದು ಅವರು ನಿಧನರಾದಾಗ ಇಮಾಂ ಮಹ್‌ದಿಯ ಮೊಮ್ಮಗ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್‌ರವರು ಮೂರನೇ ಖಲೀಫರಾಗಿ ಆರಿಸಲ್ಪಟ್ಟರು. 1982 ಜೂನ್ 9 ರಂದು ಅವರು ದಿವಂಗತರಾದಾಗ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್‌ರವರು ನಾಲ್ಕನೇ ಖಲೀಫರಾಗಿ ಚುನಾಯಿತರಾದರು. ಅವರ ನೇತೃತ್ವದಲ್ಲಿ ಇಂದು ಜಗತ್ತಿನೆಲ್ಲೆಡೆ ಇರುವ ಅಹ್ಮದಿಯರೆಲ್ಲ ಒಗ್ಗಟ್ಟಾಗಿ ಇಸ್ಲಾಂ ಧರ್ಮದ ಸೇವೆಗಾಗಿ ಅತ್ಯಂತವಾಗಿ ಪರಿಶ್ರಮಿಸುತ್ತಿದ್ದಾರೆ.

ಎಂಟು ನೂರು ವರ್ಷಗಳಿಗೆ ಮುಂಚೆ ಜೀವಿಸಿದ್ದ ಓರ್ವ ಸುಪ್ರಸಿದ್ಧ ವಲಿಯುಲ್ಲಾಹ್ ಆಗಿದ್ದ ಹಝ್ರತ್ ಇಮಾಂ ಯಹ್ಯಾಬಿನ್ ಅಖಿಬ್‌ರವರು ವಾಗ್ದತ್ತ ಮಸೀಹರ ಕಾಲದಲ್ಲಿ ಗೋಚರವಾಗುವ ಹಲವು ಕುರುಹುಗಳನ್ನು ವಿವರಿಸಿದ ಬಳಿಕ ತನ್ನ ಕವಿತೆಯಲ್ಲಿ ಈ ರೀತಿ ಬರೆದಿರುತ್ತಾರೆ:

"ಇಮಾಂ ಮಹ್‌ದಿ(ಅ) ಇಸ್ಲಾಮಿನ ಸತ್ಯತೆಯನ್ನೂ ಮುಹಮ್ಮದ್ ಪೈಗಂಬರ್(ಸ)ರವರ ಶ್ರೇಷ್ಠತೆಯನ್ನೂ ಸಾಬೀತುಪಡಿಸುತ್ತಾ 'ಬರಾಹೀನ್' ತರುವರು. ಅವರ ಪರಿಪೂರ್ಣತೆಯ ಕಾರಣವಾಗಿ ಅಲ್ಲಾಹನ ಒಂದು ಸೃಷ್ಟಿ ಸಮೂಹವೇ ಅವನ್ನು ಸ್ವೀಕರಿಸುವುದು. (ಶಂಸುಲ್ ಮಆರಿಫಿಲ್ ಕುಬ್ರಾ – ಸಂಪುಟ 1, ಪುಟ 304).

ಹಝ್ರತ್ ಅಹ್ಮದ್(ಅ) 'ಬರಾಹೀನೆ ಅಹ್ಮದಿಯಾ' ಎಂಬ ನಾಮದಲ್ಲಿ ಐದು ಸಂಪುಟಗಳಿಂದ ಕೂಡಿದ ಮಹದ್ಗ್ರಂಥ ರಚಿಸಿದ ಮೂಲಕ ಆ ಭವಿಷ್ಯ ನುಡಿ ಈಡೇರಿತು.

ಪ್ರಸ್ತುತ ಗ್ರಂಥದ ಬಗ್ಗೆ ಆ ಕಾಲದ ಪ್ರಸಿದ್ಧ ಧರ್ಮ ಪಂಡಿತನಾಗಿದ್ದ, ಆ ಬಳಿಕ ಹಝ್ರತ್ ಅಹ್ಮದ್ (ಅ)ರವರ ಬದ್ಧವೈರಿಯಾಗಿ ಬದಲಾದ ಮೌಲ್ವಿ ಮುಹಮ್ಮದ್ ಹುಸೈನ್ ಬಟಾಲವಿ ಹೀಗೆ ಬರೆದಿದ್ದಾರೆ:

"ನನ್ನ ಅಭಿಪ್ರಾಯದಲ್ಲಿ ಈ ಗ್ರಂಥ ಇಂದಿನ ಸ್ಥಿತಿಗತಿಗಳನ್ನು ಮುಂದಿರಿಸಿ ನೋಡುವಾಗ ಇಷ್ಟರ ವರೆಗೆ ಇಸ್ಲಾಮಿನಲ್ಲಿ ಪ್ರಕಟಗೊಂಡಿರುವ ಗ್ರಂಥಗಳಿಗೆ ಹೋಲಿಸಿದರೆ ಇದಕ್ಕೆ ಸಮಾನವಾದುದಿಲ್ಲ. ಭಾವಿ ಕಾಲದ ಬಗ್ಗೆ ಹೇಳಲು ಸಾಧ್ಯವಿಲ್ಲ. ಇದರ ಕರ್ತೃ ಹಿಂದಿನ ಮುಸ್ಲಿಮರಲ್ಲಿ ತುಲ್ಯತೆಯನ್ನು ಕಾಣಲು ಅಸಾಧ್ಯವಾದ ರೀತಿಯಲ್ಲಿ ಧನದಿಂದಲೂ ದೇಹದಿಂದಲೂ ಲೇಖನಿಯಿಂದಲೂ ನಾಲಗೆಯಿಂದಲೂ ಪ್ರವೃತ್ತಿಯಿಂದಲೂ ಜೀವಿತ ರೀತಿಯಿಂದಲೂ ಇಸ್ಲಾಮಿಗೆ ಸೇವೆ ಸಲ್ಲಿಸುವುದರಲ್ಲಿ ಸ್ಥೈರ್ಯವುಳ್ಳ ವ್ಯಕ್ತಿಯೆಂದು ಸಾಬೀತಾಗಿದೆ. ನನ್ನ ಈ ಮಾತು

ಗಳನ್ನು ಏಶ್ಯನ್ ಅತಿಶಯೋಕ್ತಿಯೆಂದು ಯಾರಾದರೂ ಭಾವಿಸುವುದಾದರೆ ಅವರು ಇಸ್ಲಾಮಿನ ಶತ್ರುಗಳನ್ನು, ಮುಖ್ಯವಾಗಿ ಆರ್ಯಸಮಾಜದವರನ್ನೂ ಬ್ರಹ್ಮಸಮಾಜ ದವರನ್ನೂ ಇಷ್ಟು ಶಕ್ತಿಯುತವಾಗಿ ಎದುರಿಸಿದ ಒಂದೇ ಒಂದು ಗ್ರಂಥವನ್ನಾದರೂ ನನಗೆ ತೋರಿಸಿಕೊಡಲಿ. ಇಸ್ಲಾಮಿಗಾಗಿ ಧನದಿಂದಲೂ ದೇಹದಿಂದಲೂ ಲೇಖನಿ ಯಿಂದಲೂ ನಾಲಗೆಯಿಂದಲೂ ಪ್ರವೃತ್ತಿಯಿಂದಲೂ ಸೇವೆಗೆಯ್ದು ಇಸ್ಲಾಮಿನ ವೈರಿಗಳಿಗೆ ಮತ್ತು ದೈವೀ ಪ್ರಕಾಶವನ್ನು ಅಲ್ಲಗಳೆಯುವವರಿಗೆ, ತನ್ನ ಮುಂದೆ ಬಂದು ದೃಷ್ಟಾಂತಗಳನ್ನು ವೀಕ್ಷಿಸಲಿಕ್ಕೆ ಇಷ್ಟು ಪೌರುಷ ದಿಂದ ಮತ್ತು ಧೈರ್ಯದಿಂದ ಪಂಥಾಹ್ವಾನ ನೀಡಿ ಅಂತಹ ದೃಷ್ಟಾಂತಗಳನ್ನು ಜನರಿಗೆ ತೋರಿಸಿಕೊಟ್ಟ ಎರಡು ನಾಲ್ಕು ಮಂದಿಗಳನ್ನು ನನಗೆ ತೋರಿಸಿಕೊಡಲಿ." (ಇಶಾಅತುಸ್ಸುನ್ನ- ಸಂಪುಟ 6, ಸಂಚಿಕೆ 7)

ಹಝ್ರತ್ ಇಮಾಂ ಯಹ್ಯಾಬಿನ್ ಅಖಬ್‌ರವರು ವಾಗ್ದತ್ತ ಮಸೀಹರ ಕಾಲ ನಂತರದ ಸ್ಥಿತಿಗಳ ಕುರಿತು ಕವಿತೆಯಲ್ಲಿ ಹೀಗೆ ಹೇಳಿದ್ದಾರೆ:

"(ಇಮಾಂ ಮಹ್‌ದಿಯ ಬಳಿಕ) ಅರಬಿ ವಂಶಜ ನಾದ ಓರ್ವ ವ್ಯಕ್ತಿ ಬಂದು ಆ ಮಹಾಪುರುಷರ ಕರ್ಮ ಯೋಜನೆಯನ್ನು ಜಾರಿಗೆ ತರುವರು" (ಶಂಸುಲ್ ಮಆರಿಫ್)

ಹಝ್ರತ್ ಅಹ್ಮದ್(ಅ)ರವರ ನಿಧನದ ಬಳಿಕ ಒಂದನೇ ಖಲೀಫರಾಗಿ ಚುನಾಯಿತರಾದ ಹಝ್ರತ್ ಮೌಲಾನ ಹಾಫಿಝ್ ಹಕೀಂ ನೂರುದ್ದೀನ್(ರ) ಓರ್ವ ಅರಬಿ ವಂಶಜರಾಗಿದ್ದರು. ಅವರ ಕುಟುಂಬ 32ನೇ ತಲೆಮಾರಿನಲ್ಲಿ ಹಝ್ರತ್ ಉಮರ್ ಫಾರೂಖ್‌ರೊಂದಿಗೆ ಸಂಬಂಧವನ್ನು ಹೊಂದುತ್ತದೆ.

ಹಿಜಿರ ವರ್ಷ 562ರಲ್ಲಿ ದಿವಂಗತರಾದ ಹಝ್ರತ್ ನಿಅ್‌ಮತುಲ್ಲಾ ವಲಿ(ರ.) ತನ್ನ ಒಂದು ಪಾರ್ಸಿ ಕವಿತೆಯಲ್ಲಿ ಈ ರೀತಿ ಬರೆದಿದ್ದಾರೆ:

1200 ವರ್ಷಗಳ ಬಳಿಕ ಲೋಕದಲ್ಲಿ ಅದ್ಭುತಕರ ಘಟನೆಗಳು ನಡೆಯುವುವೆಂದು ನನಗೆ ಈಗ ಕಾಣಲು ಸಾಧ್ಯವಾಗುತ್ತದೆ. ಅಹ್ಮದ್ ಎಂಬ ವ್ಯಕ್ತಿ ಪ್ರತ್ಯಕ್ಷ ರಾಗಿ ಮಹತ್ವದ ಆಧ್ಯಾತ್ಮಿಕ ಕ್ರಾಂತಿ ನಡೆಸುವುದಾಗಿ ನಾನು ದರ್ಶನದಲ್ಲಿ ಕಾಣುತ್ತೇನೆ. ಅವರ ಕಾಲಘಟ್ಟ ವಿಜಯಪ್ರದವಾಗಿ ಕೊನೆಗೊಂಡರೆ ಅದರ ನಂತರ ಅವರ ಪುತ್ರ ಅವರ ಮಹತ್ತಾದ ಸ್ಮರಣೆಯನ್ನು ನೆಲೆನಿಲ್ಲಿಸು ವರು.

ಯಾವ ವಿಶದೀಕರಣವೂ ಅವಶ್ಯವಿಲ್ಲದ ವಿಧದಲ್ಲಿ ಸೂರ್ಯ ಪ್ರಕಾಶದಂತೆ ಮುಹಮ್ಮದ್ ಪೈಗಂಬರ್(ಸ.) ನುಡಿದ ಎಲ್ಲ ಕುರುಹುಗಳು ಸಹ ಗೋಚರಿಸಿವೆ. ಆ ಮಹಾಪುರುಷರು ಹೇಳಿದ ಅದೇ ರೂಪದಲ್ಲಿ ಎಲ್ಲ ಗುಣ ಗಳ ಸಮೇತ ಇಮಾಂ ಮಹ್‌ದಿ ಪ್ರತ್ಯಕ್ಷರಾಗಿರುವರು.

"ಶುದ್ಧ ಹೃದಯವುಳ್ಳವರಿಗೆ ಅದ್ಭುತ ದೃಷ್ಟಾಂತ ಗಳು ಅನೇಕ ಅವಶ್ಯವಿಲ್ಲ. ಹೃದಯದಲ್ಲಿ ದೇವಭಕ್ತಿ ಯುಳ್ಳವರಿಗೆ ಒಂದೇ ಒಂದು ದೃಷ್ಟಾಂತ ಮಾತ್ರ ಸಾಕು."

—o—o—o—


# ಯುಗರಶ್ಮಿಗೆ ಚಂದಾದಾರರಾಗಿರಿ

## ವಾರ್ಷಿಕ ಚಂದಾ : ರೂ. 14-00

# ಅಹ್ಮದಿಯಾ ವಾರ್ತೆಗಳು

## ಮುಸ್ಲಿಂ ಟೆಲಿವಿಷನ್ ಅಹ್ಮದಿಯಾ (MTA) ದಿನಂಪ್ರತಿ 12 ಗಂಟೆಗಳ ಪ್ರಸಾರ

ಜಗತ್ತಿನಲ್ಲಿ ಮೊತ್ತಮೊದಲಿಗೆ ಟೆಲಿವಿಷನ್ ಮೂಲಕ ಅಹ್ಮದಿಯಾ ಸಂಘಟನೆಯು ಆಧ್ಯಾತ್ಮಿಕ, ಶೈಕ್ಷಣಿಕ ಕಾರ್ಯಕ್ರಮಗಳನ್ನು ಪ್ರಸಾರಗೊಳಿಸಲಾರಂಭಿಸಿದೆ. ಏಷ್ಯಾ ಮತ್ತು ಆಸ್ಟ್ರೇಲಿಯಾ ಖಂಡಗಳಲ್ಲಿ ದಿನಂಪ್ರತಿ 12 ಗಂಟೆಗಳ ಕಾಲ ಹಾಗೂ ಯುರೋಪಿನಲ್ಲಿ 3½ ಗಂಟೆಗಳ ಕಾಲ ಸ್ಥಳೀಯ ಆಯ್ದ ಭಾಷೆಗಳಲ್ಲಿ ಪವಿತ್ರ ಖುರ್‌ಆನಿನ ಭಾಷಾಂತರಗಳನ್ನೂ ವಿವಿಧ ಧಾರ್ಮಿಕ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳನ್ನೂ ಪ್ರಸಾರ ಮಾಡಲಾಗುತ್ತದೆ.

ಭಾರತದಲ್ಲಿ ಮಧ್ಯಾಹ್ನ 12 ಗಂಟೆಯಿಂದ ರಾತ್ರಿ 12 ಗಂಟೆಯ ವರೆಗೆ ಕಾರ್ಯಕ್ರಮದ ಪ್ರಯೋಜನವನ್ನು ಪಡೆಯಬಹುದಾಗಿದೆ.

ಪ್ರತಿ ಶುಕ್ರವಾರ ಭಾರತೀಯ ಸಮಯ ಸಂಜೆ 6 ಗಂಟೆಗೆ ಅಹ್ಮದಿಯಾ ಚತುರ್ಥ ಖಲೀಫ್ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರ ಜುಮುಅ ಖುತ್ಬವನ್ನು ವೀಕ್ಷಿಸಬಹುದಾಗಿದೆ. ಈ ಖುತ್ಬ ಕಾರ್ಯಕ್ರಮ ಐದು ಭೂಖಂಡಗಳಲ್ಲೂ ಪ್ರಸಾರಗೊಳ್ಳುತ್ತದೆ.

## ರೇಡಿಯೋ ಮೋಸ್ಕೊದಲ್ಲಿ ಖಲೀಫರ ಖುತ್ಬ

ಪ್ರತಿ ಶುಕ್ರವಾರ ಭಾರತೀಯ ಸಮಯ ಸಂಜೆ 6 ಗಂಟೆಗೆ ರೇಡಿಯೋ ಮೋಸ್ಕೋದಿಂದ ಅಹ್ಮದಿಯಾ ಜಮಾಅತಿನ ಖಲೀಫರಾದ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರ ಜುಮುಅ ಖುತ್ಬ ಬಿತ್ತರಿಸಲ್ಪಡುತ್ತದೆ. Short wave 25 Meter Band Digital Frequency 11695 KHZ ಮೂಲಕ ಖುತ್ಬವನ್ನು ಆಲಿಸಬಹುದಾಗಿದೆ.

## ಮಂಜೇಶ್ವರದಲ್ಲಿ ಮಸೀದಿ ಉದ್ಘಾಟನೆ

ಮಂಜೇಶ್ವರ: ಕುಂಜತ್ತೂರಿನಲ್ಲಿ ನೂತನವಾಗಿ ನಿರ್ಮಿಸಲಾದ ಅಹ್ಮದಿಯಾ ಮಸೀದಿಯನ್ನು ಕೇರಳ ರಾಜ್ಯ ಅಹ್ಮದಿಯಾ ಅಮೀರ್ ಜನಾಬ್ ಎ. ಪಿ. ಕುಞ್ಞಾಮು ಸಾಹೇಬರು ಕಳೆದ ಫೆಬ್ರುವರಿ 12ನೇ ಶುಕ್ರವಾರದಂದು ಮಧ್ಯಾಹ್ನ ಉದ್ಘಾಟಿಸಿದರು.

ಕೇರಳ ಅಹ್ಮದಿಯಾ ಚೀಫ್ ಮಿಶನರಿ ಮೌಲ್ವಿ ಮುಹಮ್ಮದ್ ಉಮರ್ ಸಾಹೇಬರು ಪ್ರಥಮ ಜುಮುಅ ಖುತ್ಬ ಮತ್ತು ಜುಮುಅ ನಮಾಝ್ ನಿರ್ವಹಿಸಿದರು.

ಅಪರಾಹ್ನ 3 ಗಂಟೆಗೆ ಅಮೀರ್ ಸಾಹೇಬರ ಅಧ್ಯಕ್ಷತೆಯಲ್ಲಿ ಉದ್ಘಾಟನ ಸಮ್ಮೇಳನ ಜರಗಿತು. ಎಂ. ಪಿ. ಮೂಸಾ ಸಾಹೇಬ್ ಖುರ್‌ಆನ್ ಪಠಿಸಿದರು. ಜಮಾಅತ್ ಪ್ರೆಸಿಡೆಂಟ್ ಮುಹಮ್ಮದ್ ಯೂಸುಫ್ ಸಾಹೇಬರು ಪ್ರಾಸ್ತಾವಿಕ ಭಾಷಣ ಮಾಡುತ್ತಾ ಮಂಜೇಶ್ವರದ ಅಹ್ಮದಿಯಾ ಚರಿತ್ರೆಯನ್ನು ವಿವರಿಸಿದರು. ಎಂ. ಪಿ. ಇಬ್ರಾಹಿಂ ಸಾಹೇಬ್ ಸ್ವಾಗತಿಸಿದರು.

ಕೇರಳ ನಾಇಬ್ ಅಮೀರ್ ಡಾ। ಮನ್‌ಸೂರ್ ಅಹ್ಮದ್ ಸಾಹೇಬ್, ಮೌಲ್ವಿ ಮುಹಮ್ಮದ್ ಉಮರ್ ಸಾಹೇಬ್, ಮೌಲ್ವಿ ಮುಹಮ್ಮದ್ ಅಬುಲ್ ವಫಾ

ಸಾಹೇಬ್, ಎನ್. ಅಬ್ದುರ್ರಹೀಂ ಸಾಹೇಬ್, ಬಶೀರ್ ಅಹ್ಮದ್ ಸಿದ್ದೀಖ್ ಸಾಹೇಬ್, ಎಂ. ಅಬ್ದುಲ್ ರಝಾಕ್ ಸಾಹೇಬ್ ಎಂಬಿವರು ಅಭಿನಂದನ ಭಾಷಣ ಮಾಡಿದರು.

ಜುಮುಅ ನಮಾಝ್ ಬಳಿಕ ಹಳೆಯಂಗಡಿ ನಿವಾಸಿ ಕೆ. ಎಂ ಆಲಿ ಎಂಬವರು ಬೈಅತ್ ಪ್ರತಿಜ್ಞೆ ಮಾಡಿ ಅಹ್ಮದಿಯಾ ಜಮಾಅತಿಗೆ ಸೇರಿದರು.

ಮಂಜೇಶ್ವರದಲ್ಲಿ ಪ್ರಥಮ ಅಹ್ಮದಿ ದಿವಂಗತ ಜನಾಬ್ ಎಂ. ಅಬ್ದುಲ್ ರಶೀದ್ ಸಾಹೇಬ್ ಮಸೀದಿ ನಿರ್ಮಾಣಕ್ಕೆ ನಿವೇಶನವನ್ನು ವಕ್ಫ್ ಮಾಡಿದ್ದರು. ಮಸೀದಿ ನಿರ್ಮಾಣದ ಎಲ್ಲ ವೆಚ್ಚವನ್ನು ಎಂ. ಪಿ. ಇಬ್ರಾಹಿಂ ಸಾಹೇಬರು ವಹಿಸಿರುವರು.

# ಮಂಜೇಶ್ವರದಲ್ಲಿ ಸಾರ್ವಜನಿಕ ಸಭೆ

ಮಂಜೇಶ್ವರ: ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಏರ್ಪಡಿಸಿದ ಎರಡು ದಿನಗಳ ಬಹಿರಂಗ ಸಭೆ ಕುಂಜತ್ತೂರಿನಲ್ಲಿ ಫೆಬ್ರವರಿ 20 ಮತ್ತು 21ರಂದು ಜರಗಿತು. ಮೊದಲನೆಯ ದಿನ "ಕೋಮು ಸೌಹಾರ್ದ" ಹಾಗೂ ಎರಡನೆಯ ದಿನ "ಅಹ್ಮದಿಯಾ ವಿಶ್ವಾಸಾದರ್ಶಗಳು" ಎಂಬೀ ವಿಷಯಗಳ ಕುರಿತು ಅಹ್ಮದಿಯಾ ವಿದ್ವಾಂಸರು ಭಾಷಣ ಮಾಡಿದರು. ಎರಡು ದಿನಗಳಲ್ಲೂ ಊರ ಜನರು ಬಹು ಉತ್ಸಾಹದಿಂದ ಪಾಲ್ಗೊಂಡು ಭಾಷಣಗಳನ್ನು ಆಲಿಸಿದರು.

ಪ್ರಥಮ ದಿನದ ಸಭೆಯ ಅಧ್ಯಕ್ಷತೆಯನ್ನು ಜಮಾಅತ್ ಪ್ರೆಸಿಡೆಂಟ್ ಮುಹಮ್ಮದ್ ಯೂಸುಫ್ ಸಾಹೇಬರು ವಹಿಸಿದ್ದರು. ಎಂ. ಅಬ್ದುಲ್ ಲತೀಫ್ ಸಾಹೇಬ್ ಖುರ್‌ಆನ್ ಪಠಿಸಿದರು. ಎಂ. ಪಿ. ಇಬ್ರಾಹಿಂ ಸಾಹೇಬರು ಸ್ವಾಗತ ಭಾಷಣದಲ್ಲಿ ಅಹ್ಮದಿಯಾ ಜಮಾಅತಿನ ಪರಿಚಯ ಮಾಡಿಕೊಟ್ಟರು. ಸಭಾಧ್ಯಕ್ಷರು ಕೋಮು ಸೌಹಾರ್ದದ ಪ್ರಾಧಾನ್ಯವನ್ನು ವಿವರಿಸುತ್ತಾ, ಆ ಬಗ್ಗೆ ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಅಹ್ಮದ್(ಅ)ರವರ ಬೋಧನೆಗಳನ್ನು ನೆನಪಿಸಿಕೊಟ್ಟರು. ಅನಂತರ ಎಂ. ಅಬ್ದುಲ್ ರಹ್ಮಾನ್ ಸಾಹೇಬ್ ಭಾಷಣ ಮಾಡುತ್ತಾ ಈಗಿನ ಕಾಲದಲ್ಲಿ ಸಂಭವಿಸುತ್ತಿರುವ ಕೋಮು ಗಲಭೆಗಳಿಗೆ ಧಾರ್ಮಿಕ ಜ್ಞಾನದ ಕೊರತೆಯೇ ಕಾರಣ ಎಂದು ನಿರೂಪಿಸಿ ಯಾವುದೇ ಧರ್ಮ ಗಲಭೆಗೆ ಪ್ರೇರಣೆ ನೀಡುವುದಿಲ್ಲ ಎಂದು ವಿವರಿಸಿದರು. ಆ ಬಳಿಕ ಭಾಷಣ ಮಾಡಿದ ಮೌಲ್ವಿ ಮುಹಮ್ಮದ್ ಯೂಸುಫ್ ಸಾಹೇಬರು, ಆರಾಧನಾಲಯಗಳನ್ನೂ ಧರ್ಮಗ್ರಂಥಗಳನ್ನೂ ಧರ್ಮ ಸ್ಥಾಪಕರನ್ನೂ ಪರಸ್ಪರ ಗೌರವದಿಂದ ವೀಕ್ಷಿಸಿದರೆ ಮಾತ್ರವೇ ಜಗತ್ತಿನಲ್ಲಿ ಶಾಂತಿ–ಸೌಹಾರ್ದದ ವಾತಾವರಣ ಮೂಡುವುದೆಂದು ಹೇಳಿದರು.

ದ್ವಿತೀಯ ದಿನದ ಸಭೆಯ ಅಧ್ಯಕ್ಷತೆಯನ್ನು ಎಂ. ಪಿ. ಇಬ್ರಾಹಿಂ ಸಾಹೇಬ್ ವಹಿಸಿದರು. ಖಾಯಿದ್ ಖುರ್‌ಆನ್ ಪಾರಾಯಣ ಮಾಡಿದರು. ಕಟ್ಟುಕಥೆಗಳ ವರ್ತುಲದಲ್ಲಿ, ಕಂದಾಚಾರದ ಕಪಿಮುಷ್ಟಿಯಲ್ಲಿ, ವಿರೋಧಾಭಾಸದ ವಿಶ್ವಾಸಗಳಲ್ಲಿ ತೊಳಲಾಡುತ್ತಿರುವ ಮುಸ್ಲಿಂ ಜನಾಂಗಕ್ಕೆ ಯಥಾರ್ಥ ಇಸ್ಲಾಂ ಧರ್ಮವನ್ನು ಅಹ್ಮದಿಯಾ ಜಮಾಅತಿನ ಮೂಲಕ ಮಾತ್ರವೇ ದರ್ಶಿಸಲು ಸಾಧ್ಯವೆಂದು ಸಭಾಧ್ಯಕ್ಷರು ವಿವರಿಸಿದರು. ಮೌಲ್ವಿ ಮುಹಮ್ಮದ್ ಇಸ್ಮಾಈಲ್ ಸಾಹೇಬ್ ತನ್ನ ಭಾಷಣದಲ್ಲಿ ಪ್ರವಾದಿ ಈಸಾ(ಅ)ರ ಮರಣದ ಕುರಿತು ವಿವರಣೆ ನೀಡಿದರು. ಮೌಲ್ವಿ ಮುಹಮ್ಮದ್ ಯೂಸುಫ್ ಸಾಹೇಬ್ ಇಮಾಂ ಮಹ್‌ದಿ (ಅ)ರ ಮರಣದ ಕುರಿತು ವಿವರಣೆ ನೀಡಿದರು. ಮೌಲ್ವಿ ಮುಹಮ್ಮದ್ ಯೂಸುಫ್ ಸಾಹೇಬ್ ಇಮಾಂ ಮಹ್‌ದಿ(ಅ)ರ ಆಗಮನದ ಕುರಿತು ವಿವರಿಸಿ ಹೇಳಿದರು. ಖಾಯಿದ್ ಕೃತಜ್ಞತೆ ಸಲ್ಲಿಸಿದರು.

ಈ ಬಹಿರಂಗ ಸಭೆಯ ಕನ್ವೀನರ್ ಆಗಿ ಪ್ರಚಾರ ಕಾರ್ಯದರ್ಶಿ ಎಂ. ಪಿ. ಅಬ್ದುಲ್‌ಖಾದರ್ ಸಾಹೇಬ್ ಕಾರ್ಯ ನಿರ್ವಹಿಸಿದರು.

ಈ ಸಭೆಯೊಂದಿಗೆ ಅಹ್ಮದಿಯಾ ಬುಕ್ ಸ್ಟಾಲಿನ ಏರ್ಪಾಡು ಮಾಡಲಾಗಿತ್ತು. ಇದರ ಕಾರ್ಯ ನಿರ್ವಹಣವನ್ನು ಮುಹಮ್ಮದ್ ರಫೀಕ್ ಸಾಹೇಬ್ ಮತ್ತು ರಶೀದ್ ಅಹ್ಮದ್ ಸಿದ್ದೀಖ್ ಸಾಹೇಬ್ ವಹಿಸಿದರು.

(ವರದಿ: **ಎಂ. ಪಿ. ಮೂಸಾ,** ಖಾಯಿದ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ)

ಬೆಂಗಳೂರಿನಲ್ಲಿ

# ದಕ್ಷಿಣ ಭಾರತ ಅಹ್ಮದಿಯಾ ಸಮ್ಮೇಳನ

ದಕ್ಷಿಣ ಭಾರತ ಪ್ರಥಮ ಅಹ್ಮದಿಯಾ ಮುಸ್ಲಿಂ ಸಮ್ಮೇಳನ ಒಕ್ಟೋಬರ್ 31 ಮತ್ತು ನವೆಂಬರ್ 1ರಂದು ಬೆಂಗಳೂರಿನ ಪುರಭವನದಲ್ಲಿ ಸಮಾವೇಶ ಗೊಂಡಿತು. ಕರ್ನಾಟಕ, ಆಂಧ್ರ, ತಮಿಳುನಾಡು, ಕೇರಳ. ಎಂಬೀ ನಾಲ್ಕು ರಾಜ್ಯಗಳಿಂದ ಪ್ರತಿನಿಧಿಗಳು ಭಾಗವಹಿಸಿದ ಈ ಸಮ್ಮೇಳನಕ್ಕೆ, ಅಹ್ಮದಿಯಾ ಸಂಘಟನೆಯ ಸ್ಥಾಪಕರ ಪೌತ್ರ ಹಾಗೂ ಭಾರತದ ಅಹ್ಮದಿಯಾ ಪ್ರಧಾನ ಕಾರ್ಯದರ್ಶಿ ಮಿರ್ಝಾ ವಸೀಂ ಅಹ್ಮದ್ ಸಾಹೇಬರು ಮುಖ್ಯಾತಿಥಿಯಾಗಿ ಆಗಮಿಸಿದ್ದರು.

ಪ್ರಥಮ ದಿನದ ಸಮ್ಮೇಳನದ ಅಧ್ಯಕ್ಷತೆಯನ್ನು ಉಸ್ಮಾನಿಯಾ ವಿಶ್ವವಿದ್ಯಾಲಯದ ಖಗೋಳಶಾಸ್ತ್ರ ವಿಭಾಗದ ಮಾಜಿ ಮುಖ್ಯಸ್ಥ ಹಾಗೂ ಆಂಧ್ರ ಅಹ್ಮದಿಯಾ ಜಮಾಅತಿನ ಅಮೀರ್ ಆದ ಡಾ। ಹಾಫಿಝ್ ಸಾಲಿಹ್ ಮುಹಮ್ಮದ್ ಅಲ್ಲಾದ್ದೀನ್ ಸಾಹೇಬ್ ವಹಿಸಿದ್ದರು.

ಮಾನವ ಜೀವಿತದ ಎಲ್ಲ ರಂಗಗಳಲ್ಲೂ ಮುಹಮ್ಮದ್ ಪೈಗಂಬರ್(ಸ) ಅತ್ಯುತ್ತಮ ಮಾದರಿ ಪುರುಷರಾಗಿದ್ದರೆಂದೂ ಕ್ಷಮೆ, ಸಹನೆ, ಸಹಿಷ್ಣುತೆ, ಔದಾರ್ಯ ಇವು ಪೈಗಂಬರರ ಸ್ವಭಾವವಾಗಿತ್ತೆಂದೂ ಪೈಗಂಬರರ ಆದರ್ಶ ಜೀವನದ ಅನುಕರಣೆ ಇಂದಿನ ಮುಸ್ಲಿಮರ ಆದ್ಯ ಕರ್ತವ್ಯವಾಗಿರಬೇಕೆಂದೂ ಆ ಮೂಲಕ ಮನುಷ್ಯ ಕುಲದ ಸಕಲ ಸಮಸ್ಯೆಗಳಿಗೂ ಪರಿಹಾರ ಕಂಡುಕೊಳ್ಳಲು ಸಾಧ್ಯವೆಂದೂ ಮುಖ್ಯಾತಿಥಿ ಮಿರ್ಝಾ ವಸೀಂ ಅಹ್ಮದ್ ಸಾಹೇಬ್ ಹೇಳಿದರು.

ಮೌಲ್ವಿ ಮುಹಮ್ಮದ್ ಉಮರ್ ಎಚ್. ಎ. (ಕೇರಳ), ಮೌಲ್ವಿ ಮುಹಮ್ಮದ್ ಇನಾಂ ಗೋರಿ (ನಾಝಿರ್ ದಅ್‌ವತೆ ತಬ್ಲೀಗ್, ಖಾದಿಯಾನ್), ಮೌಲ್ವಿ ಸುಲ್ತಾನ್ ಅಹ್ಮದ್ (ಹೈದರಾಬಾದ್), ಕರೀಮುಲ್ಲಾಹ್ ನೌಜವಾನ್ (ಮದ್ರಾಸ್), ಮುಹಮ್ಮದ್ ರಫಅತುಲ್ಲಾಹ್ ಗೋರಿ (ಯಾದಗಿರಿ), ಮೌಲ್ವಿ ಮುಹಮ್ಮದ್ ಇಸ್ಮಾಈಲ್ ಎಚ್. ಎ. (ಕೇರಳ) ಎಂಬಿವರು ಮುಹಮ್ಮದ್ ಪೈಗಂಬರರ ಜೀವಿತೋಪದೇಶಗಳನ್ನು ವಿವರಿಸುತ್ತಾ ಭಾಷಣ ಮಾಡಿದರು.

### ಪಾಕಿಸ್ಥಾನದಲ್ಲಿ ಮಾನವ ಹಕ್ಕು ದಮನವನ್ನು ಕೊನೆಗೊಳಿಸಬೇಕು: ಠರಾವು

ಪಾಕಿಸ್ಥಾನದಲ್ಲಿ ಅಹ್ಮದೀ ಮುಸ್ಲಿಮರಿಗೆ ಮಾನವ ಹಕ್ಕುಗಳನ್ನು ನಿರಾಕರಿಸುವ ಅಧ್ಯಾದೇಶವನ್ನೂ ಸಂವಿಧಾನ ತಿದ್ದುಪಡಿಯನ್ನೂ ರದ್ದುಪಡಿಸಬೇಕೆಂದು ಪಾಕ್ ಪ್ರಧಾನಿ ಬೆನಝೀರ್ ಭುಟ್ಟೋರನ್ನು ಕೇಳಿಕೊಳ್ಳುವ ಗೊತ್ತುವಳಿಯನ್ನು ಸಮ್ಮೇಳನವು ಅಂಗೀಕರಿಸಿತು. ಗೊತ್ತುವಳಿಯನ್ನು ಕರ್ನಾಟಕ ಅಹ್ಮದಿಯಾ ಅಮೀರ್ ಮುಹಮ್ಮದ್ ಶಫೀಯುಲ್ಲಾಹ್ ಸಾಹೇಬ್ ಮಂಡಿಸಿದರು. ಕೇರಳ ಅಮೀರ್ ಎ. ಪಿ. ಕುಞ್ಞಾಮು ಸಾಹೇಬ್ ಅನುಮೋದಿಸಿದರು.

ಮನಸ್ಸಾಕ್ಷಿಗೆ ಅನುಗುಣವಾದ ಧರ್ಮವಿಶ್ವಾಸವನ್ನು ಕೈಗೊಂಡರೆ ಮರಣ ದಂಡನೆಯನ್ನು ಕೂಡ ನೀಡುವಂತಹ ಕಿರಾತ ನಿಯಮಗಳಿಗೆ ಅಂಗೀಕಾರ ನೀಡುವ ಪಾಕ್ ಸುಪ್ರೀಂ ಕೋರ್ಟಿನ ತೀರ್ಪು ಪಾಕಿಸ್ಥಾನದಲ್ಲಿ ಪ್ರಜಾಪ್ರಭುತ್ವಕ್ಕೆ ಬದಲು ಮುಲ್ಲಾ ಆಡಳಿತೆಗೆ ಕುಮ್ಮಕ್ಕು ನೀಡುತ್ತದೆಂದು ಸಮ್ಮೇಳನ ಬೊಟ್ಟು ಮಾಡಿತು.

## ಮಾನವತ್ವ ದಿನಾಚರಣೆ ಸಮ್ಮೇಳನ

ದ್ವಿತೀಯ ದಿನ ಜರಗಿದ ಮಾನವತ್ವ ದಿನಾಚರಣೆ ಸಮ್ಮೇಳನವನ್ನು ಮಾಜಿ ಉಪರಾಷ್ಟ್ರಪತಿ ಬಿ. ಡಿ. ಜತ್ತಿಯವರು ಉದ್ಘಾಟಿಸುತ್ತಾ, ಎಲ್ಲ ಧರ್ಮಗಳೂ ಒಬ್ಬ ದೇವನ ಕುರಿತೇ ಪ್ರತಿಪಾದಿಸುತ್ತವೆಂದೂ ಹಾಗಿರುವಾಗ ವಿವಿಧ ಧರ್ಮೀಯರು ಪರಸ್ಪರ ಕಚ್ಚಾಡುವ ಅಗತ್ಯವಿಲ್ಲವೆಂದೂ ಹೇಳಿದರು. ಮಾನವ ಹಕ್ಕುಗಳ ಕುರಿತು ಎಲ್ಲರೂ ಹೇಳುತ್ತಾರೆ ಆದರೆ ಮಾನವ ಕರ್ತವ್ಯಗಳ ಬಗ್ಗೆ ಯಾರೂ ಉಸಿರೆತ್ತುವುದಿಲ್ಲ. ಮನುಷ್ಯನ ಕರ್ತವ್ಯಗಳ

ಕುರಿತು ಧರ್ಮಗಳು ಬೋಧಿಸುತ್ತವೆ. ದೇವರು ಮತ್ತು ದೇವರ ಸೃಷ್ಟಿಗಳೊಡನೆ ಮನುಷ್ಯನ ಹೊಣೆಗಾರಿಕೆ ಏನೆಂದು ಪ್ರವಾದಿಗಳು ಒತ್ತಿ ಹೇಳಿದ್ದಾರೆ. ರಾಜಕೀಯ ಧುರೀಣರು ಸಹ ಈ ಬಗ್ಗೆ ಗಮನಿಸಿದರೆ ಜಗತ್ತಿನಲ್ಲಿ ಶಾಂತಿ ನೆಲೆಯೂರುವುದು. ಅಹ್ಮದಿಯಾ ಸಂಘಟನೆ ಮಾನವ ಪ್ರೀತಿಯ ಮಾರ್ಗವನ್ನು ಕೈಗೊಂಡಿದೆಯೆಂದು ನನಗೆ ಮನವರಿಕೆಯಾಗಿದೆ. ಎಲ್ಲ ಪ್ರವಾದಿಗಳನ್ನು ಗೌರವಿಸಿ ಅಂಗೀಕರಿಸುವ ಅವರ ಕಾರ್ಯಶೈಲಿ ಶ್ಲಾಘನೀಯ. ಈ ಸಹಿಷ್ಣುತೆಯ ಸ್ವಭಾವವನ್ನು ನಾವು ಮೈಗೂಡಿಸಬೇಕು. ಪರಸ್ಪರ ಸಹಕರಿಸಬೇಕು. ಅನ್ಯೋನ್ಯ ದ್ವೇಷಿಸಬಾರದು. ಇದನ್ನೇ ಎಲ್ಲ ಧರ್ಮಗಳು ಕಲಿಸುತ್ತವೆ. ಈ ಮಾರ್ಗದಿಂದ ಮಾತ್ರವೇ ಮಾನವೀಯತೆ ಅಥವಾ ಮಾನವ ಸ್ನೇಹ ಬೆಳೆಯಲು ಸಾಧ್ಯ ಎಂದು ಜತ್ತಿ ಹೇಳಿದರು.

ಮಿರ್ಝಾ ವಸೀಂ ಅಹ್ಮದ್ ಸಾಹೇಬ್ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಮಾನವ ಸ್ನೇಹ ಧರ್ಮದ ಅಡಿಪಾಯವೆಂದೂ ಮಾನವ ಸ್ನೇಹದಲ್ಲಿ ಅಧಿಷ್ಠಿತವಾದ ಉತ್ಕೃಷ್ಟ ಅಧ್ಯಾಪನಗಳಿಂದ ವ್ಯತಿಕ್ರಮಿಸುವುದು ಲೋಕಶಾಂತಿಗೆ ಹಾನಿಕರವೆಂದೂ ಅವರು ನುಡಿದರು.

ಶ್ರೀ ಶ್ರೀ ರಂಗಪ್ರಿಯ ಸ್ವಾಮೀಜಿ, ಶ್ರೀ ಇಂದ್ರಮಲ್ ಕೊಠಾರಿ, ಫಾದರ್ ಎಂ. ಜೇಕಬ್, ಮೌಲ್ವಿ ಮುಹಮ್ಮದ್ ಉಮರ್, ಪ್ರೊ। ಬಿ. ವೀರಪ್ರಕಾಶಪ್ಪ ಮತ್ತು ಶ್ರೀ ಗ್ಯಾನಿ ಮಹಲ್ ಸಿಂಘ್ ಅನುಕ್ರಮವಾಗಿ ಹಿಂದೂ, ಜೈನ, ಕ್ರೈಸ್ತ, ಇಸ್ಲಾಂ, ವೈಶ್ಯ, ಸಿಖ್ ಧರ್ಮಗಳ ಬಗ್ಗೆ ಮಾತನಾಡಿದರು.

### ರಕ್ತದಾನ

ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಅಹ್ಮದಿಯಾ ಸಂಘಟನೆಯ ವತಿಯಿಂದ ಏರ್ಪಡಿಸಿದ ರಕ್ತದಾನ ಕಾರ್ಯಕ್ರಮವನ್ನು ಸಹ ಮಾಜಿ ಉಪರಾಷ್ಟ್ರಪತಿ ಬಿ. ಡಿ. ಜತ್ತಿಯವರು ಮಾನವತ್ವ ದಿನಾಚರಣೆ ಸಮ್ಮೇಳನದಲ್ಲೇ ಉದ್ಘಾಟಿಸಿದರು. ಜವಾದ್ ಅಹ್ಮದ್ ಸಾಹೇಬರ ನೇತೃತ್ವದಲ್ಲಿ ಏರ್ಪಡಿಸಿದ ರಕ್ತದಾನ ಕಾರ್ಯಕ್ರಮದಲ್ಲಿ 38ನೇ ಕರ್ನಾಟಕ ರಾಜ್ಯೋತ್ಸವದ ಸ್ಮರಣಾರ್ಥ 38 ಬಾಟ್ಲಿ ರಕ್ತವನ್ನು ಸಂಗ್ರಹಿಸಲಾಯಿತು. ಪ್ರಥಮವಾಗಿ ಸಂಗ್ರಹಿಸಿದ ಒಂದು ಬಾಟ್ಲಿ ರಕ್ತವನ್ನು 'ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿ' ಬೆಂಗಳೂರು ಚಾಪ್ಟರ್ ಪ್ರೆಸಿಡೆಂಟ್ ಕೆ. ಎಲ್. ನಂಜಪ್ಪನವರಿಗೆ ಮಿರ್ಝಾ ವಸೀಂ ಅಹ್ಮದ್ ಸಾಹೇಬ್ ಹಸ್ತಾಂತರಿಸಿದರು.

ಮನುಷ್ಯ ಜೀವನದ ಅತಿ ಪ್ರಧಾನ ಮತ್ತು ಪ್ರೀತಿಯ ಘಟಕವು ರಕ್ತವೆಂದೂ ರಾಷ್ಟ್ರಕ್ಕೆ ಮತ್ತು ಮಾನವಸ್ನೇಹಕ್ಕೆ ಬೇಕಾಗಿ ಆತ್ಮಸಮರ್ಪಣೆಯ ಪ್ರತೀಕ ರಕ್ತದಾನವಾಗಿದೆಯೆಂದೂ ಮಿರ್ಝಾ ವಸೀಂ ಅಹ್ಮದ್ ಸಾಹೇಬ್ ನುಡಿದರು.

## "ಇಸ್ಲಾಂ ಧರ್ಮ ತತ್ವಜ್ಞಾನ" ಕೃತಿ ಪ್ರಕಾಶನ

ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್‌ರವರು ಉರ್ದುವಿನಲ್ಲಿ ರಚಿಸಿದ "ಇಸ್ಲಾಮೀ ಉಸೂಲ್ ಕಿ ಫಲಾಸಫಿ" ಎಂಬ ಕೃತಿಯ ಕನ್ನಡಾನುವಾದ "ಇಸ್ಲಾಂ ಧರ್ಮ ತತ್ವಜ್ಞಾನ" ಪ್ರಕಾಶನಗೊಂಡಿದೆ.

ಮಂಜೇಶ್ವರದ ಅಹ್ಮದಿಯಾ ಮಸೀದಿಯಲ್ಲಿ ಎಪ್ರಿಲ್ 4ರಂದು ಜರಗಿದ ಸಮಾರಂಭದಲ್ಲಿ ಜಮಾಅತ್ ಅಧ್ಯಕ್ಷ ಮುಹಮ್ಮದ್ ಯೂಸುಫ್ ಸಾಹೇಬ್ ಕೃತಿಯನ್ನು ಬಿಡುಗಡೆಗೊಳಿಸಿದರು.

ಈ ವಿಶಿಷ್ಟ ಗ್ರಂಥದ ಅನುವಾದ ಅನೇಕ ಭಾರತೀಯ ಭಾಷೆಗಳಲ್ಲೂ ಜಗತ್ತಿನ ವಿವಿಧ ಭಾಷೆಗಳಲ್ಲೂ ಅನುವಾದಿಸಲ್ಪಟ್ಟಿದೆಯೆಂದೂ ಇದರ ಇಂಗ್ಲಿಷ್ ಭಾಷಾಂತರವಾದ "The Teachings of Islam" ನ್ನು ಕರ್ನಾಟಕ ವಿಶ್ವವಿದ್ಯಾಲಯ 1973-74ರ ಸಾಲಿನಲ್ಲಿ **B. A.** ತರಗತಿಗಾಗಿ ಧಾರ್ಮಿಕ ವಿಷಯಗಳ ಪೈಕಿ ಇಸ್ಲಾಮಿನ ಅಧ್ಯಯನಕ್ಕೆ ಆಯ್ಕೆ ಮಾಡಿತ್ತೆಂದೂ ಅಧ್ಯಕ್ಷರು ಹೇಳಿದರು.

—o—o—

# ಹಳೆಯಂಗಡಿಯಲ್ಲಿ ಅಹ್ಮದಿಯರಿಗೆ ಪೀಡನೆ

1993 ಫೆಬ್ರುವರಿ ಮಾಸದಲ್ಲಿ ಹಳೆಯಂಗಡಿ ನಿವಾಸಿ ಕೆ. ಎಂ. ಆಲಿ ಸಾಹೇಬರು ಅಹ್ಮದಿಯಾ ಜಮಾಅತಿಗೆ ಸೇರಿದ ವಿವರ ತಿಳಿದ ಅಲ್ಲಿಯ ಹೊಸಂಗಡಿ ಕದಿಕೆ ಸುನ್ನಿ ಜಮಾಅತ್ ಅವರಿಗೆ ಸಾಮಾಜಿಕ ಬಹಿಷ್ಕಾರವನ್ನು ವಿಧಿಸಿ ಹಲವು ತರದಲ್ಲಿ ಕಿರುಕುಳ ಕೊಡಲು ಆರಂಭಿಸಿದರು.

ಕಳೆದ ಸಪ್ಟೆಂಬರ್ ಮಾಸದಲ್ಲಿ ಅವರು ಮೂರು ದಿನಗಳ 'ಧಾರ್ಮಿಕ ಪ್ರವಚನ' ಕಾರ್ಯಕ್ರಮವನ್ನಿಟ್ಟಿದ್ದರು. ಆ ಕಾರ್ಯಕ್ರಮದಲ್ಲಿ ಭಾಷಣ ಮಾಡಿದ ಧರ್ಮ ಪಂಡಿತರು ಅಹ್ಮದಿಯಾ ಜಮಾಅತ್ ಮತ್ತು ಅದರ ಸ್ಥಾಪಕರ ವಿರುದ್ಧ ಅಲ್ಲಸಲ್ಲದ ಆರೋಪಗಳನ್ನು ಹೊರಿಸಿ ಅವಾಚ್ಯ ಮಾತುಗಳನ್ನು ಪ್ರಯೋಗಿಸಿ ಅಹ್ಮದೀ ಮುಸ್ಲಿಮರ ವಿರುದ್ಧ ಅಹ್ಮದಿಯೇತರ ಮುಸ್ಲಿಮರು ರೊಚ್ಚಿಗೇಳುವಂತೆ ಮಾಡಿದ್ದರು.

ಅಹ್ಮದಿಯಾ ಜಮಾಅತಿನ ವಿರುದ್ಧ ಅವರು ಹೊರಿಸಿದ ಆರೋಪಗಳು ಸರಿಯಲ್ಲವೆಂದು ಸಾಬೀತು ಪಡಿಸುವರೆ ಮತ್ತು ಅಹ್ಮದಿಯಾ ಜಮಾಅತಿನ ನಿಜವಾದ ವಿಶ್ವಾಸಾಚಾರಗಳು ಮತ್ತು ಧ್ಯೇಯಧೋರಣೆಗಳು ಯಾವ್ಯಾವೆಂದು ಸ್ಪಷ್ಟಪಡಿಸಲಿಕ್ಕೆ ನವೆಂಬರ್ 27 ಮತ್ತು 28ರಂದು ಮಂಗಳೂರು ಅಹ್ಮದಿಯಾ ಜಮಾಅತಿನ ವತಿಯಿಂದ ಕದಿಕೆ ಗ್ರಾಮದ ಕೆ. ಎಂ. ಆಲಿ ಸಾಹೇಬರ ಮನೆ (ತಂಗಳ ಮನೆ) ವಠಾರದಲ್ಲಿ ಸಾರ್ವಜನಿಕ ಸಭೆಯನ್ನು ಏರ್ಪಡಿಸಲಾಗಿತ್ತು.

ಸಭೆಯಲ್ಲಿ ಭಾಷಣ ಮಾಡಲು ಕೇರಳ ಅಮೀರ್ ಎ. ಪಿ. ಕುಞ್ಞಾಮು ಸಾಹೇಬ್, ಮೌಲ್ವಿ ಮುಹಮ್ಮದ್ ಉಮರ್ ಸಾಹೇಬ್, ಮೌಲ್ವಿ ಮುಹಮ್ಮದ್ ಅಬುಲ್ ವಫಾ ಸಾಹೇಬ್, ಮೌಲ್ವಿ ಮಹ್ಮೂದ್ ಅಹ್ಮದ್ ಸಾಹೇಬ್ ಎಂಬಿವರು ಆಗಮಿಸಿದ್ದರು.

ಕೆಲವು ದಿನಗಳಿಗೆ ಮುಂಚಿತವಾಗಿಯೇ ಈ ಸಭೆಯಲ್ಲಿ ಧ್ವನಿವರ್ಧಕವನ್ನು ಉಪಯೋಗಿಸಲು ಪೊಲೀಸ್ ಅಧಿಕಾರಿಗಳಿಂದ ಪೂರ್ವಾನುಮತಿಯನ್ನು ಪಡೆಯಲಾಗಿತ್ತು. ಅಲ್ಲಿಯ ಧರ್ಮಾಂಧ ಮುಸ್ಲಿಮರ ಒತ್ತಡದಿಂದ, ಸಭೆ ಜರಗುವ ಕೆಲವೇ ತಾಸುಗಳಿಗೆ ಮುಂಚೆ, ಧ್ವನಿವರ್ಧಕದ ಅನುಮತಿಯನ್ನು ರದ್ದುಪಡಿಸಲಾಗಿದೆಯೆಂದು ತಿಳಿದು ಬಂತು. ಹಾಗೆ ಧ್ವನಿವರ್ಧಕರಹಿತವಾಗಿ ಅಸರ್ ನಮಾಝಿನ್ ಬಳಿಕ ಕಾರ್ಯಕ್ರಮ ಆರಂಭವಾಯಿತು. ಮಂಗಳೂರು, ಬಜ್ಪೆ, ವಿಟ್ಲ, ಪುತ್ತೂರು, ಉಳ್ಳಾಲ, ಮಂಜೇಶ್ವರ ಎಂಬೆಡೆಗಳಿಂದಲೂ ಮಡಿಕೇರಿ, ಮೊಗ್ರಾಲ್, ಪಯಂಗಾಡಿ ಎಂಬೀ ಜಮಾಅತುಗಳಿಂದಲೂ ಅಹ್ಮದೀಯರು ಸಭೆಯಲ್ಲಿ ಭಾಗವಹಿಸಲು ಆಗಮಿಸಿದ್ದರು. ಇದನ್ನು ಕಂಡು ವಿರೋಧಿಗಳಿಗೆ ಸಹಿಸಲಾಗಲಿಲ್ಲ. ಅವರು ಹಲವು ವಿಧದಲ್ಲಿ ಕಿರುಕುಳಕೊಡಲು ತೊಡಗಿದರು. ಆಲಿ ಸಾಹೇಬರು ಉಪಯೋಗಿಸುವ ಎರಡು ಬಾವಿಗಳಿಗೆ ಅವರು ಸೀಮೆಎಣ್ಣೆ ಸುರಿದರು. ಕೊಳವೆಬಾವಿಯಿಂದ ನೀರು ತೆಗೆಯುವಾಗಲೂ ಅವರು ಉಪದ್ರ ಕೊಟ್ಟರು.

ಎರಡನೆಯ ದಿನ ಬೆಳಿಗ್ಗೆ 10 ಘಂಟೆಗೆ ಶಿಕ್ಷಣ ಸಭೆ ಆರಂಭವಾದಾಗ ಆಲಿ ಸಾಹೇಬರ ಮನೆಯ ಸುತ್ತುಮುತ್ತಲಿನ ಮನೆಗಳಿಂದೆಲ್ಲ ಉಚ್ಚ ಸ್ವರದಲ್ಲಿ ಟೇಪ್ ರಿಕಾರ್ಡ್ ಹಾಡುಗಳು ಕೇಳಿಬಂದುವು. ಸಭಿಕರಿಗೆ ಭಾಷಣ ಆಲಿಸಲು ತೊಂದರೆಯಾದ ಕಾರಣ ಮೌಲ್ವಿ ಮಹ್ಮೂದ್ ಅಹ್ಮದ್ ಸಾಹೇಬ್ ಸ್ವಲ್ಪ ಗಟ್ಟಿಯಾಗಿ ಮಾತನಾಡಲು ಆರಂಭಿಸಿದರು. ಆಗ ವಿರೋಧಿಗಳು ಬಂದು, ಹಾಗೆ ಗಟ್ಟಿಯಾಗಿ ಮಾತನಾಡುವುದನ್ನು ತಡೆಯಲು ವಿಫಲ ಪ್ರಯತ್ನ ಮಾಡಿದರು. ಶಾಮಿಯಾನ ಮತ್ತು ಇತರ ಪೀಠೋಪಕರಣಗಳನ್ನು ಬೆಂಕಿಗಾಹುತಿ ಮಾಡಲಾಗುವುದೆಂದು ಬೆದರಿಸಿದರು. ಅಹ್ಮದೀಯರು ಮಾರ್ಗದಲ್ಲಿ ನಡೆದಾಡುವಾಗ ಕಿರುಕುಳ ಕೊಡಲಿಕ್ಕೂ, ಅಪಹಾಸ್ಯ ಮಾಡಲಿಕ್ಕೂ ತೊಡಗಿದರು. ಶಿಕ್ಷಣ ಸಭೆ ಮಧ್ಯಾಹ್ನ 1 ಗಂಟೆಗೆ ಕೊನೆಗೊಂಡಿತು. ಸಭೆಯಲ್ಲಿ ಅಮೀರ್ ಸಾಹೇಬ್, ಮೌ। ಮುಹಮ್ಮದ್ ಉಮರ್ ಸಾಹೇಬ್, ಮೌ। ಅಬುಲ್ ವಫಾ ಸಾಹೇಬ್ ಮತ್ತು ಎಂ. ಪಿ. ಇಬ್ರಾಹಿಂ ಸಾಹೇಬ್ ಮಾತನಾಡಿದರು. ಕೆ. ಎಂ. ಆಲಿ ಸಾಹೇಬ್ ಕೃತಜ್ಞತೆ ಸಲ್ಲಿಸಿದರು.

ಸಭೆ ಮುಗಿದ ಬಳಿಕ ಅಲ್ಲೇ ಓರ್ವ ವ್ಯಕ್ತಿ ಬೈಅತ್ ಪ್ರತಿಜ್ಞೆ ಮಾಡಿ ಅಹ್ಮದಿಯಾ ಜಮಾಅತಿಗೆ ಸೇರಿದರು. ಅಲ್‌ಹಮ್ದುಲಿಲ್ಲಾಹ್.

# ಭೂಕಂಪ ಪೀಡಿತರಿಗೆ 2 ಲಕ್ಷ ರೂಪಾಯಿ ಕೊಡುಗೆ

ಮಹಾರಾಷ್ಟ್ರದಲ್ಲಿ ಸಂಭವಿಸಿದ ಭೂಕಂಪ ಪೀಡಿತರ ಸಹಾಯಾರ್ಥ ಭಾರತದ ಅಹ್ಮದಿಯಾ ಮುಸ್ಲಿಂ ಸಂಘಟನೆಯು ವತಿಯಿಂದ 2 ಲಕ್ಷ ರೂಪಾಯಿಗಳನ್ನು ಒಕ್ಟೋಬರ್ 15ರಂದು ಪ್ರಧಾನ ಮಂತ್ರಿ ಪಿ. ವಿ. ನರಸಿಂಹ ರಾವ್‌ರಿಗೆ ಒಪ್ಪಿಸಲಾಯಿತು.

ಪ್ರಧಾನ ಮಂತ್ರಿಯನ್ನು ಭೇಟಿಯಾದ ನಿಯೋಗವು ಅಹ್ಮದಿಯಾ ಸಂಘಟನೆಯ ಖಲೀಫ ಮಿರ್ಝಾ ತಾಹಿರ್ ಅಹ್ಮದ್‌ರವರ ಸಂತಾಪವನ್ನು ಸಹ ಅವರಿಗೆ ಸೂಚಿಸಿತು.

ಅಹ್ಮದಿಯಾ ಸಂಘಟನೆ ಮತ್ತು ಅದರ ಚಟುವಟಿಕೆಗಳ ಬಗ್ಗೆ ತನಗೆ ಚೆನ್ನಾಗಿ ಗೊತ್ತಿದೆ ಎಂದು ಹೇಳಿದ ಪ್ರಧಾನ ಮಂತ್ರಿ ಅಹ್ಮದಿಯಾ ಕೊಡುಗೆಗೆ ಕೃತಜ್ಞತೆ ಸೂಚಿಸಿದರು.

**ಕವಿತೆ**

## — ಸತ್ಯ ಸಂದೇಶ —

ಸತ್ಯವು ನಮ್ಮ ಸಂಘಟನೆ
ಸತ್ಯವೇ ನಮ್ಮ ಸಂದೇಶ
ಸತ್ಯವನ್ನು ಕಂಡು ಕೋ
ಸತ್ಯವನ್ನೇ ಕಲಿತು ಕೋ
ಸತ್ಯವು ನಮ್ಮ ಮಂತ್ರವು
ಶಾಂತಿಯೇ ನಮ್ಮ ಮೈತ್ರಿಯು

ಸತ್ಯ ನೀಡಿತು ಸೊಗಡು
ಮಿಥ್ಯ ಮಾಡಿತು ಮಿಡುಕು
ಸತ್ಯವನ್ನೇ ನೆಟ್ಟು ಕೊಂಡು
ಮಿಥ್ಯವನ್ನು ಬಿಟ್ಟು ಕೊಂಡು
ಸನ್ಮಾರ್ಗವ ಕೂಡು ನೀ
ದುರ್ಮಾರ್ಗವ ದೂಡು ನೀ

ಸತ್ಯದೂತನ ದಮನ
ದುಷ್ಟ ಜನರ ಗಮನ
ದುಃಖ ದುಗುಡದಲಿ ಅಂತ್ಯ
ಘಟಿಸಿತು ಈ ತಥ್ಯ
ಸತ್ಯ "ಮಹ್‌ದಿ"ಗೆ ಸಾಕ್ಷ್ಯವಾಗಿ
ಸ್ಪಷ್ಟ ದೃಷ್ಟಾಂತ ದೃಶ್ಯವಾಗಿ

ಸತ್ಯದ ಸಂಘಕ್ಕೆ ಸೇರಿಲ್ಲ ನೀನೇತಕ್ಕೆ
ಶಾಂತಿಯ ಕೂಟಕ್ಕೆ ಕೂಡಿಲ್ಲ ನೀನೇತಕ್ಕೆ
ಚಿಂತನ ಮಂಥನ ಮಾಡು ನೀ
ಶೋಧನ ಸಾಧನ ಸಾಗು ನೀ
ಖಂಡಿಸಿ ಮಂಡಿಸಿ ಸತ್ಯವ ಸಾಧಿಸು
ಶುದ್ಧಿಯ ಶಾಂತಿಯ ಸತ್ಯದಿ ಸಿದ್ಧಿಸು.

– ರಶೀದ್ ಅಹ್ಮದ್ ಸಿದ್ದೀಖ್
ಮಂಗಳೂರು.

Muhammad Yusuf B.COM.
MANJESHWAR



# ಜನಾಬ್ ಜಿ. ಕೋಯಹಸನ್ ಸಾಹೇಬ್

ಬಜ್ಪೆಯ ಕರಂಬಾರ್ ನಿವಾಸಿಯಾದ ಜನಾಬ್ ಜಿ. ಕೋಯಹಸನ್ ಸಾಹೇಬರು ಕಳೆದ ನವೆಂಬರ್ 20 ರಂದು ಸ್ವಗೃಹದಲ್ಲಿ ನಿಧನರಾದರು. (ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್),

ದಿವಂಗತರಿಗೆ ಸುಮಾರು 90 ವರ್ಷ ಪ್ರಾಯವಾಗಿತ್ತು. 1951ರಲ್ಲಿ ಮಡಿಕೇರಿಯಲ್ಲಿ ಅಹ್ಮದಿಯಾ ಮುಬಲ್ಲಿಗ್ ಮೌಲಾನಾ ಬಿ. ಅಬ್ದುಲ್ಲಾಹ್ ಸಾಹೇಬ್ ಎಚ್. ಎ. ಮತ್ತು ಸುನ್ನೀ ಧರ್ಮಪಂಡಿತರುಗಳಾದ ಇ. ಕೆ. ಅಬೂಬಕರ್ ಮುಸ್ಲಿಯಾರ್, ಪದಿ ಅಬ್ದುಲ್ ಖಾದಿರ್ ಮುಸ್ಲಿಯಾರ್ ಇವರೊಳಗೆ ನಡೆದ ವಾದ–ಪ್ರತಿವಾದದ ಫಲವಾಗಿ ಅಲ್ಲಿ ಹಲವು ಮಂದಿ ಅಹ್ಮದಿಯತ್ ಸ್ವೀಕರಿಸಿದರು. ಆ ಪೈಕಿ ಎರಡನೇ ತಂಡದಲ್ಲಿ ಕೋಯಹಸನ್ ಸಾಹೇಬರು ಸೇರುತ್ತಾರೆ. ಅವರು ತುಂಬಾ ಸೌಮ್ಯಶೀಲ ವ್ಯಕ್ತಿಯಾಗಿದ್ದರು. ದಿವಂಗತರು ಪತ್ನಿ, ಮೂವರು ಪುತ್ರರು, ಮೂವರು ಪುತ್ರಿಯಂದಿರು ಮತ್ತು ಅನೇಕ ಬಂಧು ಮಿತ್ರಾದಿಗಳನ್ನು ಅಗಲಿದ್ದಾರೆ.

ಗೋವೆಯಲ್ಲಿ ದೂರವಾಣಿ ಇಲಾಖೆಯಲ್ಲಿ ಎಕೌಂಟ್ಸ್ ಆಫೀಸರ್ ಆಗಿರುವ ಕೆ. ಅಬ್ದುಲ್ ರಝಾಕ್ ಸಾಹೇಬ್, ಫುಜೇರದಲ್ಲಿ ಫುಜೇರ ಸಿಮೆಂಟ್ ಫ್ಯಾಕ್ಟರಿಯಲ್ಲಿ ಅಧಿಕಾರಿಯಾಗಿರುವ ಕೆ. ಕೆ. ಬದ್ರುದ್ದೀನ್ ಸಾಹೇಬ್ ಮತ್ತು ಕರಂಬಾರಿನಲ್ಲಿ ಅಂಗಡಿ ವ್ಯಾಪಾರಿಯಾಗಿರುವ ಕೆ. ಅಬ್ದುಲ್ ಕರೀಂ ಸಾಹೇಬ್ ಅವರ ಪುತ್ರರು. ಕಲ್ಲಿಕೋಟೆಯ ಮಮ್ಮು ಸಾಹೇಬ್, ಪುತ್ತೂರಿನ ಯು. ಎಸ್. ಮಾಹಿನ್ ಕುಞ್ಞಿ ಸಾಹೇಬ್ ಮತ್ತು ವಿಟ್ಲದ ದಿವಂಗತ ಜಿ. ಎಸ್. ಸುಲೈಮಾನ್ ಸಾಹೇಬ್ ಅವರ ಅಳಿಯಂದಿರು.

ದಿವಂಗತರಿಗೆ ಅಲ್ಲಾಹನು ಮಗ್‌ಫಿರತನ್ನು ಕರುಣಿಸಲಿ. ಆಮೀನ್

## ಇಸ್ಲಾಂ ಧರ್ಮ ತತ್ವಜ್ಞಾನ

□ ಮಾನವನ ಶಾರೀರಿಕ, ನೈತಿಕ ಮತ್ತು ಆಧ್ಯಾತ್ಮಿಕ ಸ್ಥಿತಿಗಳು
□ ಮಾನವನ ಮರಣಾನಂತರ ಸ್ಥಿತಿ
□ ಮಾನವನ ಐಹಿಕ ಜೀವಿತೋದ್ದೇಶ ಮತ್ತು ಅವನ್ನು ಗಳಿಸುವ ಮಾರ್ಗಗಳು
□ ಧರ್ಮನಿಯಮಾನುಸರಣೆ ಇಹ ಪರ ಜೀವಿತದಲ್ಲಿ ಉಂಟುಮಾಡುವ ಫಲಗಳು
□ ದೈವಿಕ ಜ್ಞಾನ ಸಿದ್ಧಿಯ ಮಾರ್ಗಗಳು

ಈ ವಿಷಯಗಳನ್ನು ಪ್ರತಿಪಾದಿಸುವ ಒಂದು ಉತ್ಕೃಷ್ಟ ಕೃತಿ.

ಗ್ರಂಥಕರ್ತ: **ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**

ಬೆಲೆ: ರೂ. 25 ಅಂಚೆವೆಚ್ಚ: 1-50

ವ್ಯವಹರಿಸಿರಿ: **ಜಮಾಅತ್ ಅಹ್ಮದಿಯಾ**
10-23-1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಮಂಗಳೂರು–575 001.

**ದೇವಾಸ್ತಿತ್ವವನ್ನು ರುಜುಗೊಳಿಸುವ, ಧರ್ಮಗಳ ಆವಶ್ಯಕತೆಯನ್ನು ಸಾರುವ, ಆಧ್ಯಾತ್ಮಿಕ ಜ್ಞಾನವನ್ನು ಜನರ ಹೃದಯಗಳಲ್ಲಿ ಮೂಡಿಸುವ ಒಂದು ಉತ್ಕೃಷ್ಟ ತ್ರೈಮಾಸ ಪತ್ರಿಕೆ-**

# ಯುಗರಶ್ಮಿ

ಯಥಾರ್ಥ ಇಸ್ಲಾಂ ಮತ್ತು ಅಹ್ಮದಿಯಾ ಸಂಘಟನೆಯ ಸೇವೆಗಾಗಿ ಮೀಸಲಾಗಿರಿಸಿದ "ಯುಗರಶ್ಮಿ" ತ್ರೈಮಾಸಿಕವು ವಿವಿಧ ಧರ್ಮಗಳ ತುಲನಾತ್ಮಕ ಪಠನಾಸಕ್ತರಿಗೆ ಒಂದು ಉತ್ತಮ ಪತ್ರಿಕೆಯಾಗಿದೆ.

ದೇವಾಸ್ತಿತ್ವ, ಇತರ ಧರ್ಮ ಮತ್ತು ಧರ್ಮಾಚಾರ್ಯರ ಕುರಿತು ಇಸ್ಲಾಮಿನ ವೀಕ್ಷಣೆ, ಕೋಮು ಸೌಹಾರ್ದದ ಮಾರ್ಗಗಳು, ಇಸ್ಲಾಮಿನ ತತ್ತ್ವೋಪದೇಶಗಳು, ಮಾನವ ಕುಲದ ಏಳಿಗೆಗೆ ಇಸ್ಲಾಮಿನ ಕೊಡುಗೆ, ಇಂದಿನ ಆಧ್ಯಾತ್ಮಿಕ ಅಧಃಪತನ ಮತ್ತು ಪುನರುಜ್ಜೀವನ ಮಾರ್ಗಗಳು ಮೊದಲಾದ ವಿಷಯಗಳ ಕುರಿತು ಲೇಖನ ಪರಾಮರ್ಶೆಗಳನ್ನು ಈ ಪತ್ರಿಕೆಯ ಪ್ರತಿ ಸಂಚಿಕೆಯಲ್ಲೂ ಕಾಣಬಹುದು.

**ಬಿಡಿ ಪ್ರತಿ : ರೂ. 3-00** | **ವಾರ್ಷಿಕ ಚಂದಾ : ರೂ. 12-00**

**ಅಂಚೆ ಮೂಲಕ : ರೂ. 14-00**

**ವ್ಯವಹರಿಸಿರಿ :**

The Editor
**YUGARASHMI** Kannada Quarterly
10-23-1008/1, Ansari Road
Bunder, Mangalore-575 001.

---

**ಓದಿರಿ -**

ಬೆಲೆ

★ **ಅಹ್ಮದಿಯಾ ಜಮಾಅತ್** — ರೂ. 1

★ ಪವಿತ್ರ ಖುರ್‌ಆನಿನ ಪ್ರಕಾಶದಲ್ಲಿ
**ಹ। ಈಸಾನಬಿ(ಅ)ಯ ಜೀವಿತ ಮತ್ತು ಮರಣ** — ರೂ. 1

★ **ಖತಮುನ್ನುಬುವ್ವತ್**
ಪೂರ್ವಿಕ ಮಹಾತ್ಮರುಗಳ ದೃಷ್ಟಿಯಲ್ಲಿ — ರೂ. 1

(ಅಂಚೆ ವೆಚ್ಚ ಪ್ರತ್ಯೇಕ)

ವ್ಯವಹರಿಸಿರಿ: **ಜಮಾಅತ್ ಅಹ್ಮದಿಯಾ**
10-23-1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಮಂಗಳೂರು-575 001.

Regd. with the Registrar of Newspapers for India No. R. N. 27354/75
YUGARASHMI Kannada Quarterly, December 1993/Fatah 1372


# ಸ್ಟ್ಯಾಂಡರ್ಡ್ ಟೈಲರಿ

ಕಡೂರು, ಚಿಕ್ಕಮಗಳೂರು ಜಿಲ್ಲೆ

## ರಾಜಾ ಮಾರ್ಕಿನ ಹಂಚುಗಳು

ಚಾವಣಿ ಹಂಚು, ಮೂಲೆ ಹಂಚು, ಗೋಡೆ ಹಂಚು, ಹಾಸು ಹಂಚು, ಮೆತ್ತಡ ಹಂಚು, ಅಲಂಕಾರಿಕ ಹಂಚು ಮೊದಲಾದ ಎಲ್ಲ ತರದ ಆವೆಮಣ್ಣಿನ ಉತ್ಪನ್ನಗಳು ದೊರೆಯುತ್ತವೆ.

# STANDARD TILERY

KADUR,
CHICKMAGALUR DISTRICT

# RAJA MARK

**Roofing Tiles, Ridges, Wall Tiles, Span Tiles
Floorings, Decorative Tiles, Ceilings Etc., Etc.**

## ALL CLAY PRODUCTS AVAILABLE


Edited and Published by Muhammad Yusuf on behalf of Jamath Ahmadiyya
at 10-23-10008/1 Ansari Road, Bunder, Mangalore-575 001. Phone: 32039
Printed at Karavali Printers, Azizuddin Road, Bunder, Mangalore-575 001. Phone: 420317